# ಪ್ರೇಮ ವಾಹಿನಿ

ತೆಲುಗು ಮೂಲ

**ಭಗವಾನ್ ಶ್ರೀ ಸತ್ಯಸಾಯಿ ಬಾಬಾ**

ಇಂಗ್ಲಿಷ್ ಸಂಕಲನ

**ನಾ. ಕಸ್ತೂರಿ**

ಕನ್ನಡ ಅನುವಾದ

**ಆರ್. ಎಲ್. ಅನಂತರಾಮಯ್ಯ**

**ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ (ರಿ)**
'ಸುಧಾಮ ಹೌಸ್', ಚಿಕ್ಕಪೇಟೆ, ಬೆಂಗಳೂರು ೫೬೦೦೫೩
೨೦೧೮

*Prema Vahini* by Bhagavan Sri Sathya Sai Baba. Compiled by N. Kasturi. Translated into Kannada by R.L. Anantharamaiah. Published by Sri Sathya Sai Publications Society (R), 'Sudhama House', Chickpet, Bengaluru 560 053, India. Demy octavo, Pages x+74.

© 2018
Sri Sathya Sai Publications Society, Bengaluru, India

೦೬/೨೦೧೮ (೨೦೦೦ ಪ್ರತಿಗಳು)

ಪುಟಗಳು : ೮೪

**ಬೆಲೆ : ₹ 20**

ಮುದ್ರಣ : ಪದ್ಮ ಶೇಖರ್ ಪ್ರಿಂಟರ್ಸ್, ಮೈಸೂರು; ✆ 98865 05878

ಬೇರೆ ಬೇರೆ ಧರ್ಮಗಳೆಲ್ಲ ಇರಲಿ,
ಎಲ್ಲ ಧರ್ಮಗಳೂ ವರ್ಧಿಸಲಿ,
ಭಗವಂತನ ಮಹಿಮೆಯನ್ನು ಎಲ್ಲ ಭಾಷೆಗಳಲ್ಲೂ
ವಿವಿಧ ರಾಗಗಳಲ್ಲೂ ಹಾಡಲಿ.
ಧರ್ಮ ಧರ್ಮಗಳ ವ್ಯತ್ಯಾಸ ವೈಶಿಷ್ಟ್ಯಗಳನ್ನು ಗೌರವಿಸಿ.
ಭಾವೈಕ್ಯತೆಯ ಬೆಳಕನ್ನು ನಂದಿಸದಿರುವ
ಧರ್ಮಗಳೆಲ್ಲ ಸತ್ವಯುತ ಎಂದು ಮನ್ನಿಸಿ.

**ಶ್ರೀ ಸತ್ಯಸಾಯಿ ಬಾಬಾ**

ಓಂ ಬ್ರಹ್ಮಾಂಡಕ್ಕೆ ಮೂಲವಾದ ಆದಿಮ ಶಬ್ದ. ಓಂಕಾರವು ಅನಾಹತ ಶಬ್ದ. ನಿಮ್ಮ ಹೃದಯದಲ್ಲೂ ವಿಶ್ವದ ಹೃದಯದಲ್ಲೂ ಸದಾ ನಿನದಿಸುತ್ತಿರುವ ಅದನ್ನು ಆಲಿಸಿರಿ.

ಅಹಂಕಾರವನ್ನು ಕತ್ತರಿಸಿ. ಅದು ಶಿಲುಬೆಯ ಮೇಲೆ ಅಳಿದು ಹೋಗಲಿ. ನಮಗೆ ಅಮರತ್ವವನ್ನು ತರಲಿ.

ಕಾರಣ–ಪರಿಣಾಮ, ಕಾರ್ಯ–ಅದರ ಫಲ—ಇವುಗಳ ಚಕ್ರವನ್ನು ಸದಾ ನೆನಪಿನಲ್ಲಿಡಿ.

ಚಂದ್ರನಿಂದ ದೂರ ಸರಿಯದ ನಕ್ಷತ್ರದ ಹಾಗೆ ನೀವೂ ಭಗವಂತನಿಂದ ಅತ್ತಿತ್ತ ಅಲುಗದೆ ಸ್ಥಿರವಾದ ಶ್ರದ್ಧೆಯನ್ನು ಬೆಳೆಸಿಕೊಳ್ಳಿರಿ.

ಬದುಕಿನ ಕಹಿಯೆಲ್ಲವನ್ನು ಈ ಪವಿತ್ರಾಗ್ನಿಯಲ್ಲಿ ಸಮರ್ಪಿಸಿ ಭವ್ಯರಾಗಿ, ಮಹಾನ್ ಆಗಿ ಪರಿಣಮಿಸಿರಿ.

# ಪರಿವಿಡಿ


ಸಂಪಾದಕರ ಮಾತು vii

ಮುನ್ನುಡಿ ix

೧ ಸಾಧನಾಮಾರ್ಗದ ಉದಾತ್ತ ಗುಣಗಳು . . . . . . . . . . . . ೧

೨ ಗ್ರಂಥಾಧ್ಯಯನ ಮತ್ತು ಏಕಾಗ್ರತೆ . . . . . . . . . . . . . . ೩

೩ ಸಮದೃಷ್ಟಿಯೇ ಶುಭದೃಷ್ಟಿ . . . . . . . . . . . . . . . . ೪

೪ ಸಾಧನೆ–ಜೀವನ ವಿಧಾನ . . . . . . . . . . . . . . . . . ೫

೫ ಮಾನವ ಜೀವಿತ . . . . . . . . . . . . . . . . . . . . . ೬

೬ ಭಕ್ತಿ ಮತ್ತು ಜ್ಞಾನಗಳ ಸಂವಾದಿತ್ವ . . . . . . . . . . . . . . ೮

೭ ಮಾನವನ ಕರ್ತವ್ಯಗಳು . . . . . . . . . . . . . . . . . . ೯

೮ ಸದ್ಗುಣವೇ ಜ್ಞಾನ . . . . . . . . . . . . . . . . . . . . ೧೦

೯ ಸತ್ಯವೇ ದೇವರು . . . . . . . . . . . . . . . . . . . . ೧೧

೧೦ ಅಹಂಕಾರವು ಅಶಾಂತಿಗೆ ಕಾರಣ . . . . . . . . . . . . ೧೩

೧೧ ಭಕ್ತಿ ಮಾರ್ಗದ ಸಾಧಕರು . . . . . . . . . . . . . . . . . ೧೫

೧೨ ವಿಗ್ರಹಾರಾಧನೆ . . . . . . . . . . . . . . . . . . . . . ೧೭

೧೩ ಅಧ್ಯಯನ . . . . . . . . . . . . . . . . . . . . . . . . ೧೮

೧೪ ಸನಾತನ ವಿದ್ಯೆಯ ಆವಶ್ಯಕತೆ . . . . . . . . . . . . . . . ೧೯

೧೫ ವಸ್ತು ಜಗತ್ತು ಸತ್ಯವಲ್ಲ . . . . . . . . . . . . . . . . . . ೨೨

೧೬ ಜೀವನವು ಸಂಸ್ಕಾರಗಳನ್ನವಲಂಬಿಸಿದ ಯಾತ್ರೆ . . . . . . . ೨೪

೧೭ ಸನಾತನ ಧರ್ಮವು ಮಾನವತೆಯ ದಿವ್ಯ ಮಾತೆ . . . . . . . ೩೦

೧೮ ಸರ್ವಾಂತರ್ಯಾಮಿಯು ಒಬ್ಬನು, ಒಬ್ಬನೇ ಒಬ್ಬನು . . . . . . . ೩೫

೧೯ ಭಕ್ತಿಯ ಬೀಜಗಳು ಮೊಳೆಯುತ್ತವೆ . . . . . . . . . . . . . ೩೯

೨೦ ಇಂದು ಸಾಧಕನದು ನಾಳೆ ಯಾರದೊ? . . . . . . . . . . . ೪೦

೨೧ ಭಕ್ತನು ಮುಕ್ತನಾಗಲು ದಾರಿ . . . . . . . . . . . . . . . ೪೧

೨೨ ಮಾನವ, ದಾನವ ಗುಣಭೇದಗಳು . . . . . . . . . . . . . ೪೫

೨೩ ಇಂದಿನ ವಾಕ್ಕು, ಅಂದಿನ ವಾಕ್ಕೇ . . . . . . . . . . . . . . . ೪೭
೨೪ ಭಕ್ತಿಯು ಎರಡು ಬಗೆ . . . . . . . . . . . . . . . . . . . . . ೪೯
೨೫ ವಾನಪ್ರಸ್ಥ . . . . . . . . . . . . . . . . . . . . . . . . ೫೧
೨೬ ಮುಕ್ತಿಯು ನಾಲ್ಕು ಬಗೆ . . . . . . . . . . . . . . . . . . . ೫೪
೨೭ ಸತ್ ಸಂಕಲ್ಪವು ಸಾನ್ನಿಧ್ಯಕ್ಕೆ ದಾರಿ . . . . . . . . . . . . . . . ೫೫
೨೮ ಪುಣ್ಯಕಾರ್ಯಗಳೇ ಪುರುಷಾರ್ಥವು . . . . . . . . . . . . . . . ೫೬
೨೯ ಸಚ್ಚಾರಿತ್ರವೇ ಮಾನವ ಬದುಕಿನ ರತ್ನ . . . . . . . . . . . . ೫೭
೩೦ ಸಹಜ ಮಾರ್ಗ, ಸಾಧನ ಮಾರ್ಗಗಳು ಒಂದೇ ಅಲ್ಲ . . . . . ೫೯
೩೧ ಸಾಧಕನು ಪಡೆಯುವ ಬೆಳೆ . . . . . . . . . . . . . . . . . ೬೦
೩೨ ಸಾಧಕನು ಬಿಟ್ಟುಕೊಡಬೇಕಾದುದು . . . . . . . . . . . . . ೬೨
೩೩ ಅಂದಿನ ಕ್ಷೇಮ, ಇಂದಿನ ಕ್ಷಾಮಕ್ಕೆ ಕಾರಣಗಳು . . . . . . . ೬೫

# ಸಂಪಾದಕರ ಮಾತು

೧೯೬೧ರಲ್ಲಿ ನಾ. ಕಸ್ತೂರಿಯವರ 'ಸತ್ಯಂ ಶಿವಂ ಸುಂದರಂ' ಎಂಬ ಶ್ರೀ ಸತ್ಯಸಾಯಿ ಬಾಬಾರವರ ಅದುವರೆಗಿನ ಜೀವನ ವೃತ್ತಾಂತ ಪ್ರಕಟವಾಯಿತು. ಅದೇ ಸತ್ಯಸಾಯಿ ಸಾಹಿತ್ಯದ ಅಧಿಕೃತವಾದ ಮೊದಲ ಪುಸ್ತಕ. ಅಂದಿನಿಂದ ಈವರೆಗೆ ಈ ಸಾಯಿ ಸಾಹಿತ್ಯ ವಿಪುಲವಾಗಿ ವೈವಿಧ್ಯಮಯವಾಗಿ, ಬೆಳೆದಿದೆ, ಬೆಳೆಯುತ್ತಿದೆ.

ಸಾರ್ವಕಾಲಿಕವೂ ನಿತ್ಯನೂತನವೂ ಆದ ಸನಾತನ ಧರ್ಮವನ್ನು ಪುನಃ ಚೇತನ ಗೊಳಿಸಲೆಂದೇ ಅದೂ ಅತ್ಯಗತ್ಯವಾದಾಗ ತಾನೇ ಅವತರಿಸಿ ಬರುವುದಾಗಿ ಅಭಯ ವಚನವನ್ನಿತ್ತಿರುವ ಭಗವಂತ ಹಾಗೆ ಅವತರಿಸುವಾಗ ಸರ್ವಸನ್ನದ್ಧನಾಗಿ ಸಪರಿವಾರ ಸಮೇತನಾಗಿ ಈ ಲೋಕಕ್ಕಿಳಿಯುತ್ತಾನೆಂಬುದು ಕ್ರಮಕ್ರಮವಾಗಿ ಭಕ್ತರಿಗೆ, ಜ್ಞಾನಿಗಳಿಗೆ, ಸಂತರಿಗೆ ಅನುಭವವಾಗುತ್ತದೆ. ಅವತಾರ ಕಾಲದಲ್ಲಿ ನಡೆಯಬೇಕಾದ ಎಲ್ಲ ಕಾರ್ಯಗಳ ಬೃಹತ್ ಯೋಜನೆ ಮೊದಲೇ ಸಿದ್ಧವಾಗಿ ದ್ದರೂ ಭಗವತ್ಸಂಕಲ್ಪದಂತೆ ಅದರ ಒಂದೊಂದೇ ಕಾರ್ಯ, ಒಂದೊಂದೇ ಮಜಲು ಕಾಲಾನುಕ್ರಮವಾಗಿ ತೆರೆದುಕೊಳ್ಳುತ್ತಾ ಹೋಗುತ್ತದೆ. ಆ ವೈವಿಧ್ಯಮಯ ಕಾರ್ಯಕ್ರಮಗಳಲ್ಲಿ ಎಲ್ಲರ ಹೃದಯಗಳನ್ನೂ ಸೆಳೆದುಕೊಳ್ಳುವ, ಎಲ್ಲರ ಮನ ವನ್ನೂ ಮುಟ್ಟಬೇಕಾದ ದಿವ್ಯ ಸಂದೇಶ ಪ್ರಸಾರವೂ ಒಂದು.

ಹೀಗೆ ಶ್ರೀ ಸತ್ಯಸಾಯಿ ಸಂದೇಶವನ್ನು ಜನ ಮಾನಸಕ್ಕೆ ತಲುಪಿಸಲು, ತನ್ಮೂಲಕ ವ್ಯಕ್ತಿಯಲ್ಲಿ ಹಾಗೂ ಸಮಾಜದಲ್ಲಿ ಪರಿವರ್ತನೆಯನ್ನುಂಟು ಮಾಡುವುದಕ್ಕಾಗಿ ೧೯೫೮ರಲ್ಲಿ ಶಿವರಾತ್ರಿಯ ಶುಭ ಸಂದರ್ಭದಲ್ಲಿ 'ಸನಾತನ ಸಾರಥಿ' ಎಂಬ ಅರ್ಥಪೂರ್ಣ ಶೀರ್ಷಿಕೆ ಹೊತ್ತ ಮಾಸಪತ್ರಿಕೆ ಆರಂಭವಾಯಿತು. ಪತ್ರಿಕೆಯ ಧ್ಯೇಯೋದ್ದೇಶಗಳನ್ನು ಸಂದೇಶವೊಂದರ ಮೂಲಕ ಸ್ವಾಮಿ ನಿರೂಪಿಸಿದರು. ಸತ್ಯ, ಧರ್ಮ, ಶಾಂತಿ, ಪ್ರೇಮ ಮತ್ತು ಅಹಿಂಸೆ ಎಂಬ ಪಂಚ ಮೂಲಭೂತ ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ದುರ್ಲಭವಾದ, ಆದರೆ ಕೃಪೆ ಹಾಗೂ ಪುಣ್ಯಬಲದಿಂದ ಲಭಿಸಿರುವ, ಮಾನವ ಜೀವನವನ್ನು ಸಾರ್ಥಕಪಡಿಸಿಕೊಳ್ಳುವ ಸಾಧನೆಯಲ್ಲಿ ತೊಡಗುವ ಹಾಗೆ ಆತ್ಮಜಾಗೃತಿ ಮಾಡು ವುದೇ ಈ ಪತ್ರಿಕೆಯ ಉದ್ದೇಶ.

ಮಹಾಮಹಾಪಂಡಿತರ ವ್ಯಾಖ್ಯಾನ ವಿವರಣೆಗಳಿಂದ ಕ್ಲಿಷ್ಟ ಇಲ್ಲವೆ ಗೊಂದಲ ಮಯವಾಗಿರುವ ತತ್ವಗಳನ್ನು, ಅನುಷ್ಠಾನ ಸುಲಭವಾಗಿರುವ ಜೀವನ ಮೌಲ್ಯ ಗಳನ್ನು, ಜನಸಾಮಾನ್ಯರಿಗೂ ತಿಳಿಯುವ ಹಾಗೆ ಸರಳವಾಗಿ ಶ್ರೀ ಸತ್ಯಸಾಯಿ ಬಾಬಾ ಅವರು ಪ್ರೇಮ ವಾಹಿನಿ, ಉಪನಿಷತ್ ವಾಹಿನಿ, ಭಾಗವತ ವಾಹಿನಿ ಮುಂತಾದ ಹದಿನೈದು ವಾಹಿನಿಗಳಾಗಿ ಭಕ್ತರ ಹೃದಯಗಳಿಗೆ ಹರಿಸಿ ದಾಹವನ್ನು ಪರಿಹರಿಸಿದ್ದಾರೆ. ಈ ಎಲ್ಲ ವಾಹಿನಿಗಳೂ ಸನಾತನ ಸಾರಥಿಯಲ್ಲಿ ಧಾರಾವಾಹಿ

ಯಾಗಿ ಬಂದು ನಂತರ ಪುಟ್ಟ ಪುಟ್ಟ ಪುಸ್ತಕಗಳಾಗಿ ಎರಡು ಬಾರಿ ಕನ್ನಡದಲ್ಲಿ ಮುದ್ರಣಗೊಂಡಿವೆ.

ಪ್ರೇಮದಿಂದ ಮಾತ್ರವೇ ಶ್ರದ್ಧೆಯು ಸ್ಥಿರಗೊಳ್ಳುವುದು ಸಾಧ್ಯ; ಶ್ರದ್ಧೆಯ ಮೂಲಕ ಮಾತ್ರವೇ ಜ್ಞಾನವನ್ನು ಪಡೆಯಬಹುದು; ಜ್ಞಾನದಿಂದ ಮಾತ್ರವೇ ಪರಾಭಕ್ತಿ ಖಚಿತವಾಗುತ್ತದೆ. ಪರಾಭಕ್ತಿಯಿಂದ ಮಾತ್ರವೇ ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದು ಸಾಧ್ಯ ಎಂದು ಸ್ವಾಮಿಯವರು ಪ್ರೇಮ ವಾಹಿನಿಯಲ್ಲಿ ತಿಳಿಸಿದ್ದಾರೆ.

ಶ್ರೀ ಸತ್ಯಸಾಯಿ ಸಾಹಿತ್ಯದ ಎಲ್ಲಾ ಶ್ರೇಷ್ಠ ಪುಸ್ತಕಗಳನ್ನೂ ಕನ್ನಡದಲ್ಲಿ ತರುವ ನೂತನ ಯೋಜನೆಯ ಮೊದಲ ಹೆಜ್ಜೆಯಾಗಿ,'ಶ್ರೀ ಸತ್ಯಸಾಯಿ ಸಾಹಿತ್ಯ ರತ್ನ ಮಾಲಾ' ಎಂಬ ಕಿರು ಪುಸ್ತಕಗಳ ಮಾಲೆಯನ್ನು ೨೦೦೨ನೆಯ ಗುರುಪೂರ್ಣಿಮೆಯ ದಿನ 'ಪ್ರಶಾಂತಿ ನಿಲಯಂ (ಪುಟ್ಟಪರ್ತಿ)' ಮತ್ತು 'ವಾಕ್ಯ ವಿಭೂತಿ' ಎಂಬೆರಡು ಪುಸ್ತಿಕೆಗಳ ಪ್ರಕಟಣೆಯೊಂದಿಗೆ ಆರಂಭಿಸಲಾಯಿತು. ಪ್ರಶಾಂತಿ ನಿಲಯಂನಲ್ಲಿ ಸ್ವಾಮಿ ತಮ್ಮ ದಿವ್ಯ ಹಸ್ತದಿಂದ ಇವುಗಳನ್ನು ಬಿಡುಗಡೆ ಮಾಡಿದ್ದಾರೆ. ಈ ಕೃಪೆಗಾಗಿ ನಾವೆಲ್ಲರೂ ಅವರಿಗೆ ಕೃತಜ್ಞರಾಗಿದ್ದೇವೆ.

ಸಲಹಾ ಸಮಿತಿಯ ಸದಸ್ಯರೆಲ್ಲರೂ ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದಾರೆ. ಹಿರಿಯ ಸಾಯಿ ಬಂಧುಗಳಾದ ಶ್ರೀ. ವೈ. ಎನ್. ಗಂಗಾಧರ ಶೆಟ್ಟಿ, ಅಧ್ಯಕ್ಷರು, ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ(ರಿ), ಬೆಂಗಳೂರು ಮತ್ತು ಇದರ ಉಪಾಧ್ಯಕ್ಷರಾದ ಶ್ರೀ. ನಾಗೇಶ್ ಜಿ. ಢಾಕಪ್ಪ ಇವರ ಮಾರ್ಗದರ್ಶನ ಮತ್ತು ಉತ್ತೇಜನ ಎಲ್ಲರಿಗೂ ಸ್ಫೂರ್ತಿಯಾಗಿದೆ. ಈ ಎಲ್ಲರನ್ನೂ ಧನ್ಯವಾದ ರೂಪದ ಸಂತೋಷ ಭಾವದಿಂದ ನೆನೆಯುತ್ತೇನೆ.

ಸುಂದರವಾಗಿ ಮುದ್ರಿಸಿರುವ ಕರ್ನಾಟಕ ಪ್ರೆಸ್, ಮೈಸೂರು, ಸುಂದರವಾದ ಸೂಕ್ತವಾದ ಮುಖಪುಟವನ್ನು ವಿನ್ಯಾಸ ಮಾಡಿಕೊಟ್ಟಿರುವ ಕ್ಯಾನ್ವಾಸ್, ಬೆಂಗಳೂರು ಮತ್ತು ಅದನ್ನು ಮುದ್ರಿಸಿದ ಓಂಕಾರ್ ಆಫ್‌ಸೆಟ್ ಪ್ರೆಸ್, ಬೆಂಗಳೂರು ಈ ಮಿತ್ರರಿಗೆ ಪ್ರಕಾಶನದ ಅನಂತ ಧನ್ಯವಾದಗಳು.

ಜುಲೈ ೨೦೦೫ | **ಕೆ.ಬಿ. ಪ್ರಭುಪ್ರಸಾದ್**
ಮೈಸೂರು | ಪ್ರಧಾನ ಸಂಪಾದಕ

# ಮುನ್ನುಡಿ

ಪ್ರಿಯ ಓದುಗ,

ಈಗ ಕೆಲವು ವರ್ಷಗಳ ಹಿಂದೆ ಗೂಡೂರಿನಲ್ಲಿ ಒಂದು ಭಾರೀ ಜನಸಮೂಹವನ್ನು ಉದ್ದೇಶಿಸಿ ಮಾತನಾಡುತ್ತಾ ಭಗವಾನ್ ಶ್ರೀ ಸತ್ಯಸಾಯಿ ಬಾಬಾ ಅವರು, "ನೀವು ನನ್ನನ್ನು ಪ್ರೇಮ ಸ್ವರೂಪ ಎಂದು ಕರೆದರೆ ತಪ್ಪಾಗುವುದಿಲ್ಲ," ಎಂದು ಹೇಳಿದರು. ವಾಸ್ತವವಾಗಿ ಅವರು ಪ್ರೇಮದ ಮಳೆಗರೆಯುತ್ತಾರೆ, ವ್ಯಕ್ತಿಯ ಹೃದಯದಲ್ಲಿ ಪ್ರೇಮವನ್ನು ಅರಸುತ್ತಾರೆ, ಅಲ್ಲಿ ಪ್ರೇಮವನ್ನು ಸ್ಥಾಪಿಸುತ್ತಾರೆ. ಸಮಾಜದ ರಚನೆಯಲೂ ರಾಷ್ಟ್ರಗಳ ಸಂಕೀರ್ಣದಲ್ಲೂ ಪ್ರೇಮವನ್ನು ನೆಲೆಗೊಳಿಸುತ್ತಾರೆ. ದಾರಿಯನ್ನು ತಪ್ಪಿಸಿಕೊಂಡು, ಭೀತಿಯಿಂದ ನಡುಗುತ್ತಿರುವ ಮಾನವ ಜನಾಂಗವು ತನ್ನ ಹುಚ್ಚು ಹರಟೆಯಿಂದ ತಾನೇ ಹುಟ್ಟಿಸಿರುವ ಕೆಡುಕನ್ನು ನಿಯಂತ್ರಿಸಲು ಸಾಧ್ಯವಾಗದೆ ತಲ್ಲಣಿಸುತ್ತಿದೆ. ಅದಕ್ಕೆ ಈಗ ಬಾಬಾ ಅವರ ಕರುಣೆ ಬೇಕು. ಪ್ರೇಮ ಬೇಕು. ಅದಕ್ಕೆ ಹಿಡಿದಿರುವ ನರವ್ಯಾಧಿಯನ್ನು ಪರಿಹರಿಸಿ ಅವರು ಮತ್ತೆ ಬೆಳಕಿಗೆ ತರುತ್ತಾರೆ. ಅನೇಕ ವರ್ಷಗಳ ಹಿಂದೆಯೇ ಬಾಬಾ, ತಮಗೆ ಮೂವತ್ತೆರಡು ವರ್ಷ ತುಂಬಿದ ನಂತರ, ಮಾನವನನ್ನು ನಿಜವಾದ ಧರ್ಮದ ತಳಹದಿಯ ಮೇಲೆ ಪುನರ್ ರಚಿಸುವ, ಪುನರ್ ರೂಪಿಸುವ ಮಹತ್ಕಾರ್ಯವನ್ನು ಪ್ರಾರಂಭಿಸುವುದಾಗಿ ಹೇಳಿದ್ದರು. ೧೯೫೮ರಲ್ಲಿ ಆ ಅಮೃತ ಕ್ಷಣವು ಬಂದಾಗ ಒಂದು ಮಾಸಪತ್ರಿಕೆಯನ್ನು ಅನುಗ್ರಹಿಸಿದರು. ಅದಕ್ಕೆ ಅವರು ಸನಾತನ ಸಾರಥಿ ಎಂದು ಹೆಸರಿಟ್ಟರು. ಭಗವದ್ಗೀತೆಯ ಪರಿಮಳ ಮತ್ತು ಯಾರು ತನ್ನನ್ನು ಮಾರ್ಗದರ್ಶಿಯಾಗಿ ಸ್ವೀಕರಿಸಲು ಸಿದ್ಧವಾಗಿದ್ದಾರೆಯೋ ಅವರ ಸಾರಥಿಯಾಗಿ ಭಗವಂತನ ಪಾತ್ರ—ಇವು ತುಂಬಿರುವ ಹೆಸರು ಅದು. ಬಾಬಾ ಸನಾತನ ಸಾರಥಿಗೆ ಬರೆದ ಮೊದಲ ಲೇಖನಗಳ ಸರಣಿಯೇ 'ಪ್ರೇಮವಾಹಿನಿ' ಎನ್ನುವುದೂ ಅರ್ಥಪೂರ್ಣವಾಗಿದೆ. ಈ ದಿವ್ಯೋಪನ್ಯಾಸಗಳನ್ನು ಪ್ರಸ್ತುತ ಪುಸ್ತಕದಲ್ಲಿ ಇಂಗ್ಲಿಷಿಗೆ ಅನುವಾದ ಮಾಡಿ ಮೊದಲ ಬಾರಿಗೆ ಕೂಡಿಸಿ ಕೊಡಲಾಗಿದೆ. ಸಾಯಿಯುಗದಲ್ಲಿ ನಿರ್ಮಿತವಾಗುತ್ತಿರುವ ವಿಶ್ವಸೌಧದ ನಾಲ್ಕು ಸ್ತಂಭಗಳು ಸತ್ಯ, ಧರ್ಮ, ಶಾಂತಿ ಮತ್ತು ಪ್ರೇಮ. ಬಾಬಾ ಅವರ ನಿರ್ದೇಶನದಲ್ಲಿ ಮಾನವ ಜನಾಂಗವು ಪ್ರೇಮದ ಮೂಲಕ ಶಾಂತಿಯನ್ನು ಕಂಡುಕೊಳ್ಳಬೇಕು. ಆ ಕೆಲಸಕ್ಕೆ ಈ ಕೃತಿಯು ತುಂಬಾ ಸಹಾಯಮಾಡುತ್ತದೆ. ಇದನ್ನು ಓದುವಾಗ ನೀವು ಪ್ರೇಮದ ಮೂಲವನ್ನೇ ಸ್ಪರ್ಶಿಸುತ್ತೀರಿ; ಅದರ ಸಂದೇಶವನ್ನು ಕ್ರಿಯೆಗೆ ಅನುವಾದಿಸುವಾಗ ಸಾಕ್ಷಾತ್ ಭಗವಂತನ ಕರುಣೆಯೇ ನಿಮ್ಮನ್ನು ಮುಂದಕ್ಕೊಯ್ಯುತ್ತಿರುತ್ತದೆ. ವಿಧಿಸಿರುವ ಸಾಧನೆಯ ರೋಮಾಂಚನವನ್ನು ಅನುಭವಿಸುತ್ತಾ ಆ ಕರುಣೆಯ ಮಹಾ ಸಾಗರದ ಭವ್ಯತೆಗೆ ಸ್ಪಂದಿಸುತ್ತಿರುತ್ತೀರಿ.

೧೯೬೨ **ನಾ. ಕಸ್ತೂರಿ**

# ೧ ಸಾಧನಾಮಾರ್ಗದ ಉದಾತ್ತ ಗುಣಗಳು

ಹಿಂದಿನ ಯುಗಗಳಿಗಿಂತ ಮಿಗಿಲಾಗಿ ಕಲಿಯುಗವು ಮಾನವನಿಗೆ ವಿವೇಕವನ್ನು ಗಳಿಸಲು ಅನೇಕ ಪಥಗಳನ್ನು ಒದಗಿಸಿದೆ. ಅವನಿಗೆ ಅಗತ್ಯವಾದದ್ದು ವಿದ್ಯಾಭ್ಯಾಸ ವಾದರೆ ಅದಕ್ಕೆ ಬೇಕಾದಷ್ಟು ಶಾಲೆ ಕಾಲೇಜುಗಳಿವೆ; ಐಶ್ವರ್ಯ ಬೇಕಾಗಿದ್ದರೆ, ಪ್ರಯತ್ನಪಟ್ಟು ಗೌರವಾನ್ವಿತವಾಗಿ ಅದನ್ನು ಗಳಿಸಲು ಹಲವು ದಾರಿಗಳಿವೆ. ಹಾಗಿದ್ದರೂ ಮಾನವನ ಸುಖ ಶಾಂತಿಗಳಲ್ಲಿ ಹೆಚ್ಚಳವನ್ನೇನೂ ನಾವು ನೋಡುತ್ತಿಲ್ಲ. ವಾಸ್ತವವಾಗಿ ಹಿಂದಿನ ಯುಗಗಳಿಗಿಂತ ದುಃಖ ಈಗ ಹೆಚ್ಚಾಗಿದೆ.

ಇದಕ್ಕೆ ಕಾರಣವೇನು? ಕಾರಣವು ಮಾನವನ ನಡವಳಿಕೆಯಲ್ಲೇ ಇದೆ, ಅವನ ಜೀವನ ವಿಧಾನದಲ್ಲಿಯೇ ಇದೆ. ವಿಕಾಸದಲ್ಲಿ ಮಾನವ ಜನ್ಮವು ಅತ್ಯುನ್ನತವಾದದ್ದು ಎಂಬುದರಲ್ಲಿ ಸಂದೇಹವಿಲ್ಲ. ಅದಕ್ಕೆ ಅರ್ಥವನ್ನು ನೀಡಬೇಕಾದರೆ ಆಧ್ಯಾತ್ಮಿಕ ಪರಿಶ್ರಮ, ಪರಿಶುದ್ಧವೂ ಪವಿತ್ರವೂ ಆದ ಪರಿಶ್ರಮ ಅಗತ್ಯ. ಈ ಬಗೆಯ ಜೀವನಕ್ಕೆ ನಡತೆ ತುಂಬ ಮುಖ್ಯವಾದದ್ದು. ಬದುಕನ್ನು ಅಮರವನ್ನಾಗಿ ಮಾಡುವುದೇ ನಡತೆ; ಸತ್ತ ಮೇಲೂ ಅದು ನೆನಪಿನಲ್ಲಿ ಉಳಿಯುತ್ತದೆ. ಕೆಲವರು ಜ್ಞಾನವೇ ಶಕ್ತಿ ಎಂದು ಹೇಳುತ್ತಾರೆ, ಅದು ಸರಿಯಲ್ಲ. ಶೀಲವೇ ಶಕ್ತಿ. ಜ್ಞಾನ ಸಂಪಾದನೆಗೂ ಒಳ್ಳೆಯ ಶೀಲವು ಅತ್ಯಗತ್ಯ. ಆದ್ದರಿಂದ ಯಾವ ಕಳಂಕದ ಕುರುಹೂ ಇಲ್ಲದಂತಹ ನಿರ್ಮಲ ಶೀಲವನ್ನು ಸಂಪಾದಿಸಲು ಪ್ರತಿಯೊಬ್ಬನೂ ಹಂಬಲಿಸಬೇಕು.

ಬುದ್ಧ, ಯೇಸು ಕ್ರಿಸ್ತ, ಶಂಕರಾಚಾರ್ಯ, ವಿವೇಕಾನಂದ, ಅನೇಕಾನೇಕ ಋಷಿಗಳು, ಸಂತರು, ಭಗವದ್ಭಕ್ತರು ಇಂದಿಗೂ ಜನಮನದಲ್ಲಿ ಸ್ಥಿರವಾಗಿ ನೆಲೆಸಿದ್ದಾರೆ. ಯಾವ ಗುಣವು ಅವರಿಗೆ ಸಾರ್ವಕಾಲಿಕವಾಗಿ ಜನರ ಸ್ಮರಣೆಯಲ್ಲಿ ಉಳಿಯುವಂತಹ ಶಕ್ತಿಯನ್ನು ತಂದುಕೊಟ್ಟಿತು? ಅವರೊಬ್ಬೊಬ್ಬರಲ್ಲೂ ಇದ್ದ ಶೀಲಸಂಪತ್ತೇ ಇದಕ್ಕೆ ಕಾರಣ ಎಂದು ನಾನು ಹೇಳುತ್ತೇನೆ.

ಶೀಲವಿಲ್ಲದೆ ಸಂಪತ್ತು, ಶಿಕ್ಷಣ, ಸಾಮಾಜಿಕ ಸ್ಥಾನಮಾನ ಇವೆಲ್ಲವೂ ಯಾವ ಪ್ರಯೋಜನಕ್ಕೂ ಬರುವುದಿಲ್ಲ. ಹೂವಿಗೆ ಬೆಲೆ ಬರುವುದು ಅದರ ಪರಿಮಳದಿಂದ. ಕವಿಗಳು, ಕಲಾವಿದರು, ವಿಜ್ಞಾನಿಗಳು ತಮ್ಮ ತಮ್ಮ ಕ್ಷೇತ್ರದಲ್ಲಿ ಬಹಳ ದೊಡ್ಡವರಾಗಿ ರಬಹುದು, ಆದರೆ ಸಚ್ಚಾರಿತ್ರವಿಲ್ಲದೆ ಅವರಿಗೆ ಸಮಾಜದಲ್ಲಿ ನೆಲೆಯಿಲ್ಲ. ಸಮಾಜವು ಇಂದು ಗೌರವಿಸುತ್ತಿರುವ ಎಲ್ಲರೂ ಅಂತಹ ಸಚ್ಚಾರಿತ್ರವನ್ನು, ಉತ್ತಮ ನಡವಳಿಕೆಯನ್ನು ಹೊಂದಿದ್ದಾರೆಯೆ ಎಂಬ ಪ್ರಶ್ನೆ ಏಳಬಹುದು. ನಾನು ಮಾತನಾಡುತ್ತಿರುವುದು ಕೆಲವು ಬದಲಾಗದ ಮೌಲ್ಯಗಳಿಗೆ ಅಂಟಿಕೊಂಡ ಒಂದು ಸಮಾಜ

ವನ್ನು, ಒಂದು ನಡವಳಿಕೆಯನ್ನು ಕುರಿತು. ಸಾಮಾನ್ಯವಾಗಿ ಸಮಾಜವು ದಿನ ದಿನವೂ ಕೆಲವು ಗುಣಲಕ್ಷಣಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡುತ್ತದೆ. ಸಮಾಜದ ಏರುಪೇರುಗಳಿಗೆ ತಕ್ಕಂತೆ ಚಾರಿತ್ರದ ಕಲ್ಪನೆಯಲ್ಲಿ ಬದಲಾವಣೆಯೂ ಆಗುತ್ತದೆ. ಆದರೆ ಕಲ್ಮಷರಹಿತವಾದ ಶೀಲದ ಮೂಲ ಸ್ವರೂಪವು ಹಾಗೆಯೇ ಉಳಿದಿರುತ್ತದೆ. ಸಮಾಜದ ಏರುಪೇರುಗಳು ಏನೇ ಇರಲಿ, ಅದು ಹಾಗೆಯೇ ಉಳಿದಿರುತ್ತದೆ. ಆ ಅರ್ಥದಲ್ಲಿ ಅಮರವಾದ ಆತ್ಮದೊಂದಿಗೆ ಸಂಬಂಧಿಸಿರುತ್ತಾ ಶೀಲವೂ ನಿತ್ಯಸ್ವರೂಪ ದ್ದಾಗಿರುತ್ತದೆ.

ನಿರ್ಮಲ ಶೀಲವನ್ನು ರೂಪಿಸುವ ಗುಣಗಳಲ್ಲಿ ಪ್ರೇಮ, ಸಹನೆ, ಸಹಿಷ್ಣುತೆ, ಶ್ರದ್ಧೆ, ದಾನಪರತೆ ಇವು ಅತ್ಯಂತ ಶ್ರೇಷ್ಠವಾದವು, ಇವುಗಳನ್ನು ಗೌರವಿಸಬೇಕು.

ಪ್ರತಿದಿನವೂ ನಾವು ಮಾಡುವ ನೂರಾರು ಸಣ್ಣಪುಟ್ಟ ಕೆಲಸಗಳೇ ಅಭ್ಯಾಸವಾಗಿ ಗಟ್ಟಿಗೊಳ್ಳುತ್ತವೆ; ಈ ಅಭ್ಯಾಸಗಳು ಬುದ್ಧಿಯಾಗಿ ರೂಪುಗೊಂಡು ನಮ್ಮ ದೃಷ್ಟಿ ಯನ್ನೂ ಬದುಕನ್ನೂ ರಚಿಸುತ್ತವೆ. ನಮ್ಮ ಕಲ್ಪನೆಗಳಲ್ಲಿ ನಾವು ನೇಯುವುದೆಲ್ಲವೂ ಆದರ್ಶಗಳಲ್ಲಿ ಅರಸುವ, ಆಶೋತ್ತರಗಳಲ್ಲಿ ಹಂಬಲಿಸುವ ಎಲ್ಲವೂ ಮನಸ್ಸಿನ ಮೇಲೆ ಅಳಿಸಲಾಗದ ಮುದ್ರೆಯನ್ನು ಉಳಿಸುತ್ತವೆ. ಇವುಗಳಿಂದ ವಿಕ್ಷಿಪ್ತಗೊಂಡು ನಾವು ನಮ್ಮ ಜ್ಞಾನವನ್ನು ರೂಪಿಸುತ್ತೇವೆ, ನಮ್ಮ ಸುತ್ತಣ ಪ್ರಪಂಚದ ಚಿತ್ರವನ್ನೂ ರಚಿಸಿಕೊಳ್ಳುತ್ತೇವೆ. ನಾವು ಮೋಹಿತರಾಗುವುದು ಈ ಚಿತ್ರಕ್ಕೇ.

ಮಾನವನ ವರ್ತಮಾನ ಸ್ಥಿತಿಯು ಅವನ ಭೂತಕಾಲದ ಹಾಗೂ ಆ ಸುದೀರ್ಘ ಅವಧಿಯಲ್ಲಿ ರೂಪಿಸಿಕೊಂಡ ಅಭ್ಯಾಸಗಳ ಫಲ ಅಷ್ಟೆ. ಯಾವ ಬಗೆಯ ನಡವಳಿಕೆ ಅವನಿಗೆ ಬಂದಿದೆಯೋ ಅದನ್ನು ಚಿಂತನೆಯಲ್ಲಿ, ಕಲ್ಪನೆಯಲ್ಲಿ ಸೂಕ್ತ ರೀತಿಯ ಪರಿವರ್ತನೆಗಳನ್ನು ಮಾಡಿಕೊಳ್ಳುವುದರ ಮೂಲಕ ಬದಲಾಯಿಸಿಕೊಳ್ಳಲು ಖಂಡಿ ತವಾಗಿಯೂ ಸಾಧ್ಯವಿದೆ.

ಯಾವ ವ್ಯಕ್ತಿಯ ದುಷ್ಟತನವೂ ಬದಲಾಯಿಸಲಾಗದಂಥದ್ದಲ್ಲ. ಬುದ್ಧನು ಡಕಾಯಿತನಾಗಿದ್ದ ಅಂಗುಲೀಮಾಲನನ್ನು ದಯಾರ್ದ್ರ ಹೃದಯದ ವ್ಯಕ್ತಿಯನ್ನಾಗಿ ಪರಿವರ್ತಿಸ ಲಿಲ್ಲವೆ? ಕಳ್ಳನಾಗಿದ್ದ ರತ್ನಾಕರನು ಋಷಿ ವಾಲ್ಮೀಕಿಯಾಗಲಿಲ್ಲವೆ? ಪ್ರಜ್ಞಾಪೂರ್ವಕವಾದ ಪರಿಶ್ರಮದಿಂದ, ಅಭ್ಯಾಸಗಳನ್ನು ಬದಲಾಯಿಸಿ ಶೀಲವನ್ನು ಪರಿಷ್ಕರಿಸಿಕೊಳ್ಳಬಹುದು. ಮನುಷ್ಯನಿಗೆ ತನ್ನ ದುಷ್ಟಪ್ರವೃತ್ತಿಗಳನ್ನು ಎದುರಿಸಿ ಹೋರಾಡಿ, ತನ್ನ ದುರಭ್ಯಾಸಗಳನ್ನು ತಿದ್ದಿಕೊಳ್ಳುವ ಶಕ್ತಿಯಿದೆ, ಅದು ಅವನಲ್ಲೇ ಅವನ ಎಟುಕಿನಲ್ಲೇ ಇದೆ. ಸ್ವಾರ್ಥರಹಿತ ಸೇವೆಯಿಂದ, ವೈರಾಗ್ಯದಿಂದ, ಭಕ್ತಿ ಯಿಂದ, ಪ್ರಾರ್ಥನೆಯಿಂದ, ತರ್ಕಯುತ ವಿಚಾರದಿಂದ ಮಾನವನನ್ನು ಈ ಜಗತ್ತಿಗೆ ಬಂಧಿಸಿರುವ ಹಳೆಯ ಅಭ್ಯಾಸಗಳನ್ನು ತ್ಯಜಿಸಿ ದಿವ್ಯಪಥದೆಡೆಗೆ ಒಯ್ಯುವ ಹೊಸ ಅಭ್ಯಾಸಗಳನ್ನು ರೂಢಿಸಿಕೊಳ್ಳಲು ಸಾಧ್ಯವಿದೆ.

ಶೀಲವನ್ನೂ ಅದು ಹೋಗುವ ದಾರಿಗಳನ್ನೂ ಕುರಿತು ಚರ್ಚಿಸಿ ಅದನ್ನು ಪುನರ್ ರೂಪಿಸುವ ಪ್ರಕ್ರಿಯೆಯ ಬಗೆಗೆ ತಿಳಿಸಿಕೊಡುವುದೇ ಎಲ್ಲಾ ಧಾರ್ಮಿಕ ಸಾಹಿತ್ಯದ, ಕಾವ್ಯ, ಕವಿತೆ, ಗ್ರಂಥ, ನಿಯತಕಾಲಿಕಗಳ ಮುಖ್ಯ ಉದ್ದೇಶ. ಸನಾತನ ಸಾರಥಿಯು ಇದನ್ನೇ ತನ್ನ ಗುರಿಯನ್ನಾಗಿ ಇಟ್ಟುಕೊಂಡಿದೆ. ಪಾಂಡಿತ್ಯದ ಪ್ರದರ್ಶನವಾಗಲಿ, ಹೆಸರನ್ನೂ ಹೊಗಳುವಿಕೆಯನ್ನೂ ಪಡೆಯುವುದಾಗಲಿ ಅದರ ಉದ್ದೇಶವಲ್ಲ.

ಆದರೆ ಒಂದು ಮಾತು ಹೇಳಬೇಕು. ಒಂದು ಪುಸ್ತಕವನ್ನೋ ನಿಯತಕಾಲಿಕವನ್ನೋ ಓದುವಷ್ಟರಿಂದ ವಿವೇಕ ಅಥವಾ ವಿವೇಚನೆ ಬಂದುಬಿಡುವುದಿಲ್ಲ. ಕೇಳಿದ್ದನ್ನು, ನೋಡಿದ್ದನ್ನು ಅಥವಾ ಓದಿದ್ದನ್ನು ವಾಸ್ತವ ಜೀವನದಲ್ಲಿ ಆಚರಣೆಗೆ ತರಬೇಕು. ಅದಿಲ್ಲದೆ ಕೇವಲ ಓದುವುದು ಸಮಯದ ಪೋಲು ಅಷ್ಟೆ. ಕಾಲ ಕಳೆಯುವುದಕ್ಕಾಗಿ ಏನನ್ನಾದರೂ ಓದಿದರೆ, ಕಾಲದೊಂದಿಗೆ ಅದೂ ಹೊರಟು ಹೋಗುತ್ತದೆ, ಏನೂ ಉಳಿಯುವುದಿಲ್ಲ.

# ೨ ಗ್ರಂಥಾಧ್ಯಯನ ಮತ್ತು ಏಕಾಗ್ರತೆ

ಬೇಕಾದ ಹಾಗೆ ಮತ್ತು ಅಗ್ಗದ ಬೆಲೆಗಳಲ್ಲಿ ಪುಸ್ತಕಗಳು ದೊರಕುತ್ತವೆ. ವೇದ, ಶಾಸ್ತ್ರ, ಪುರಾಣಗಳನ್ನು ಪ್ರತಿಯೊಬ್ಬರೂ ಪಡೆದು ಓದಬಹುದಾಗಿದೆ. ಗುರುಗಳಿಗೂ ಏನೂ ಕೊರತೆಯಿಲ್ಲ. ವಿದ್ಯಾಪೀಠಗಳು ಬೇಕಾದಷ್ಟಿವೆ, ಜ್ಞಾನ ದಾನ ಮಾಡುತ್ತವೆ. ಮನಸ್ಸಿಗೆ ತರಬೇತಿ ಕೊಡಲು ಬೇಕಾದಷ್ಟು ಸೌಲಭ್ಯಗಳಿವೆ. ಸಾಮಾನ್ಯರ ಎಟುಕಿಗೂ ನಿಲುಕುವಂತಿವೆ. ಆದರೂ ಜ್ಞಾನಾಮೃತವನ್ನು ಸವಿದು ತೃಪ್ತಿ ಹೊಂದಿದ್ದೇನೆ ಎಂಬ ಸೊಲ್ಲು ಎಲ್ಲಿಂದಲೂ ಕೇಳಿಬರುತ್ತಿಲ್ಲ.

ಎಲ್ಲ ಕಡೆಯೂ ರಾಶಿರಾಶಿಯಾಗಿರುವ ಪುಸ್ತಕಗಳನ್ನು ನೋಡಿದಾಗ, ಅವುಗಳೊಳಗಿರುವ ಜ್ಞಾನವು ಗಟ್ಟಿಯಾದ ರಟ್ಟನ್ನು ಭೇದಿಸಿಕೊಂಡು ಹೊರಕ್ಕೆ ಬೆಳಕಿಗೆ ಬರಲು ಸಾಧ್ಯವಾಗಿಲ್ಲ ಎಂದು ನನಗನ್ನಿಸುತ್ತದೆ! ಕಾಮ, ಕ್ರೋಧ, ಮತ್ಸರ, ಸ್ವಾರ್ಥಗಳೆಂಬ ಪರ್ವತ ಶ್ರೇಣಿಯು ಭಗವಂತನನ್ನು ಮರೆಮಾಡಿವೆ. ಹಾಗೆಯೇ ಜ್ಞಾನ ಸೂರ್ಯನನ್ನು ಈ ಬೆಟ್ಟದಂತಹ ಗ್ರಂಥರಾಶಿಗಳು ಮರೆಮಾಡಿಬಿಟ್ಟಿವೆ. ಈ ಪುಸ್ತಕಗಳು ಭೂಮಿಯ ಎಲ್ಲ ಮೂಲೆಗಳಿಗೂ ಹರಡಿಕೊಂಡಿದ್ದರೂ ಸಂಸ್ಕೃತಿಯಾಗಲಿ, ವಿವೇಕವಾಗಲಿ ಹೆಚ್ಚಿದೆ ಎಂದು ನಾವು ಹೇಳಲು ಸಾಧ್ಯವಿಲ್ಲ. ಮನುಷ್ಯನು ಇನ್ನೂ ವಾನರ ಹಂತದಿಂದ ಬಹು ದೂರದಲ್ಲಿಲ್ಲ. ಓದುಗನು ಇಂದು ನೋಡುತ್ತಿರುವುದು ಆಕರ್ಷಕವಾದ ರಟ್ಟು, ಶೀರ್ಷಿಕೆ, ಸುಂದರವಾದ ಒಂದು ಚಿತ್ರ ಇಷ್ಟೇ. ಅನಿತ್ಯವಾದ ಸುಖ ಹಾಗೂ ಕ್ಷಣಿಕ ತೃಪ್ತಿ ಇವುಗಳನ್ನು ಮಾತ್ರ. ತಾವು ಓದುವ ಪುಸ್ತಕವನ್ನು ವಿವೇಚನೆಯಿಂದ ಆರಿಸಿಕೊಂಡು, ತಾವು ಓದಿದ್ದನ್ನು

ಆಚರಣೆಯಲ್ಲಿ ತರುವವರು ಮಾತ್ರ ಸತ್ಯವನ್ನು ಅರಿತು, ನಿತ್ಯವಾದ ಆನಂದವನ್ನು ಅನುಭವಿಸುವರು. ಇಂಥವರ ಬದುಕು ಮಾತ್ರ ಸಾರ್ಥಕವಾದ ಬದುಕು. ಆದ್ದರಿಂದ ಉದಾತ್ತವಾದ ದಾರಿಯಲ್ಲಿ ನಡೆದು, ಭಗವಂತನ ಚಿಂತನೆಯಲ್ಲಿ ರಮಿಸುವವರು ಸಾಧುಸಂತರ ಜೀವನ ಚರಿತ್ರೆಗಳನ್ನು, ಭಗವದ್ಧ್ಯಾನಕ್ಕೆ ನೆರವಾಗುವಂತಹ ಕೃತಿಗಳನ್ನು ಓದುತ್ತಿರಬೇಕು. ಸಿಕ್ಕಿಸಿಕ್ಕದ ಪುಸ್ತಕಗಳನ್ನು ಗೊತ್ತುಗುರಿಯಿಲ್ಲದೆ ಓದುವುದರಿಂದ, ಕೈಗೆ ಸಿಕ್ಕಿದ್ದನ್ನು ಓದುವುದರಿಂದ ಗೊಂದಲ ಹೆಚ್ಚುತ್ತದೆ. ಅದರಿಂದ ಯಾವ ಪ್ರಯೋಜನವೂ ಇಲ್ಲ, ಶಾಂತಿ ಲಭಿಸುವುದಿಲ್ಲ.

ಎಲ್ಲಕ್ಕಿಂತ ಮಿಗಿಲಾಗಿ ನೀವು ಏನು ಮಾಡಿದರೂ ಅದರಲ್ಲಿ ಏಕಾಗ್ರ ನಿಷ್ಠೆಯನ್ನು ಬೆಳೆಸಿಕೊಂಡಿರಬೇಕು.

## ೩ ಸಮದೃಷ್ಟಿಯೇ ಶುಭದೃಷ್ಟಿ

ಅರಣ್ಯದ ರಾಜನಾದರೂ ಸಿಂಹವು ಕಾಡಿನಲ್ಲಿ ನಡೆಯುವಾಗ ಕೆಲವು ಹೆಜ್ಜೆಯಿಟ್ಟು ಹಿಂದಿರುಗಿ ನೋಡುತ್ತಿರುತ್ತದೆ, ಯಾರಾದರೂ ಹಿಂಬಾಲಿಸುತ್ತಿದ್ದಾರೋ ಎಂಬ ಭೀತಿ ಅದಕ್ಕೆ. ಮನಸ್ಸಿನ ಭೀತಿಯು ದೃಷ್ಟಿಯನ್ನು ಮುಗ್ಗರಿಸುವಂತೆ ಮಾಡುತ್ತದೆ. ಹೃದಯದೊಳಗೆ ಅವಿತಿರುವ ಹಿಂಸಾ ಭಾವನೆಯು ದೃಷ್ಟಿಯನ್ನು ವಿಕ್ಷಿಪ್ತಗೊಳಿಸಿ, ದಿಕ್ಕು ತಪ್ಪಿಸುತ್ತದೆ.

ಮನುಷ್ಯನಿಗೆ ಸಮದೃಷ್ಟಿ, ಎಲ್ಲವನ್ನೂ ಸಮಾನವಾಗಿ ನೋಡುವ ಶಕ್ತಿ ಇರಬೇಕು. ಸೃಷ್ಟಿಯ ಸಮಸ್ತವೂ ಅವನಿಗೆ ಸಮಾನವಾಗಿ ಶುಭಕರವಾಗಿ ತೋರಬೇಕು. ಅವನು ತನ್ನನ್ನು ಎಷ್ಟು ಮಟ್ಟಿಗೆ ಪ್ರೀತಿಸುತ್ತಾನೆಯೋ ಅಷ್ಟೇ ಮಟ್ಟಿನ ಪ್ರೀತಿಯಿಂದ ಪ್ರತಿಯೊಂದು ಜೀವಿಯನ್ನು ನೋಡಬೇಕು. ಏಕೆಂದರೆ ಕೆಟ್ಟದ್ದೆನ್ನುವುದು ಈ ಸೃಷ್ಟಿಯಲ್ಲಿ ಇಲ್ಲವೇ ಇಲ್ಲ, ಒಂದು ಕಣ ಮಾತ್ರವೂ ಇಲ್ಲ. ದೃಷ್ಟಿ ದೋಷದಿಂದ ಕೆಡುಕು ಹಾಗೆ ಕಾಣುತ್ತದೆ ಅಷ್ಟೆ. ನಾವು ಯಾವ ಬಣ್ಣದ ಕನ್ನಡಕವನ್ನು ಧರಿಸುವೆವೋ ಸೃಷ್ಟಿಯು ಅದೇ ಬಣ್ಣವಾಗಿ ನಮಗೆ ಕಾಣಿಸುತ್ತದೆ. ಅದರಷ್ಟಕ್ಕೆ ಅದು ನಿತ್ಯ, ಶುದ್ಧ, ಪವಿತ್ರ.

# ೪ ಸಾಧನೆ-ಜೀವನ ವಿಧಾನ

ಏಕಾಗ್ರ ಶ್ರದ್ಧೆಯ ಮೂಲಕ ಮಾನವನು ತನ್ನ ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಶಕ್ತಿಗಳನ್ನು ಪೂರ್ಣವಾಗಿ ವ್ಯಕ್ತಪಡಿಸುವುದರಿಂದ ಉನ್ನತವಾದ ಹಂತಗಳನ್ನು ಏರಬೇಕು ಎಂಬುದನ್ನು ಬೋಧಿಸುವ ಹಾಗೂ ತೋರಿಸಿ ಕೊಡುವ ಗುರುಗಳು ಸದಾ ಇದ್ದಾರೆ, ಈಗಲೂ ಇದ್ದಾರೆ, ಮುಂದೆಯೂ ಇರುತ್ತಾರೆ. ಮಾನವನ ಮನಸ್ಸು ಬಾಹ್ಯವಸ್ತುಗಳಲ್ಲಿ ರುಚಿಯನ್ನು ಕಾಣುತ್ತದೆ. ಉದ್ದೇಶವೇ ಇಲ್ಲದ ದೃಷ್ಟಿಯಲ್ಲಿ ಮತ್ತು ಹೊರಜಗತ್ತಿನ ಟೀಕೆಯಲ್ಲಿ ಕಳೆಯುತ್ತದೆ. ಹೀಗಿರುವಾಗ ಅದಕ್ಕೆ ಶ್ರದ್ಧೆಯನ್ನು ಕಲಿಸುವುದು ಹೇಗೆ?

ಪ್ರತಿಯೊಬ್ಬನೂ ತನ್ನಲ್ಲೇ ಒಂದು ಪ್ರಶ್ನೆಯನ್ನು ಕೇಳಿಕೊಳ್ಳಬೇಕು. "ಮಹಾತ್ಮರು, ಮಹಾಪುರುಷರು ಕೂಡ ನನ್ನಂತೆಯೇ ಮನುಷ್ಯರಾಗಿದ್ದರು; ಅವರಿಗೂ ನನ್ನದರಂತೆಯೇ ದೇಹವಿತ್ತು. ಅವರು ಪರಿಪೂರ್ಣತೆಯನ್ನು ಸಾಧಿಸುವುದಕ್ಕೆ ಸಾಧ್ಯವಿದ್ದರೆ ನಾನೂ ಅದನ್ನು ಗಳಿಸಬಹುದು. ಅವರ ದಾರಿಯನ್ನೇ ಅನುಸರಿಸಿದರೆ ಇತರರ ದೋಷಗಳನ್ನು ದೌರ್ಬಲ್ಯಗಳನ್ನು ಕಂಡುಹಿಡಿಯುವುದರಲ್ಲೇ ಕಾಲ ಕಳೆಯುತ್ತ ನನಗಾಗುವ ಲಾಭವೇನು?"

ಆದ್ದರಿಂದ ಮೊದಲನೆಯ ಸಾಧನೆಯೆಂದರೆ, ನಿಮ್ಮಲ್ಲೇ ಇರುವ ದೋಷಗಳನ್ನೂ ದೌರ್ಬಲ್ಯಗಳನ್ನೂ ಹುಡುಕಿ ಅವುಗಳನ್ನು ಪರಿಹರಿಸಿಕೊಂಡು ಪರಿಪೂರ್ಣನಾಗಲು ಪ್ರಯತ್ನಿಸುವುದು.

ಒಂದೊಂದು ದಿನವೂ ಕಷ್ಟಪಟ್ಟು ದುಡಿಯುತ್ತಿರುವುದಕ್ಕೆ ಉದ್ದೇಶ, ಸಮರ್ಥನೆ ಏನು? ತನ್ನ ಕೊನೆಯ ದಿನಗಳು ಸುಖಕರವಾಗಿಯೂ ಮಧುರವಾಗಿಯೂ ಇರುವಂತೆ ಮಾಡುವುದು. ಆದರೆ ಪ್ರತಿಯೊಂದು ಹಗಲಿಗೂ ಸಂಜೆಯಿದೆ. ಒಳ್ಳೆಯ ಕೆಲಸಗಳನ್ನು ಮಾಡುತ್ತಾ ಹಗಲನ್ನು ಕಳೆದರೆ, ಸಂಜೆಯು ನಮಗೆ ಆಳವಾದ, ಉಲ್ಲಾಸಕರವಾದ, ಸಮಾಧಿಗೆ ಸಮಾನವೆಂದು ಜನರು ಹೇಳುವ ಒಳ್ಳೆಯ ನಿದ್ದೆಯನ್ನು ಉಡುಗೊರೆಯಾಗಿ ಕೊಡುತ್ತದೆ.

ಈ ಭೂಮಿಯ ಮೇಲೆ ಮನುಷ್ಯನ ಬದುಕು ಚಿಕ್ಕದು. ಆದರೆ ಈ ಅಲ್ಪ ಅವಧಿಯಲ್ಲೂ ಅವನು ಕಾಲವನ್ನು ಜಾಣತನದಿಂದ ಜಾಗರೂಕತೆಯಿಂದ ವಿಹಿತವಾದ ರೀತಿಯಲ್ಲಿ ಬಳಸಿಕೊಂಡದ್ದೇ ಆದರೆ ದಿವ್ಯಾನಂದವನ್ನು ಪಡೆಯಬಹುದು. ಒಂದೇ ಆಕಾರ ರೂಪಗಳಿರುವ ಇಬ್ಬರು, ಸ್ಪಷ್ಟವಾಗಿ ತೋರುವಂತೆ ಒಂದೇ ಎರಕದಲ್ಲಿ ಹಾಕಿದಂತಿರುವವರು, ಒಂದೇ ಪರಿಸ್ಥಿತಿಯಲ್ಲಿ ಬೆಳೆದರೂ ಅವರಲ್ಲಿ ಒಬ್ಬನು ದೇವತಾಪುರುಷನಾಗಿ ಬೆಳೆಯುತ್ತಾನೆ, ಇನ್ನೊಬ್ಬನು ಸಾಮಾನ್ಯ ಸ್ವಭಾವ

ದಲ್ಲೇ ಉಳಿಯುತ್ತಾನೆ. ಈ ರೀತಿ ಬೆಳವಣಿಗೆಯಲ್ಲಿ ವ್ಯತ್ಯಾಸ ತೋರಲು ಕಾರಣ ವೇನು? ಅಭ್ಯಾಸಗಳಿಂದ ರೂಪುಗೊಂಡ ನಡವಳಿಕೆಗಳು, ಆ ನಡವಳಿಕೆ ಹರಳು ಗಟ್ಟಿ ರೂಪುಗೊಂಡ ಶೀಲ. ಮಾನವನು ಶೀಲವಂತ ಜೀವಿ.

# ೫ ಮಾನವ ಜೀವಿತ

ಸ್ಥೂಲವಾಗಿ ನೋಡುವವನಿಗೆ ಮನುಷ್ಯ ಜೀವನವು ತಿನ್ನುವುದು, ಕುಡಿಯುವುದು, ದುಡಿಯುವುದು ಮತ್ತು ನಿದ್ರಿಸುವುದು ಇವುಗಳ ಕೊನೆಯೇ ಇಲ್ಲದ ಚಕ್ರವೆಂಬಂತೆ ತೋರುತ್ತದೆ. ಆದರೆ ವಾಸ್ತವವಾಗಿ ಜೀವನಕ್ಕೆ ಅದಕ್ಕಿಂತ ದೊಡ್ಡ ಅರ್ಥವಿದೆ; ಹೆಚ್ಚು ಆಳವಾದ ಮಹತ್ವವಿದೆ. ಬದುಕು ಒಂದು ಯಜ್ಞ, ಪ್ರತಿಯೊಂದು ಸಣ್ಣಪುಟ್ಟ ಕಾರ್ಯಚಟುವಟಿಕೆಯೂ ಭಗವಂತನಿಗೆ ಮಾಡಿದ ಅರ್ಪಣೆ. ಈ ರೀತಿಯ ಸಮ ರ್ಪಣ ಭಾವನೆಯಿಂದ ಮಾಡುವ ಕೆಲಸಗಳಲ್ಲಿ ಹಗಲೆಲ್ಲ ಕಳೆದರೆ ಅವನ ನಿದ್ರೆಯು ಸಮಾಧಿಯಲ್ಲದೆ ಮತ್ತೇನುಲ

ಮನುಷ್ಯನು ತನ್ನನ್ನು ದೇಹದೊಂದಿಗೆ ಸಮೀಕರಿಸಿಕೊಳ್ಳುವ ದೊಡ್ಡ ತಪ್ಪು ಮಾಡು ತ್ತಾನೆ. ದೇಹವನ್ನು ಸುಸ್ಥಿತಿಯಲ್ಲಿ ಸುಖವಾಗಿ ಇಟ್ಟುಕೊಳ್ಳಲು ಬೇಕಾದಷ್ಟು ಬಗೆ ಬಗೆಯ ವಸ್ತುಗಳನ್ನು ಅವನು ಸಂಗ್ರಹಿಸಿಟ್ಟುಕೊಳ್ಳುತ್ತಾನೆ. ದೇಹವು ದುರ್ಬಲವಾಗಿ ಜರ್ಝರಿತ ವಾದಾಗಲೂ ಕೂಡ, ಅದಕ್ಕೆ ಯಾವುದಾದರೂ ವಿಧಾನದಿಂದ ಬಲವನ್ನು ತುಂಬ ಉಲ್ಲಾಸಗೊಳಿಸಲು ಪ್ರಯತ್ನಿಸುತ್ತಾನೆ. ಆದರೆ ಎಲ್ಲಿಯ ತನಕ ಮೃತ್ಯುವನ್ನು ಮುಂದೂಡಬಹುದು? ಯಮನ ಕರೆಯು ಬಂದಾಗ ಪ್ರತಿಯೊಬ್ಬನೂ ಹೊರಟು ಹೋಗಬೇಕು. ಸಾವಿನ ಎದುರಿಗೆ ಸ್ಥಾನಮಾನ, ಪದವಿ, ಗರ್ವ, ಅಧಿಕಾರ ಎಲ್ಲವೂ ಮಾಯವಾಗುತ್ತವೆ. ಇದನ್ನು ಅರ್ಥಮಾಡಿಕೊಂಡು ದೇಹ, ಮನೋಶುದ್ಧಿಯಿಂದ, ಸಕಲ ಜೀವಿಗಳ ಸೇವೆ ಮಾಡುವುದರ ಮೂಲಕ ಆತ್ಮದ ಸಾಕ್ಷಾತ್ಕಾರ ಮಾಡಿಕೊಳ್ಳಲು ಪ್ರಯತ್ನ ಮಾಡಬೇಕು. ಈ ಸೇವೆಗಾಗಿ ದೇಹವನ್ನು ಒಂದು ವಾಹನವನ್ನಾಗಿ ಕಾಪಾಡಿಕೊಳ್ಳಬೇಕು. ಆದರೆ ನೆನಪಿಟ್ಟುಕೊಳ್ಳಿ, ನೀವು ಈ ದೇಹವಲ್ಲ; ಈ ದೇಹವು ನೀವಾಗಲು ಸಾಧ್ಯವಿಲ್ಲ. ತತ್ ತ್ವಮ್ ಅಸಿ. ನೀನು ಅದೇ ಆಗಿರುವೆ. ಇದು ಅತ್ಯಂತ ಪವಿತ್ರವಾದ, ಅತ್ಯಂತ ಶ್ರೇಷ್ಠವಾದ ಮಹಾವಾಕ್ಯ. ನೀವು ನಾಶಪಡಿಸಲಾಗದ ಆತ್ಮತತ್ವ. ಆ ಆತ್ಮತತ್ವಕ್ಕಾಗಿಯೇ ನೀನು ಈ ದೇಹವನ್ನು ಪಡೆದಿರುವುದು. ಆದ್ದರಿಂದ ಪರಮೇಶ್ವರನನ್ನು ಇಲ್ಲೇ ಈಗಲೆ ಸಾಕ್ಷಾತ್ಕರಿಸಿಕೊಳ್ಳುವ ಸಲುವಾಗಿ ನೀವು ಈ ದೇಹವನ್ನು ಯಾವ ಕ್ಷಣದಲ್ಲಿ ಬೇಕಾದರೂ ಅರ್ಪಿಸಲು ಸಿದ್ಧರಾಗಿರಬೇಕು. ಈ ದೇಹದ ಮೇಲೆ ನಿಮಗಿರುವ ಪ್ರಭಾವವನ್ನು ಜಗತ್ತಿನ ಕಲ್ಯಾಣಕ್ಕಾಗಿ ಉಪಯೋಗಿಸಿರಿ. ಈ ದೇಹವೊಂದು

ಉಪಕರಣ, ಭಗವಂತನು ನೀಡಿದ ಒಂದು ಸಲಕರಣೆ. ಅದರ ಉದ್ದೇಶವನ್ನು ನೆರವೇರಿಸೋಣ.

ಆದರೆ ಯಾವ ಉದ್ದೇಶಕ್ಕಾಗಿ ಈ ಉಪಕರಣವನ್ನು ನಮಗೆ ಕೊಡಲಾಗಿದೆಯೋ ಅದನ್ನು ಅರಿತುಕೊಳ್ಳುವವರೆಗೂ ಅದನ್ನು ಜೋಪಾನವಾಗಿ ರಕ್ಷಿಸಿ ಗಾಯವಾಗ ದಂತೆ, ವಿಕಲಾಂಗವಾಗದಂತೆ ಕಾಪಾಡಿಕೊಳ್ಳುವುದು ನಿಮ್ಮ ಕರ್ತವ್ಯ. ಚಳಿಗಾಲ ದಲ್ಲಿ ಶೀತದ ಗಾಳಿಯನ್ನು ತಡೆದುಕೊಳ್ಳಲು ಉಣ್ಣೆಯ ಸ್ವೆಟರನ್ನು ಧರಿಸುತ್ತಾರೆ. ಆದರೆ ಚಳಿ ಕಡಮೆಯಾದೊಡನೆ ಅದನ್ನು ಬಿಚ್ಚಿಬಿಡುತ್ತಾರೆ. ಹಾಗೆಯೇ ಐಹಿಕ ಜೀವನದ ಶೀತಗಾಳಿಯು ಬೀಸುವುದು ನಿಂತಾಗ ಈ ಭೌತ ದೇಹವು ಇನ್ನು ಎಷ್ಟು ಮಾತ್ರಕ್ಕೂ ಅಗತ್ಯವಾಗುವುದಿಲ್ಲ. ಸೂಕ್ಷ್ಮಶರೀರದ ಪ್ರಜ್ಞೆ ಮಾತ್ರ ಅವನಿಗೆ ಇರುತ್ತದೆ.

ಮಳೆ ಸುರಿಯುವಾಗ ಆಕಾಶ ಭೂಮಿ ಎಲ್ಲವೂ ಒಂದೇ ನೀರಿನ ಹಾಳೆಯಾಗುತ್ತವೆ. ನಿಜವಾಗಿಯೂ ಅದು ಸ್ಫೂರ್ತಿದಾಯಕವಾದ ಸುಂದರ ದೃಶ್ಯ. ಸೃಷ್ಟಿಯು ತನ್ನೊಂ ದಿಗೆ ಒಂದಾಗಬೇಕೆಂಬುದನ್ನು ನಿಮಗೆ ಸೂಚಿಸುತ್ತಿದೆ. ಇಲ್ಲಿ ಕಲಿತುಕೊಳ್ಳಬೇಕಾದ ಮೂರು ಪಾಠಗಳಿವೆ. ಸೃಷ್ಟಿಗೊಂಡ ವಸ್ತುಗಳ ಅನಿತ್ಯತೆ, ಸೇವಕನಾಗಿ ಮನುಷ್ಯನ ಪಾತ್ರ ಹಾಗೂ ಒಡೆಯನಾಗಿ ಭಗವಂತ. ಪೂಜೆಯಿಂದ ಸೃಷ್ಟಿ, ಮನುಷ್ಯನು ಪೂಜೆ ಮಾಡುವವನು, ಭಗವಂತನು ಪೂಜೆಯನ್ನು ಸ್ವೀಕರಿಸುವವನು. ಇವುಗಳಿಂದ ಬದುಕೆಂದು ಆಟವನ್ನು ಆಡಲಾಗುತ್ತದೆ.

ಪುರುಷೋತ್ತಮನು ಮನುಷ್ಯನ ಸುತ್ತಮುತ್ತಲೂ ತನ್ನ ಆರಾಧನೆಗೆ ಅಗತ್ಯವಾದ ಬೇಕಾದಷ್ಟು ಹೊಸ ಹೊಸ ವಸ್ತುಗಳನ್ನು ಇರಿಸಿದ್ದಾನೆ. ಅನೇಕ ಬಗೆಗಳಲ್ಲಿ ಮನುಷ್ಯನಿಂದ ಪೂಜೆಯನ್ನು ಸ್ವೀಕರಿಸುತ್ತಾನೆ. ಇದಕ್ಕಾಗಿ ಮನುಷ್ಯನು ಸಂತೋಷ ಪಡಬೇಕು. ಹೊಸ ಹೊಸ ಅವಕಾಶಗಳಿಗಾಗಿ ಅವನು ಪ್ರಾರ್ಥಿಸಬೇಕು, ಕೈಗೆ ಸಿಕ್ಕಿದ ಸೇವಾ ಅವಕಾಶಕ್ಕಾಗಿ ಸಂತೋಷಪಡಬೇಕು. ಈ ಮನೋಭಾವದಿಂದ ಅವನಿಗೆ ಅಪಾರ ಸಂತೋಷವಾಗುತ್ತದೆ. ಈ ಸಂತೋಷ ತುಂಬಿದ ಜೀವನವನ್ನು ನಡೆಸುವುದೀಗ ನಿಜವಾಗಿ ಆನಂದ.

ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಏನು ಮಾಡಿದರೂ ಅದೆಲ್ಲವನ್ನೂ ಭಗವಂತನ ಪೂಜೆಯೆಂಬಂತೆ ಮಾಡಿ ಪವಿತ್ರವಾಗಿಸಬೇಕು. ಹೊಸದಾಗಿ ಅರಳಿದ ಹೂವುಗಳನ್ನು ಮಾತ್ರ ಬಿಡಿಸಿ ತಂದು ಶುಚಿಯಾಗಿ, ಬಾಡದ ಹಾಗೆ ಕಾಪಾಡಿಡಲು ಎಚ್ಚರಿಕೆಯನ್ನು ತೆಗೆದುಕೊಳ್ಳುವ ಹಾಗೆ ಶುದ್ಧವೂ ನಿರ್ಮಲವೂ ಆದ ಕೆಲಸಗಳನ್ನು ಮಾತ್ರ ಮಾಡುವ ಎಚ್ಚರಿಕೆಯನ್ನು ವಹಿಸಬೇಕು.

ಪ್ರತಿದಿನವೂ ಈ ದೃಷ್ಟಿಯನ್ನು ಮನೋಚಕ್ಷುವಿನೆದುರಿಗಿರಿಸಿಕೊಂಡು ಆ ಪ್ರಕಾರ ಬದುಕಿದರೆ ಆಗ ಅದು ಭಗವಂತನ ಸುದೀರ್ಘ, ಅವಿಚ್ಛಿನ್ನ ಸೇವೆಯಾಗುತ್ತದೆ. ನಾನು ಮತ್ತು ನೀನು ಎಂಬ ಭಾವನೆಯು ಬೇಗನೆ ಮಾಯವಾಗುತ್ತದೆ; ಸ್ವಾರ್ಥದ

ಎಲ್ಲ ಕುರುಹುಗಳೂ ಮಾಯವಾಗುತ್ತವೆ. ಆಗ ಬದುಕು ಹರಿಪಾರಾಯಣವಾಗಿ ಪರಿವರ್ತಿತವಾಗುತ್ತದೆ. "ನಾನು ಸೇವಕ. ಈ ಜಗತ್ತೇ ಅರ್ಪಣೆಯ ವಸ್ತು. ಭಗವಂತನೇ ಪೂಜಿಸಲ್ಪಡುತ್ತಿರುವ ಒಡೆಯ"—ಈ ಆಲೋಚನೆಯ ಮತ್ತು ಕಾರ್ಯದ ಹಂತವನ್ನು ತಲುಪಿದಾಗ ನನ್ನದು, ನಿನ್ನದು ಎಂಬ ವ್ಯತ್ಯಾಸದ ಭಾವನೆಗಳೆಲ್ಲ ಮಾಯವಾಗಿಬಿಡುತ್ತವೆ.

## ೬ ಭಕ್ತಿ ಮತ್ತು ಜ್ಞಾನಗಳ ಸಂವಾದಿತ್ವ

ಭಕ್ತಿ ಮತ್ತು ಜ್ಞಾನ ಇವುಗಳ ನಡುವೆ ಭೇದವಿಲ್ಲ. ಸಗುಣವು ನಿರ್ಗುಣವಾಗುವಂತೆ ಭಕ್ತಿಯೂ ಜ್ಞಾನವಾಗುತ್ತದೆ. ಕರ್ಮ, ಭಕ್ತಿ ಮತ್ತು ಜ್ಞಾನ ಬೇರೆ ಬೇರೆ ಎಂಬುದನ್ನು ನಾನು ಒಪ್ಪುವುದಿಲ್ಲ. ಇವುಗಳಲ್ಲಿ ಒಂದನ್ನು ಮೊದಲನೆಯದು, ಇನ್ನೊಂದು ಎರಡನೆಯದು, ಮುಂದಿನದು ಮೂರನೆಯದು ಎಂದು ವರ್ಗೀಕರಿಸುವುದೂ ನನಗೆ ಸಮ್ಮತವಲ್ಲ. ಈ ಮೂರರ ಮಿಶ್ರಣವನ್ನಾಗಲಿ, ಅವು ಒಂದರಲ್ಲೊಂದು ಲೀನವಾಗುವ ಸಮುಚ್ಚಯವನ್ನಾಗಲಿ ನಾನು ಒಪ್ಪುವುದಿಲ್ಲ. ಕರ್ಮವೇ ಭಕ್ತಿ, ಭಕ್ತಿಯೇ ಜ್ಞಾನ. ಮೈಸೂರು ಪಾಕಿನ ಒಂದು ತುಂಡು ಸಿಹಿ, ತೂಕ ಮತ್ತು ಆಕಾರ ಮೂರನ್ನೂ ಹೊಂದಿದೆ. ಈ ಮೂರನ್ನೂ ಪರಸ್ಪರ ಬೇರ್ಪಡಿಸುವುದು ಸಾಧ್ಯವಿಲ್ಲ. ಅದರ ಒಂದೊಂದು ಸಣ್ಣ ತುಣುಕಿನಲ್ಲೂ ಸಿಹಿಯಿದೆ, ಅದಕ್ಕೂ ತೂಕವಿದೆ ಮತ್ತು ಆಕಾರವಿದೆ. ಒಂದು ಭಾಗದಲ್ಲಿ ಆಕಾರವನ್ನು, ಇನ್ನೊಂದರಲ್ಲಿ ತೂಕವನ್ನು ಮೂರನೆಯದರಲ್ಲಿ ಸಿಹಿಯನ್ನು ನಾವು ನೋಡುವುದಿಲ್ಲ. ಅದನ್ನು ನಾಲಗೆಯ ಮೇಲಿಟ್ಟಾಗ ಏಕಕಾಲದಲ್ಲಿ ರುಚಿಯು ಗೊತ್ತಾಗುತ್ತದೆ, ತೂಕವು ಕಡಮೆಯಾಗುತ್ತದೆ, ಆಕಾರವು ಬದಲಾಗುತ್ತದೆ. ಹಾಗೆಯೇ ಜೀವ, ಆತ್ಮ ಮತ್ತು ಪರಮಾತ್ಮ ಬೇರೆ ಬೇರೆಯಲ್ಲ; ಅವು ಒಂದೇ.

ಆದ್ದರಿಂದ ಪ್ರತಿಯೊಂದು ಬಿಡಿ ಕೆಲಸವನ್ನೂ ಪೂರ್ಣ ಸೇವಾಭಾವನೆಯಿಂದ, ಪ್ರೇಮದಿಂದ ಮತ್ತು ಜ್ಞಾನದಿಂದ ಮಾಡಬೇಕು. ಅಂದರೆ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಬದುಕಿನ ಚಟುವಟಿಕೆಗಳ ಪ್ರತಿಯೊಂದು ಗುಂಪೂ ಕರ್ಮ, ಭಕ್ತಿ, ಜ್ಞಾನಗಳಿಂದ ಪರ್ಯಾಪ್ತವಾಗಬೇಕು. ಇದೇ ಪುರುಷೋತ್ತಮಯೋಗ. ಅದನ್ನು ಆಚರಣೆಯಲ್ಲಿ ತೋರಿಸಬೇಕು, ಕೇವಲ ಮಾತಿನಲ್ಲಿ ಹೇಳಿದರೆ ಸಾಲದು. ಸಾಧನೆಯನ್ನು ನಿರಂತರವಾಗಿ ವಿಸ್ತರಿಸುತ್ತಿರುವ ಹೃದಯಪೂರ್ವಕ ಭಕ್ತಿ ಮತ್ತು ಜ್ಞಾನಗಳಿಂದ ಮಾಡಬೇಕು. ಭಗವಂತನ ನಾಮಾಮೃತದ ಸಿಹಿಯೇ ಜೀವನದ ಸ್ವಾರಸ್ಯ. ನಾಮದಿಂದ ಪಡೆಯುವ ಆಂತರಿಕ ಆನಂದವು ಹೊರಬದುಕಿನ ಸಂತೋಷಕ್ಕೆ ಸರಿಸಮನಾದದ್ದು.

ವ್ಯಕ್ತಿಯು ಒಂದು ಕ್ರಿಯೆಯನ್ನು ಭಗವದರ್ಪಣವೆಂದು ಮಾಡಿದ್ದೇ ಆದರೆ, ಅವನ ಒಳಿತು, ಹೆಚ್ಚಿನ ಒಳಿತು, ಅತ್ಯಂತ ಒಳಿತು, ಸ್ವಾರ್ಥ, ಪರಾರ್ಥ, ಪರಮಾರ್ಥ—ಎಲ್ಲವೂ ಒಂದಾಗುತ್ತವೆ. ಮೊದಲು ನಾನು ಮತ್ತು ನೀನು ನಾವಾಗುತ್ತೇವೆ. ಆಮೇಲೆ ನಾವು ಮತ್ತು ಅವನು ಒಂದಾಗುತ್ತೇವೆ. ಜೀವವು (ಅಂದರೆ ವ್ಯಕ್ತಿಗತ ಆತ್ಮ, ನಾನು) ಪರಮಾತ್ಮನೊಂದಿಗೆ (ಪ್ರಕೃತಿ, ನೀನು) ಸಂವಾದಿತ್ವವನ್ನು ಸಾಧಿಸಿಕೊಂಡು ಆಮೇಲೆ ಪರಮಾತ್ಮನೊಂದಿಗೆ (ಸರ್ವೋನ್ನತ ಆತ್ಮ, ಅವನು) ಒಂದಾಗಬೇಕು. ಇದೇ ಓಂ ತತ್ ಸತ್ ಮಂತ್ರದ ಅರ್ಥ.

ಇಂದು, ನೆನ್ನೆ ಮತ್ತು ನಾಳೆ ಓಂ ತತ್ ಸತ್ ಇದೆ, ಇತ್ತು ಮತ್ತು ಇರುತ್ತದೆ. 'ಅವನು' ಮತ್ತು 'ನಾನು' ಯಾವಾಗಲೂ ಇರುವವೆ, ಸಾಧನೆಯೂ ಸದಾ ಇದೆ. ಸೂರ್ಯನನ್ನು ಅವನ ಕಿರಣಗಳಿಂದ ಎಂದಿಗೂ ಬೇರ್ಪಡಿಸಲು ಸಾಧ್ಯವಿಲ್ಲ. ಹಾಗೆಯೇ ಯಾವ ಸಾಧಕನೂ ಎಂಥದೇ ಪರಿಸ್ಥಿತಿಯಲ್ಲೂ ಸಾಧನೆಯಿಲ್ಲದೆ ಇರಬಾರದು. ಹಾಗೆ ನಿರಂತರವಾಗಿ ಸಾಧಕನು ಸಾಧನೆಯಲ್ಲಿ ನಿರತನಾದಾಗ ಅವನು ಓಂನೊಂದಿಗೆ ಒಂದಾಗುತ್ತಾನೆ.

# ೭ ಮಾನವನ ಕರ್ತವ್ಯಗಳು

ಹೃದಯದ ಕಶ್ಮಲಗಳನ್ನು ನೈತಿಕ ಜೀವನದಿಂದಲೂ ತನ್ನ ಮಾನವನ ಕರ್ತವ್ಯವನ್ನು ನಿರ್ವಹಿಸುವುದರಿಂದಲೂ ತೊಳೆಯಬೇಕು. ಒಂದು ಸಮಯ ಬರುತ್ತದೆ, ಮನುಷ್ಯನು ಬಳಲಿ ದುರ್ಬಲನಾಗುತ್ತಾನೆ, ಆದರೆ ಆಗ ಅವನು ಹೀಗೆ ಪ್ರಾರ್ಥಿಸಬೇಕು, "ದೇವರೆ, ಈಗ ಪರಿಸ್ಥಿತಿಯು ನನ್ನ ಶಕ್ತಿಯನ್ನು ಮೀರಿ ಹೊರಟುಹೋಗಿದೆ. ಇನ್ನು ಶ್ರಮಪಡಲಾರೆ ಅನ್ನಿಸುತ್ತದೆ, ತುಂಬಾ ಹೊರೆಯೆನಿಸುತ್ತಿದೆ. ದಯವಿಟ್ಟು ಶಕ್ತಿಯನ್ನು ಕೊಡು ಸ್ವಾಮಿ."

ಮೊದಲು ಭಗವಂತನು ದೂರ ನಿಂತುಕೊಂಡು ಮಾನವನು ಮಾಡುವ ಪ್ರಯತ್ನಗಳನ್ನು ಗಮನಿಸುತ್ತಾನೆ, ತನ್ನ ವಿದ್ಯಾರ್ಥಿಗಳು ತಾನು ಹಾಕಿದ ಪ್ರಶ್ನೆಗಳಿಗೆ ಉತ್ತರ ಬರೆಯುವುದನ್ನು ನೋಡುತ್ತಾ ಪ್ರತ್ಯೇಕವಾಗಿ ನಿಲ್ಲುವ ಉಪಾಧ್ಯಾಯನ ಹಾಗೆ. ಆಮೇಲೆ ಮಾನವನು ಭೋಗಾಸಕ್ತಿಯನ್ನು ತೊರೆದು ಸತ್ಕಾರ್ಯಗಳಲ್ಲೂ ಸೇವೆಯಲ್ಲೂ ನಿರತನಾದಾಗ ಭಗವಂತನು ಅವನಿಗೆ ಪ್ರೋತ್ಸಾಹ ಕೊಡಲೆಂಬಂತೆ ಹತ್ತಿರಕ್ಕೆ ಬರುತ್ತಾನೆ. ಅವನು ಮುಚ್ಚಿದ ಬಾಗಿಲಿನ ಆಚೆ ಒಡೆಯನ ಹಕ್ಕುಗಳನ್ನೂ ತನ್ನ ಮಿತಿಗಳನ್ನೂ ಅರಿತ ಸೇವಕನ ಹಾಗೆ ನಿಂತುಕೊಂಡು ಕಾಯುವ ಸೂರ್ಯನಾರಾಯಣ. ತಾನು ಬಂದಿರುವುದನ್ನು ಅವನೇನೂ ಕೂಗಿ ಹೇಳುವುದಿಲ್ಲ ಅಥವಾ ಬಾಗಿಲು ಬಡಿಯುವುದಿಲ್ಲ. ಸುಮ್ಮನೆ ಕಾದು ನಿಲ್ಲುತ್ತಾನೆ. ಯಜಮಾನನು

ಬಾಗಿಲನ್ನು ತುಸು ತೆರೆದೊಡನೆಯೇ ಅವನು ಸೀದಾ ಒಳಕ್ಕೆ ಧಾವಿಸಿ ಅಲ್ಲಿದ್ದ ಕತ್ತಲೆಯನ್ನು ಆಚೆಗೆ ಅಟ್ಟಿಬಿಡುತ್ತಾನೆ. ಭಗವಂತನ ನೆರವನ್ನು ಕೋರಿದರೆ ಅವನು ನೆರವು ನೀಡಲು ಕೈಚಾಚಿ ಸಮೀಪದಲ್ಲೇ ನಿಲ್ಲುತ್ತಾನೆ. ಆದ್ದರಿಂದ ಮಾನವನಲ್ಲಿ ಅಗತ್ಯ ವಾಗಿರುವುದು ಅವನನ್ನು ಸ್ಮರಿಸಲು ಬೇಕಾದ ಜ್ಞಾನಕ್ಕಾಗಿ ಪ್ರಾರ್ಥಿಸುವ ವಿವೇಕ ಅಷ್ಟೆ.

# ೮ ಸದ್ಗುಣವೇ ಜ್ಞಾನ

ಜ್ಞಾನ ಎಂದರೆ ಅರಿವು. ಆದರೆ ಅದು ಕೇವಲ ಬೌದ್ಧಿಕ ಕಸರತ್ತಲ್ಲ. 'ತಿನ್ನುವುದು' ಎಂದರೆ ಆಹಾರವನ್ನು ನಾಲಗೆಯ ಮೇಲೆ ಇರಿಸಿಕೊಳ್ಳುವುದು ಎಂದಲ್ಲ. ಆಹಾರ ವನ್ನು ಅಗಿದು, ನುಂಗಿ, ಅರಗಿಸಿಕೊಂಡು, ರಕ್ತಗತವಾಗಿಸಿ, ಸ್ನಾಯುವಾಗಿ, ಮೂಳೆಯಾಗಿ, ಶಕ್ತಿಯಾಗಿ, ಸತ್ವವಾಗಿ ಪರಿವರ್ತಿಸಿದಾಗ ಮಾತ್ರ ತಿನ್ನುವುದು ವಿಹಿತವಾಗುತ್ತದೆ. ಹಾಗೆಯೇ ಅರಿವು ಅಥವಾ ಜ್ಞಾನವು ಬದುಕಿನ ಎಲ್ಲ ಕ್ಷ ಣಗಳಿಗೂ ಇಳಿಯಬೇಕು, ಅದನ್ನು ಸತ್ವಯುತವನ್ನಾಗಿ ಮಾಡಬೇಕು. ಅದನ್ನು ಸಕಲ ಅಂಗಾಂಗಗಳ ಹಾಗೂ ಇಂದ್ರಿಯಗಳ, ಎಲ್ಲ ಕರ್ಮೇಂದ್ರಿಯ ಜ್ಞಾನೇಂದ್ರಿ ಯಗಳ ಮೂಲಕ ವ್ಯಕ್ತಪಡಿಸಬೇಕು. ಮನುಷ್ಯನು ಈ ಉನ್ನತವಾದ ನೆಲೆಗೆ ಏರಬೇಕು.

ಕೇವಲ ತಿಳಿವಳಿಕೆಯನ್ನು ಸಂಗ್ರಹಿಸಿಟ್ಟುಕೊಂಡರೆ ಅದು ಜ್ಞಾನವಲ್ಲ; ಸದ್ಗುಣವೇ ಜ್ಞಾನ.

ವ್ಯಕ್ತಿಯು ಸೇವಾನಿರತನಾಗಬೇಕಾದರೆ ಸ್ವಲ್ಪ ಮಟ್ಟಿನ ಭೋಗ ಕೂಡ ಆವಶ್ಯಕ. ಅಂತಹ ಭೋಗವು ಯಜ್ಞದ ಭಾಗವಾಗುತ್ತದೆ. ಈ ದೇಹಯಂತ್ರವು ಕೆಲಸ ಮಾಡಬೇಕಾದರೆ ಅನ್ನದ ಇಂಧನವನ್ನು ಉಪಯೋಗಿಸಬೇಕು. ಅನ್ನವು ಯಜ್ಞ ವಲ್ಲ. ಆದರೆ ಅದು ಯಜ್ಞವನ್ನು ಸಾಧ್ಯವಾಗುವಂತೆ ಮಾಡುತ್ತದೆ. ಆದ್ದರಿಂದ ಆಹಾರ ಸೇವಿಸುವುದನ್ನು ಲೋಭವನ್ನು ಈಡೇರಿಸಿಕೊಳ್ಳುವುದೆಂದಾಗಲಿ ಉದರ ಪೋಷಣವೆಂದಾಗಲಿ ಲೇವಡಿ ಮಾಡಬೇಕಾಗಿಲ್ಲ. ಅದೂ ಪೂಜೆಯ ಒಂದು ಭಾಗ.

ಪೂಜೆ ಎಂದರೆ ಗಿಡದಿಂದ ಒಂದು ಹೂವನ್ನು ಕಿತ್ತು ತಂದು ವಿಗ್ರಹದ ಮೇಲಿಡು ವಷ್ಟು ಮಾತ್ರವಲ್ಲ. ಹೂವನ್ನು ಕೊಟ್ಟ ಆ ಗಿಡವನ್ನು ಅಕ್ಕರೆಯಿಂದ ಬೆಳೆಸಲು ಕಷ್ಟಪಟ್ಟನಲ್ಲ, ಆ ತೋಟಗಾರ, ಅವನೂ ಆರಾಧಕನೇ. ಆಹಾರವನ್ನು ಕೊಟ್ಟರೆ ಮಾತ್ರವೇ ದೇಹವು ಕೆಲಸ ಮಾಡುವುದು. ಯಜ್ಞ ಮಾಡುವುದಕ್ಕೆ ಅಗತ್ಯವಾದ ಸಾಧನವೂ ಯಜ್ಞವೇ.

ಮೂರು ಉದ್ದೇಶಗಳಿಂದ ಮಾಡಿದ ಎಲ್ಲ ಕರ್ಮವೂ ಯಜ್ಞವೇ. ಆ ಮೂರು ಜಗತ್ತನ್ನು ಭಗವಂತನ ಪೂಜೆಗಾಗಿ ಉಪಯೋಗಿಸುವುದು; ಸಮಾಜದಲ್ಲಿ ಶಾಂತಿಯನ್ನೂ ನ್ಯಾಯವನ್ನೂ ಸ್ಥಾಪಿಸುವುದು; ದೇಹದ ಕಾರ್ಯಗಳನ್ನು ನಿಯಂತ್ರಿಸಿ ಸಂಯೋಜಿಸುವುದು. ಮೊದಲನೆಯದನ್ನು ಯಜ್ಞ ಎಂದೂ ಎರಡನೆಯದನ್ನು ದಾನ ಎಂದೂ ಮೂರನೆಯದನ್ನು ತಪಸ್ಸು ಎಂದೂ ಕರೆಯಲಾಗುತ್ತದೆ. ಮಾನವನ ಎಲ್ಲ ಚಟುವಟಿಕೆಗಳೂ ಈ ಮೂರು ಅಗತ್ಯಗಳ ಅಧೀನವಾಗಿರಬೇಕು.

# ೯ ಸತ್ಯವೇ ದೇವರು

ಈ ಹಂತವನ್ನು ತಲುಪಬೇಕಾದರೆ ನೈತಿಕ ಜೀವನವು ತಳಹದಿ. ನೈತಿಕ ಜೀವನವು ಸತ್ಯ ಮತ್ತು ಮಿಥ್ಯೆಗಳ ನಡುವೆ ವಿವೇಚನೆಯನ್ನು ಅವಲಂಬಿಸಿದೆ. ಚಿಪ್ಪನ್ನು ಎಸೆದು ಮುತ್ತನ್ನು ಇಟ್ಟುಕೊಳ್ಳುವ ಹಾಗೆ ಶುದ್ಧ ಸತ್ವವಾದ ಸತ್ಯವನ್ನು ಸ್ವೀಕರಿಸಿ ಅನಗತ್ಯವಾದುದನ್ನು ತ್ಯಜಿಸಬೇಕು. ಅಲ್ಲಿ ಮತ್ತೆ, ವ್ಯಕ್ತಿಗತವಾದ ಪರಿಶ್ರಮ ಹಾಗೂ ಭಗವಂತನ ಕೃಪೆ ಎರಡೂ ಇರಬೇಕು. ದೇಹವೂ ಆತ್ಮವೂ ಬೇರೆ ಬೇರೆ ಎಂಬ ಮಹಾ ಪಾಠವನ್ನು ನಿರಂತರವಾಗಿ ಅಭ್ಯಾಸ ಮಾಡಬೇಕು. ಇದು ಅತ್ಯಂತ ಪ್ರಯೋಜನಕಾರಿಯಾದ ಅಭ್ಯಾಸ. ಬದುಕಿನ ಲೌಕಿಕ ಹಾಗೂ ಆಧ್ಯಾತ್ಮಿಕ ಮುಖಗಳೆರಡಕ್ಕೂ ಈ ವಿವೇಕ ಅಥವಾ ವಿವೇಚನೆ ಅಗತ್ಯ. ಸೃಷ್ಟಿ, ಸ್ಥಿತಿ, ಲಯಗಳಿಗೆ ಅತೀತವಾಗಿ ನಿಲ್ಲುವ, ಸಾಕ್ಷಾತ್ ಭಗವಂತನೇ ಆದ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಲು ಅದು ಅನಿವಾರ್ಯ.

ಪರಮೋನ್ನತ ಭಗವಂತನಿಗೆ ಸೇವೆ ಮಾಡಲು ಆಹಾರ ಶುದ್ಧಿಯನ್ನು ಪರಿಪಾಲಿಸಬೇಕು. ಆಹಾರ ಎಷ್ಟು ಸೇವಿಸಬೇಕೆನ್ನುವುದು ಪ್ರಶ್ನೆಯಲ್ಲ, ಯಾವ ಗುಣದ ಆಹಾರ ಎನ್ನುವುದು. ಪ್ರಮಾಣದ ವಿಷಯವನ್ನು ಅಲ್ಲಗಳೆಯುವಂತಿಲ್ಲ ನಿಜ. ಆದರೆ ಆಹಾರ ಅಗತ್ಯವಾಗಿರುವುದಾದರೂ ಏಕೆ? ಸೇವೆಗೈಯಲು ಬೇಕಾದ ಶಕ್ತಿಯನ್ನು ಗಳಿಸುವುದಕ್ಕಾಗಿ ಅದು ಅಗತ್ಯವಾಗಿದೆ. ಸೇವಾಯಜ್ಞವು ಫಲ ಕೊಡಬೇಕಾದರೆ ಆಹಾರ ಬೇಕು, ಆ ಆಹಾರವು ಪರಿಶುದ್ಧವಾಗಿರಬೇಕು. ಆಹಾರದ ಈ ಅಂಶಕ್ಕೆ ಗಮನ ಕೊಡಲೇ ಬೇಕು.

ಹೀಗೆ ಪ್ರತಿಯೊಬ್ಬನೂ ತನ್ನ ಅಭ್ಯಾಸಗಳು ಮತ್ತು ತನ್ನ ಶೀಲದ ಲಕ್ಷಣಗಳ ವಿಷಯದಲ್ಲಿ ನಿರಂತರವಾಗಿ ಗಮನ ಕೊಡುತ್ತಿರಬೇಕು. ಆಗ ದೇಹದ ಮೋಹವು ಕಳಚಿ ಹೋಗಿ ಆತ್ಮಾನಂದವನ್ನು ಗಳಿಸುವ ಪ್ರಯತ್ನವು ಸುಲಭವಾಗುತ್ತದೆ.

ಮನುಷ್ಯನು ಸಾಕ್ಷಾತ್ಕಾರವನ್ನು ಪಡೆಯುವುದಕ್ಕೆ ಪೂರ್ವಭಾವಿಯಾಗಿ ಈ ಹಲವು ಬಗೆಯ ಕರ್ತವ್ಯಗಳನ್ನು ನೆರವೇರಿಸುವುದು ಅಗತ್ಯ; ಏಕೆಂದರೆ ಆ ಬಗೆಯ ಆಧ್ಯಾತ್ಮಿಕ ಜೀವನದ ಮೂಲಕ ಮಾತ್ರವೇ ಅವನು ಪರಿಶುದ್ಧಿಯನ್ನು ಗಳಿಸ ಬಹುದು. ಆ ಪರಿಶುದ್ಧ ಸ್ವಭಾವದಿಂದ ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆಯ ಬಹುದು. ಈ ಸಾಧನೆಯಲ್ಲಿ ತೊಡಗದೆ ಬರಿದೆ ಪರಮಾತ್ಮನನ್ನು ಅರಿಯುವುದು ಸಾಧ್ಯವಾಗಲಿಲ್ಲ ಎಂದು ಹಲುಬಿದರೆ ಏನೂ ಪ್ರಯೋಜನವಿಲ್ಲ.

ಈ ಲೌಕಿಕ ಪ್ರಪಂಚದಲ್ಲಿ ಆಧ್ಯಾತ್ಮಿಕ ಜೀವನದ ಹಾಗೂ ಅದರ ಪರಿಶುದ್ಧಿಯ ಅನುಭವ ಇರದವನು ಆಧ್ಯಾತ್ಮಿಕ ಸಾಧನೆಯನ್ನು ಇಷ್ಟಪಡಲಾರನು. ಅದರ ಮೌಲ್ಯವನ್ನು ಅರಿತ ಮೇಲೆ ಮಾತ್ರವೆ ಆಧ್ಯಾತ್ಮಿಕ ಸಾಧನೆಯನ್ನು ಕೈಗೊಳ್ಳಬಹುದು ಎಂದು ಕೆಲವರು ಹೇಳಬಹುದು. ಆದರೆ ಇದು ಈಜು ಕಲಿತನಂತರವೇ ನೀರಿಗೆ ಇಳಿಯಬೇಕು ಎಂದು ಹೇಳಿದ ಹಾಗಾಗುತ್ತದೆ. ಈಜು ಕಲಿಯಬೇಕಾದರೆ ಮೊದಲು ನೀರಿಗಿಳಿಯಬೇಕು, ತೇಲು ಬುರುಡೆಯನ್ನು ಕಟ್ಟಿಕೊಂಡು. ಹಾಗೆಯೇ ಒಂದು ಸಹಾಯಕ ವಸ್ತುವನ್ನು ಮನಸ್ಸಿಗೆ ಕಟ್ಟಿಕೊಂಡು ಯಾವುದೇ ಹೆದರಿಕೆ ಯಿಲ್ಲದೆ ಆಧ್ಯಾತ್ಮಿಕ ಸಾಧನೆಗೆ ಧುಮುಕಿರಿ. ಆಗ ಆಧ್ಯಾತ್ಮಿಕ ಸಾಧನೆಯ ಮೌಲ್ಯ ವೇನೆಂದು ನಿಮಗೇ ಅರ್ಥವಾಗುತ್ತದೆ. ಆಧ್ಯಾತ್ಮಿಕ ಪಥದ ಸ್ವರೂಪ ಮತ್ತು ಪರಿಸ್ಥಿತಿಗಳು ಈ ಪಥದಲ್ಲಿ ನಡೆಯುವವರಿಗೆ ಮಾತ್ರವೇ ತಿಳಿದಿರುತ್ತದೆ. ಸತ್ಯ ಮತ್ತು ವಿವೇಕಗಳ ಪಥವು ಪರಮಾತ್ಮನೆಡೆಗೆ ಒಯ್ಯುತ್ತವೆ ಎಂದು ಅವರು ಬಲ್ಲರು. ಆ ದಾರಿಯನ್ನು ತುಳಿಯದವರು, ಅದರ ಅಸ್ತಿತ್ವವನ್ನೇ ತಿಳಿಯದವರು ತಮಗಾಗಲಿ ಇತರರಿಗಾಗಲಿ ಅದನ್ನು ಕುರಿತು ವಿವರಿಸಲಾರರು.

ಪರಮಾತ್ಮನೊಬ್ಬನೇ ಸತ್ಯ. ಪರಮಾತ್ಮನೇ ಪ್ರೇಮ. ಅವನನ್ನು ಕುರಿತು ಸತ್ಯ ಮತ್ತು ಪ್ರೇಮ ಎಂದು ಧ್ಯಾನ ಮಾಡಿರಿ. ನೀವು ಯಾವ ರೂಪದ ಮೇಲೆ ಧ್ಯಾನ ಮಾಡುವಿರೋ ಅದೇ ರೂಪದಲ್ಲಿ ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯ. ಸದಾ ಅವನ ಭಕ್ತರ ಸಹವಾಸದಲ್ಲಿರಿ. ಈ ಸತ್ಸಂಗದ ಮೂಲಕ ವಿವೇಕ ಮತ್ತು ವೈರಾಗ್ಯ ಗಳು ಬೇರೂರುತ್ತವೆ, ವರ್ಧಿಸುತ್ತವೆ. ನಿಮ್ಮ ಸತ್ವವನ್ನು ಬಲಪಡಿಸಿ ಆಂತರಿಕ ಶಾಂತಿಯನ್ನು ನೀಡುತ್ತವೆ. ಆಗ ನಿಮ್ಮ ಮನಸ್ಸು ಪರಮಾತ್ಮನಲ್ಲಿ ಲೀನವಾಗುತ್ತದೆ.

ನೀವು ಏನು ಮಾಡಿದರೂ ಅದರಲ್ಲಿ ನಿಮಗಿರುವ ಸಮಸ್ತ ಶಕ್ತಿಯನ್ನೂ ಪ್ರತಿಭೆ ಯನ್ನೂ ವಿನಿಯೋಗಿಸಿ. ಸತ್ಯವನ್ನು ಮಾತನಾಡಿ ಮತ್ತು ಅದರಂತೆ ನಡೆಯಿರಿ. ಮೊದಲು ನೀವು ಮುಗ್ಗರಿಸಬಹುದು, ಹಲವು ಕಷ್ಟಗಳನ್ನು ಯಾತನೆಗಳನ್ನು ಅನುಭವಿಸಬಹುದು. ಆದರೆ ಅಂತಿಮವಾಗಿ, ನೀವು ಜಯಗಳಿಸಿಯೇ ತೀರುವಿರಿ, ಗೆಲುವು ಮತ್ತು ಆನಂದ ನಿಮ್ಮದಾಗುವುದು. 'ಸತ್ಯಮೇವ ಜಯತೇ ನಾನೃತಂ' ಎಂಬ ಉಕ್ತಿಯನ್ನು ನೆನಪಿಗೆ ತರಬಯಸುತ್ತೇನೆ. ನಿಮ್ಮ ನಡವಳಿಕೆಯಿಂದ, ಜೀವನ ವಿಧಾನದಿಂದ, ನೀವು ಸತ್ಯವನ್ನು ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬಹುದು.

# ೧೦ ಅಹಂಕಾರವು ಅಶಾಂತಿಗೆ ಕಾರಣ

ಮನುಷ್ಯನು ತನ್ನಲ್ಲೇ ಅಪಾರ ಸಂಖ್ಯೆಯ ಬಗೆಬಗೆಯಾದ ಸ್ವಾರ್ಥಯುತ ಅಭ್ಯಾಸಗಳನ್ನೂ ಪ್ರವೃತ್ತಿಗಳನ್ನೂ ಬೆಳೆಸಿಕೊಂಡಿರುತ್ತಾನೆ. ಅದರಿಂದ ತನಗೆ ತಾನೇ ತುಂಬಾ ಅತೃಪ್ತಿಯನ್ನು ತಂದುಕೊಳ್ಳುತ್ತಾನೆ. ಇವೆಲ್ಲಕ್ಕೂ ಪ್ರಚೋದನೆ ಬರುವುದು ಅಧಿಕಾರ, ಪ್ರಭುತ್ವ ಮತ್ತು ಶಕ್ತಿಯನ್ನು ಕೂಡಿಟ್ಟುಕೊಳ್ಳಬೇಕೆಂಬ ದುರಾಸೆ, ಎಂದಿಗೂ ಶಾಶ್ವತವೂ ಪೂರ್ಣವೂ ಆಗಲಾರದ ವಸ್ತುಗಳ ಬಗೆಗೆ ಲೋಭ ಇವುಗಳ ಒಟ್ಟಿಲಿನಿಂದ. ಅವುಗಳನ್ನೇ ಆಗಲಿ ಕಟ್ಟರೆಯಾಗುವಷ್ಟನ್ನು ಪಡೆಯಲು ಅವನಿಗೆ ಸಾಧ್ಯವೇ ಇಲ್ಲ. ಸರ್ವಶಕ್ತಿತ್ವ ಇರುವುದು ಸರ್ವೇಶ್ವರನಿಗೆ, ಎಲ್ಲರ ಪ್ರಭುವಿಗೆ. ವ್ಯಕ್ತಿಯು ತಾನು ಸಕಲ ಕಲೆಗಳ ಪ್ರಭುವಾದೆನೆಂದು ಸಕಲೈಶ್ವರ್ಯಗಳ ಒಡೆಯನಾದೆನೆಂದು ಅಥವಾ ಸಕಲ ವಿದ್ಯೆಗಳ ಪಾರಂಗತನಾದೆನೆಂದು, ಶಾಸ್ತ್ರವಿದನಾದೆನೆಂದು ಹೆಮ್ಮೆಪಡಬಹುದು. ಆದರೆ ಇದೆಲ್ಲವನ್ನೂ ಅವನು ಪಡೆದದ್ದು ಯಾರಿಂದ? ಆ ಮೂಲವು ಬಹಳ ದೊಡ್ಡದಿರಬೇಕು. ತನ್ನ ಪರಿಶ್ರಮದಿಂದ, ದುಡಿಮೆಯಿಂದ ಪಡೆದೆನೆಂದೂ ಅವನು ಬೇಕಾದರೆ ಹೇಳಿಕೊಳ್ಳಬಹುದು. ಆದರೆ ಖಂಡಿತವಾಗಿಯೂ ಇದೆಲ್ಲವನ್ನೂ ಯಾರೋ ಅವನಿಗೆ ಕೊಟ್ಟರು ತಾನೆ, ಒಂದಲ್ಲ ಒಂದು ರೀತಿಯಲ್ಲಿ? ಅದನ್ನವನು ಇಲ್ಲವೆನ್ನಲು ಸಾಧ್ಯವಿಲ್ಲ. ಸಕಲ ಅಧಿಕಾರ, ಸಕಲ ಶಕ್ತಿ ಹುಟ್ಟಿ ಬರುವುದು ಸರ್ವೇಶ್ವರನೆಂಬ ಮೂಲದಿಂದ. ಆ ಸರ್ವಶಕ್ತನನ್ನು ಅಲಕ್ಷಿಸಿ, ತಾವು ಪಡೆದಿರುವ ಅಲ್ಪ ಶಕ್ತಿಯನ್ನು ತನ್ನ ಸ್ವಂತದ್ದೆಂದು ಭ್ರಮಿಸುವುದು ನಿಜವಾಗಿ ಅಹಂಕಾರ, ಗರ್ವ, ಉದ್ಧಟತನ.

ವ್ಯಕ್ತಿಯು ಆ ಪರಮೋನ್ನತ ಶಕ್ತಿಯ ಅಸಲಿ ವಾಹಕವಾಗಿದ್ದರೆ, ಅದನ್ನು ಸತ್ಯ, ದಯೆ, ಪ್ರೇಮ, ಸಹನೆ, ಸಹಿಷ್ಣುತೆ, ಕೃತಜ್ಞತೆ ಮೊದಲಾದ ಗುಣಗಳಿಂದ ಗುರುತಿಸಬಹುದು. ಇವು ಎಲ್ಲಿ ಇವೆಯೋ ಅಲ್ಲಿ ಅಹಂಕಾರವಿರಲು ಸಾಧ್ಯವಿಲ್ಲ, ಅದಕ್ಕೆ ಅಲ್ಲಿ ಸ್ಥಳವಿಲ್ಲ. ಆದ್ದರಿಂದ ಈ ಗುಣಗಳನ್ನು ಬೆಳೆಸಿಕೊಳ್ಳಲು ಪ್ರಯತ್ನಿಸಿ.

ಆತ್ಮದ ಬೆಳಕನ್ನು ಅಹಂಕಾರವು ಮರೆಮಾಡುತ್ತದೆ. ಆದ್ದರಿಂದ ಅಹಂಕಾರವು ನಾಶವಾದಾಗ ಎಲ್ಲ ಕಷ್ಟಗಳೂ ಕೊನೆಗೊಳ್ಳುತ್ತವೆ, ಅತೃಪ್ತಿಗಳು ಮಾಯವಾಗಿ ಆನಂದವು ಲಭಿಸುತ್ತದೆ. ಮಂಜು ಸೂರ್ಯನನ್ನು ಮರೆಮಾಡುವಂತೆ ಅಹಂಕಾರವು ಶಾಶ್ವತ ಆನಂದವನ್ನು ಮರೆಮಾಡುತ್ತದೆ. ಕಣ್ಣುಗಳು ತೆರೆದಿದ್ದರೂ ಒಂದು ಸಣ್ಣ ಬಟ್ಟೆಯ ಅಥವಾ ರಟ್ಟಿನ ತುಂಡು ನಿಮ್ಮ ದೃಷ್ಟಿಯು ಪರಿಣಾಮಕಾರಿಯಾಗಿ ಮತ್ತು ಉಪಯುಕ್ತವಾಗಿ ಕೆಲಸ ಮಾಡುವುದನ್ನು ತಡೆಯಬಹುದು.

ಹಾಗೆಯೇ ಸ್ವಾರ್ಥದ ತೆರೆ ಮನುಷ್ಯನು ದೇವರನ್ನು ನೋಡದಂತೆ ಅಡ್ಡಿಪಡಿಸುತ್ತದೆ. ವಾಸ್ತವವಾಗಿ ಬೇರೆಲ್ಲದಕ್ಕಿಂತಲೂ ಅತ್ಯಂತ ಸಮೀಪದಲ್ಲಿರುವ ಭಗವಂತನನ್ನು ನೋಡಲು ಸಾಧ್ಯವಾಗದೆ ಹೋಗುತ್ತದೆ. ಎಷ್ಟೆಷ್ಟೋ ಜನ ಸಾಧಕರು, ಸನ್ಯಾಸಿಗಳು, ಹಲವಾರು ವರ್ಷಗಳ ಕಾಲದ ಕಠಿಣ ಹೋರಾಟದಿಂದ ತ್ಯಾಗದಿಂದ ಗಳಿಸಿದ ಉನ್ನತ ಗುಣಗಳೆಲ್ಲವನ್ನೂ ಹೀಗೆ ಸ್ವಾರ್ಥಪರತೆಯಿಂದಾಗಿ ಕೈಜಾರಿ ಹೋಗುವಂತೆ ಮಾಡಿಕೊಂಡಿದ್ದಾರೆ. ಏಕೆಂದರೆ, ಭಗವತ್ಸಾಕ್ಷಾತ್ಕಾರದ ಆನಂದವಿಲ್ಲದ ಶಕ್ತಿಯು ತಳಪಾಯವಿಲ್ಲದ ಗೋಡೆ. ಕೇವಲ ಪಾಂಡಿತ್ಯದಿಂದ ಏನೇನೂ ಪ್ರಯೋಜನವಿಲ್ಲ; ವೇದಗಳು, ಉಪನಿಷತ್ತುಗಳು ಮತ್ತು ಶಾಸ್ತ್ರಗಳು, ಸಿದ್ಧಾಂತಗಳು ಇರುವುದು ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವ ಸಲುವಾಗಿ. ಶಬ್ದಸಂಪತ್ತಿ ಅಗಾಧ ವಾಗಿರಲಿ, ವಿದ್ವತ್ತಿನ ಮಟ್ಟ ಎಷ್ಟೇ ದೊಡ್ಡದಿರಲಿ ಅದೆಲ್ಲ ವ್ಯರ್ಥ. ವೇದೋಪನಿಷತ್ತು ಗಳು ಮತ್ತು ಶಾಸ್ತ್ರಗಳ ಬೋಧನೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದರೆ ಮೊದಲು, "ನನಗೆ ಗೊತ್ತು," ಎಂಬ ಭಾವನೆಯನ್ನು ಚಿವುಟಿ ಹಾಕಬೇಕು. ನಿಜವಾದ ಸತ್ವ ಯಾವುದೋ ಅದರ ಕಡೆಗೆ ಕಣ್ಣು ತೆರೆದು, ಅದರ ಮೇಲೆ ಚಿಂತನೆ ಮಾಡಬೇಕು. ಆಗ ಆನಂದವು ದೊರೆತೇ ತೀರುತ್ತದೆ.

ಪಂಚಾಂಗದಲ್ಲಿ ಹತ್ತು ಕೊಳಗ ಮಳೆ ಬೀಳುತ್ತದೆಂದು ಬರೆದಿರಬಹುದು. ಆದರೆ ಅದನ್ನು ಹತ್ತು ಸಾರಿ ಮಡಿಸಿ ಎಷ್ಟೇ ಹಿಂಡಿದರೂ ಒಂದು ಹನಿ ಮಳೆಯೂ ಅದ ರಿಂದ ಬರಲಾರದು. ಪಂಚಾಂಗದ ಉದ್ದೇಶ ಮಳೆಯನ್ನು ಕೊಡುವುದಲ್ಲ. ಮಳೆ ಮತ್ತು ಅದರ ಪ್ರಮಾಣವನ್ನು ಕುರಿತು ಮಾಹಿತಿಯನ್ನು ನೀಡುವುದು. ಅದರ ಪುಟಗಳಲ್ಲಿ ಹತ್ತು ಕೊಳಗ ಮಳೆ ಇಲ್ಲ; ಮೇಲೆ ಮೋಡಗಳಲ್ಲಿದೆ. ಹಾಗೆಯೇ ಶಾಸ್ತ್ರಗಳು, ಸಿದ್ಧಾಂತಗಳು, ಸೂತ್ರಗಳು, ನಿಯಮ ನಿಬಂಧನೆಗಳು, ಕರ್ತವ್ಯಗಳನ್ನು ಕುರಿತು ಮಾಹಿತಿಯನ್ನು ನೀಡುವುವು. ವೇದೋಪನಿಷತ್ತುಗಳು ಮತ್ತು ಶಾಸ್ತ್ರಗಳ ಭವ್ಯ ಲಕ್ಷಣವೆಂದರೆ, ಅವು ಶಾಂತಿಯನ್ನೋ ಮೋಕ್ಷವನ್ನೋ ಪಡೆಯುವ ವಿಧಾನಗಳನ್ನು ಕುರಿತು ಬೋಧಿಸುತ್ತವೆ. ಆದರೆ ಅವು ಆನಂದರಸಭರಿತವಾಗಿಲ್ಲ, ಅವುಗಳನ್ನು ಹಿಂಡಿ ಅದನ್ನು ಪಡೆಯಲು ಸಾಧ್ಯವಿಲ್ಲ. ಅಲ್ಲಿ ವರ್ಣಿಸಿರುವ ವ್ಯಕ್ತಿಯು ಪಥವನ್ನೂ ನಿರ್ದೇಶನವನ್ನೂ ಲಕ್ಷ್ಯವನ್ನೂ ಕಂಡುಹಿಡಿಯಬೇಕು. ಆ ಪಥದಲ್ಲಿ, ಆ ಮಾರ್ಗದರ್ಶನದಂತೆ ನಡೆದು ಆ ಗುರಿಯನ್ನು ತಲುಪಬೇಕು. ಆದರೆ, "ನನಗೆ ಎಲ್ಲ ಗೊತ್ತು," ಎಂಬ ಗರ್ವವು ಮುಂದಾದರೆ ಅವನತಿ ಅನಿವಾರ್ಯ. ಮೋಕ್ಷದ ರಹಸ್ಯವು ಈ ಅಪಾಯವನ್ನು ಅರ್ಥಮಾಡಿಕೊಳ್ಳುವುದರಲ್ಲಿದೆ. ಈ ಅಪಾಯವನ್ನು ನಿವಾರಿಸದೆ ಹೋದರೆ ಪುನರ್ಜನ್ಮವು ಅನಿವಾರ್ಯವಾಗುತ್ತದೆ.

ಇದೆಲ್ಲವನ್ನೂ ತಿಳಿದುಕೊಂಡು ಆಧ್ಯಾತ್ಮಿಕ ಸಾಧನೆಯಲ್ಲಿ ಮುಳುಗಿದ್ದೇ ಆದರೆ ಈ ಪ್ರಪಂಚವೂ ಅದರ ಕಷ್ಟಗಳೂ ನಿಮ್ಮನ್ನು ಕಾಡುವುದಿಲ್ಲ. ಈ ಸತ್ಯದಿಂದ ದೂರ ವಾಗಿದ್ದರೆ ಮಾತ್ರ ನೀವು ಕಷ್ಟವನ್ನೂ ನೋವನ್ನೂ ಸಂಕಟವನ್ನೂ ಅನುಭವಿಸುವಿರಿ.

ಪೇಟೆಯಿಂದ ದೂರದಲ್ಲಿ ನಿಂತರೆ ಅಸ್ಪಷ್ಟವಾದ ಮೊರೆತ ಮಾತ್ರ ಕೇಳಿಸುತ್ತದೆ. ಆದರೆ ಅದರ ಸನಿಹಕ್ಕೆ ಬಂದ ಹಾಗೆಲ್ಲ ಬೇರೆ ಬೇರೆ ಮಾತುಗಳು, ಚೌಕಾಶಿ ಮಾಡುವ ಸಂಭಾಷಣೆಗಳು ಸ್ಪಷ್ಟವಾಗಿ ಕಿವಿಗೆ ಬೀಳುತ್ತವೆ. ಹಾಗೆಯೇ ಪರಮಾತ್ಮನ ಸತ್ಯವು ತಿಳಿಯುವವರೆಗೆ ಪ್ರಪಂಚದ ಮೊರೆತದಿಂದ ಗರ್ಜನೆಯಿಂದ ಸ್ತಬ್ಧರಾಗುತ್ತೀರಿ. ಆದರೆ ಆಧ್ಯಾತ್ಮಿಕ ಸಾಧನೆಯ ಕ್ಷೇತ್ರದೊಳಕ್ಕೆ ಪ್ರವೇಶಿಸಿದೊಡನೆಯೇ ಎಲ್ಲವೂ ಸ್ಪಷ್ಟವಾಗಿ, ಸತ್ಯದ ಅರಿವು ನಿಮ್ಮಲ್ಲಿ ಜಾಗೃತವಾಗುತ್ತದೆ. ಅಲ್ಲಿಯವರೆಗೂ ವಾದ, ವಿವಾದ, ಚರ್ಚೆ, ಆಡಂಬರಗಳ ಅರ್ಥರಹಿತ ಗಲಾಟೆಯಲ್ಲಿ ಸಿಕ್ಕಿಕೊಂಡು ಬಿಟ್ಟಿರುತ್ತೀರಿ.

# ೧೧ ಭಕ್ತಿ ಮಾರ್ಗದ ಸಾಧಕರು

ಭಕ್ತಿಮಾರ್ಗದಿಂದ ಭಗವಂತನನ್ನು ಅರಸುವ ಸಾಧಕನು ಈ ಕೆಳಗಿನ ಗುಣಗಳನ್ನು ಪಡೆಯಲು ಪ್ರಯತ್ನಿಸಬೇಕು. ಅವನು ಈ ಪ್ರಪಂಚದ ಸುಳ್ಳು, ಕ್ರೌರ್ಯ, ಗಲಭೆ ಗದ್ದಲಗಳಿಂದ ದೂರವಾಗಿದ್ದು ಸತ್ಯ, ಧರ್ಮ, ಪ್ರೇಮ ಮತ್ತು ಶಾಂತಿಗಳನ್ನು ಅಭ್ಯಾಸ ಮಾಡಬೇಕು. ಇದೇ ಭಕ್ತಿ ಮಾರ್ಗ. ಭಗವಂತನನ್ನು ಪಡೆಯಬೇಕೆನ್ನುವವರು, ಲೋಕ ಕಲ್ಯಾಣವನ್ನು ಸಾಧಿಸಬಯಸುವವರು ಹೊಗಳಿಕೆ ತೆಗಳಿಕೆಗಳನ್ನೂ ಮೆಚ್ಚುಗೆ ತಿರಸ್ಕಾರಗಳನ್ನೂ ಅನುಕೂಲ ಅನನುಕೂಲಗಳನ್ನೂ ಬೆಲೆಯಿಲ್ಲದವೆಂದು ತಿರಸ್ಕರಿಸಬೇಕು. ಅವರು ತಮ್ಮದೇ ಆಂತರಿಕ ಸತ್ಯದಲ್ಲಿ ಸ್ಥಿರವಾದ ವಿಶ್ವಾಸವನ್ನು ಇಟ್ಟುಕೊಳ್ಳಬೇಕು. ಆಧ್ಯಾತ್ಮಿಕ ವಿಚಾರಕ್ಕೆ ತಮ್ಮನ್ನು ಅರ್ಪಿಸಿಕೊಳ್ಳಬೇಕು. ಯಾರೊಬ್ಬರೂ ಮಹಾಸ್ವರೂಪನಾದರೂ ಕೊನೆಗೆ ಅವತಾರಪುರುಷನೇ ಆದರೂ ನಿಂದೆಯನ್ನೂ ಟೀಕೆಯನ್ನೂ ತಪ್ಪಿಸಿಕೊಳ್ಳಲಾರನು. ಆದರೆ, ಅವರು ಬೆದರಿಕೆಗಳಿಗೆ ಬಗ್ಗುವವರಲ್ಲ. ಹಾಗೆ ಮಹಾಪುರುಷರ ನಿಂದನೆಯಲ್ಲಿ ತೊಡಗಿರುವವರೂ ಕೂಡ ಅಸಾಧ್ಯವಾದ ಕಷ್ಟಗಳನ್ನು ಅನುಭವಿಸಿ ಮುಗಿಸಿದ ನಂತರ ಅವರನ್ನು ಅರ್ಥಮಾಡಿಕೊಂಡು ಸ್ತುತಿಸತೊಡಗುತ್ತಾರೆ. ಅಜ್ಞಾನದ ದೌರ್ಬಲ್ಯವೇ ಈ ವಿಫಲತೆಗೆ ಕಾರಣ. ಆದ್ದರಿಂದ ಅಂತಹ ಚಂಚಲ ಸ್ವಭಾವದ ವ್ಯಕ್ತಿಗಳಿಂದ ಹಾಗೂ ಅಜ್ಞಾನಿಗಳಿಂದ ಸಾಧಕನು ದೂರವಾಗಿರಬೇಕು. ತನ್ನ ನಂಬಿಕೆಯನ್ನು ಕುರಿತು ಅವರೊಂದಿಗೆ ಚರ್ಚಿಸಬಾರದು, ಪವಿತ್ರ ಗ್ರಂಥಗಳ ಅಧ್ಯಯನದಲ್ಲಿ ಮುಳುಗಿರಬೇಕು ಮತ್ತು ಭಗವದ್ಭಕ್ತರ ಸಹವಾಸದಲ್ಲಿರಬೇಕು. ಮುಂದೆ ಸಾಕ್ಷಾತ್ಕಾರದ ಅನುಭವವಾದಾಗ, ಸತ್ಯದ ಸಂಪರ್ಕದಿಂದ ಧೈರ್ಯವನ್ನು ಹೊಂದಿ ಯಾರ ಸಹವಾಸದಲ್ಲಿ ಬೇಕಾದರೂ ಇರಬಲ್ಲರು. ಆಗ ಯಾವ ಅಪಾಯವೂ ಅವರಿಗಿರುವುದಿಲ್ಲ. ಅವರು ತಾವು ಕಂಡ ಸತ್ಯದ ಕಡೆಗೆ ಇತರರ ಮನಸ್ಸುಗಳನ್ನೂ ನಿರ್ದೇಶಿಸಲು ಶಕ್ತರಾಗುತ್ತಾರೆ.

ಸತ್ಕಾರ್ಯಗಳನ್ನು ಮಾಡುತ್ತಾ ಆತ್ಮಸಾಕ್ಷಾತ್ಕಾರದ ಮಾರ್ಗದಲ್ಲಿ ನಡೆಯ ಬಯಸುವ ಜನರಲ್ಲಿ ಮೂರು ಬಗೆಗಳನ್ನು ಗುರುತಿಸಬಹುದು:

೧. ಸಾಧನೆಯನ್ನು ಪ್ರಾರಂಭಿಸಲು ಬರುವ ಎಷ್ಟೋ ಕಷ್ಟನಷ್ಟಗಳಿಂದ ಹೆದರುವವರು. ಅವರು ಅತ್ಯಂತ ಕೆಳಮಟ್ಟದ ಅಧಮ ವರ್ಗದ ಜನರು.
೨. ಅಡ್ಡಿಗಳಿಂದಲೂ ನಿರಾಶೆಗಳಿಂದಲೂ ಸೋತು, ನಿರಾಶರಾಗಿ ಸಾಧನೆಯನ್ನು ನಡುವೆಯೇ ಕೈಬಿಡುವವರು. ಇವರು ಮಧ್ಯಮ ವರ್ಗ.
೩. ಸಮಾಧಾನದಿಂದ, ಧೈರ್ಯದಿಂದ ಸಾಧನೆಗೆ ಬಲವಾಗಿ ಅಂಟಿಕೊಂಡವರು. ಪ್ರಯಾಣ ಯಾವ ಸ್ವರೂಪದ್ದೇ ಇರಲಿ, ದಾರಿಯು ಎಷ್ಟೇ ಕಷ್ಟಕರವಾದದ್ದಿರಲಿ, ಸ್ವಲ್ಪವೂ ಹೆದರದೆ ತಮ್ಮ ಸಾಧನೆಯನ್ನು ಮುಂದುವರಿಸುವವರು. ಇವರು ಉತ್ತಮ ವರ್ಗಕ್ಕೆ ಸೇರುವವರು.

ಈ ಸ್ಥಿರತೆ, ವಿಶ್ವಾಸ, ನಂಬಿಕೆ, ನಿರಂತರತೆ ಇವೇ ಭಕ್ತನ ಲಕ್ಷಣಗಳು.

ಈ ಭ್ರಮಾತ್ಮಕ ಪ್ರಪಂಚದ ಮೋಹದಿಂದ ಭ್ರಮಿತರಾಗಿ ತಾತ್ಕಾಲಿಕ ಸಂತೋಷದ ಸೆಳೆತಕ್ಕೆ ಸಿಕ್ಕಿ, ಶಾಶ್ವತವೂ ಪೂರ್ಣವೂ ಆದ ಆನಂದವನ್ನು ಪಡೆಯುವ ಮಾರ್ಗವನ್ನು ಕೈಬಿಟ್ಟು ಬಿಡಬೇಡಿ. ಪೂರ್ಣಶ್ರದ್ಧೆಯಿಂದ ಆಧ್ಯಾತ್ಮಿಕ ಕರ್ತವ್ಯಗಳನ್ನು ಮುಂದುವರಿಸಿ.

ವಿಶ್ವಾಸ ಮತ್ತು ಶ್ರದ್ಧೆಗಳಿಲ್ಲದೆ ಪರಮಾತ್ಮನನ್ನು ಅರಿಯಲು ಸಾಧ್ಯವಿಲ್ಲ. ಪ್ರೇಮದಿಂದ ಮಾತ್ರ ಶ್ರದ್ಧೆಯು ಬರುತ್ತದೆ, ಶ್ರದ್ಧೆಯ ಮೂಲಕ ಜ್ಞಾನವು ದೊರಕುತ್ತದೆ, ಜ್ಞಾನದ ಮೂಲಕ ಮಾತ್ರ ಪರಾಭಕ್ತಿಯು ಬರುತ್ತದೆ, ಪರಾಭಕ್ತಿಯಿಂದ ಮಾತ್ರ ಪರಮಾತ್ಮನನ್ನು ಪಡೆಯುವುದು ಸಾಧ್ಯ.

ಹಾಗಾದರೆ ಪ್ರೇಮವನ್ನು ಬೆಳೆಸುವುದು ಹೇಗೆ? ಅದಕ್ಕೆ ಎರಡು ಬೇರೆ ಬೇರೆ ಮಾರ್ಗಗಳಿವೆ:

೧. ಇತರರ ದೋಷಗಳನ್ನು ಅವೆಷ್ಟೇ ದೊಡ್ಡವಾಗಿದ್ದರೂ ಗೌಣ, ಅಲಕ್ಷಿಸಬೇಕಾದವು ಎಂದು ಪರಿಗಣಿಸಿ. ನಿಮ್ಮವೇ ದೋಷಗಳು, ಅವು ಎಷ್ಟೇ ಅಲ್ಪವಾಗಿದ್ದರೂ ಅಮುಖ್ಯವಾಗಿದ್ದರೂ ದೊಡ್ಡದಾಗಿ ಭಾವಿಸಿ ಅದಕ್ಕಾಗಿ ವಿಷಾದಿಸಿ, ಪಶ್ಚಾತ್ತಾಪಪಡಿರಿ. ಇದರಿಂದ ನೀವು ದೊಡ್ಡ ದೊಡ್ಡ ತಪ್ಪು ಮಾಡುವುದು ತಪ್ಪಿ, ದೋಷಗಳು ನಿವಾರಣೆಗೊಂಡು ಸೋದರಿಕೆಯ ಹಾಗೂ ಸಹಿಷ್ಣುತೆಯ ಭಾವನೆಯು ನಿಮ್ಮಲ್ಲಿ ಬೆಳೆಯುತ್ತದೆ.
೨. ನಿಮಗೆ ಸಂಬಂಧಿಸಿದಂತೆಯೊ ಅಥವಾ ಇತರರಿಗೆ ಸಂಬಂಧಿಸಿದಂತೆಯೊ ಏನನ್ನೇ ಮಾಡಿದರೂ ಭಗವಂತನು ಎಲ್ಲ ಕಡೆಯೂ ಇದ್ದಾನೆ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಂಡು ಮಾಡಿ. ಅವನಿಗೆ ಪ್ರತಿಯೊಂದೂ ಕಾಣಿಸುತ್ತದೆ,

ಕೇಳಿಸುತ್ತದೆ, ತಿಳಿಯುತ್ತದೆ. ನೀವು ಯಾವ ಮಾತನ್ನು ಆಡಿದರೂ ಭಗವಂತನು ಆ ಒಂದೊಂದು ಪದವನ್ನೂ ಕೇಳುತ್ತಿದ್ದಾನೆ ಎಂಬ ನಂಬಿಕೆಯಿರಲಿ.

ಸತ್ಯ ಮತ್ತು ಮಿಥ್ಯೆಗಳ ನಡುವೆ ವಿವೇಚನೆಯನ್ನು ಉಪಯೋಗಿಸಿ, ಮತ್ತು ಸತ್ಯವನ್ನು ಮಾತ್ರವೇ ಮಾತನಾಡಿ. ಏನನ್ನೇ ಮಾಡಿದರೂ ಅದು ಸರಿಯಾದದ್ದೇ ತಪ್ಪಾದದ್ದೇ ಎಂದು ವಿವೇಚಿಸಿ ಸರಿಯಾದದ್ದನ್ನು ಮಾತ್ರ ಮಾಡಿ. ಪ್ರತಿಯೊಂದು ಕ್ಷಣವೂ ಭಗವಂತನ ಸರ್ವಶಕ್ತತ್ವವನ್ನು ತಿಳಿದುಕೊಳ್ಳಲು ಪ್ರಯತ್ನಿಸಿ. ದೇಹವು ಜೀವದ ದೇವಾಲಯ. ಆ ದೇವಾಲಯದಲ್ಲಿ ಏನು ಸಂಭವಿಸಿದರೂ ಅದು ಜೀವಕ್ಕೆ ಸಂಬಂಧಿಸಿದ್ದು. ಹಾಗೆ ಈ ಜಗತ್ತು ಭಗವಂತನ ದೇಹ. ಅಲ್ಲಿ ಏನೇ ನಡೆಯಲಿ, ಒಳ್ಳೆಯದಾಗಲಿ ಕೆಟ್ಟದಾಗಲಿ ಅದು ಭಗವಂತನಿಗೆ ಸೇರಿದ್ದು. ಕಣ್ಣಿಗೆ ಕಾಣಿಸುವ ಜೀವ ಮತ್ತು ದೇಹಗಳ ವಿಷಯವಾಗಿ ತಿಳಿದುಕೊಂಡು ಅದರ ಮೂಲಕ ಕಣ್ಣಿಗೆ ಕಾಣಿಸದ ಭಗವಂತನ ಮತ್ತು ಜಗತ್ತಿನ ಸತ್ಯವನ್ನು ತಿಳಿದುಕೊಳ್ಳಿರಿ.

ಜೀವಕ್ಕೂ ಭಗವಂತನಿಗೂ ಇರುವ ಸಂಬಂಧವನ್ನು ಈ ಮೂರು ಮುಖ್ಯವಾದ ಉಪಕರಣಗಳನ್ನು ಹೊಂದಿರುವವರು ಗ್ರಹಿಸಬಲ್ಲರು:

೧. ಮೋಹ ಮತ್ತು ದ್ವೇಷಗಳಿಂದ ಮಲಿನವಾಗದ ಮನಸ್ಸು.
೨. ಅಸತ್ಯದಿಂದ ಮಲಿನವಾಗದ ಮಾತು.
೩. ಹಿಂಸೆಯಿಂದ ಮಲಿನವಾಗದ ದೇಹ.

ಸಂತೋಷ ಮತ್ತು ಶಾಂತಿಗಳು ಬಾಹ್ಯ ವಸ್ತುಗಳಲ್ಲಿ ಇಲ್ಲ, ಅವು ನಿಮ್ಮೊಳಗೇ ಇವೆ. ಆದರೆ ಅವಿವೇಕಿಗಳಾದ ಜನರು ತಮ್ಮಿಂದ ಹೊರಗೆ, ಇಂದೋ ನಾಳೆಯೋ ತಾವು ಬಿಟ್ಟು ಹೋಗಲೇಬೇಕಾದ ಜಗತ್ತಿನಲ್ಲಿ ಅವುಗಳಿಗಾಗಿ ಹುಡುಕುತ್ತಾರೆ. ಆದ್ದರಿಂದ ಬೇಗ ಜಾಗೃತರಾಗಿ. ಎಲ್ಲದರ ಸಾರವಾದ ಶಾಶ್ವತ ಸತ್ಯವನ್ನು ತಿಳಿದುಕೊಳ್ಳಲು ಪ್ರಯತ್ನಿಸಿರಿ. ಪರಮಾತ್ಮನೇ ಆಗಿರುವ ಪ್ರೇಮವನ್ನು ಅನುಭವಕ್ಕೆ ತಂದುಕೊಳ್ಳಿರಿ. ಪ್ರತಿಯೊಂದು ತಿರುವಿನಲ್ಲೂ ವಿವೇಚನೆಯನ್ನು ಬೆಳೆಸಿ ಸತ್ಯವಾದುದನ್ನು ಸ್ವೀಕರಿಸಿ, ಮಿಕ್ಕುದೆಲ್ಲವನ್ನೂ ತ್ಯಜಿಸಿರಿ. ಎಲ್ಲಿಯವರೆಗೆ ವ್ಯಕ್ತಿಯು ಪ್ರಾಪಂಚಿಕ ಆಸೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡಿರುತ್ತಾನೆಯೋ ಅಲ್ಲಿಯವರೆಗೂ ಅವನು ದುಃಖವನ್ನು ತಪ್ಪಿಸಿಕೊಳ್ಳಲಾರನು.

# ೧೨ ವಿಗ್ರಹಾರಾಧನೆ

ವಿಗ್ರಹವನ್ನು ಪೂಜೆ ಮಾಡುವ ಅಭ್ಯಾಸವನ್ನು ಅನೇಕರು ತೆಗಳುತ್ತಾರೆ. ಆದರೆ ಅದರ ಆಧಾರ ಪಿಂಡಾಂಡದಲ್ಲಿ ಬ್ರಹ್ಮಾಂಡವನ್ನು ದರ್ಶಿಸುವ ಮನುಷ್ಯನ ಶಕ್ತಿ.

ಮೂರ್ತಿ ಪೂಜೆಯ ಮೌಲ್ಯವನ್ನು ಮನುಷ್ಯನ ಅನುಭವವೇ ಸಮರ್ಥಿಸಿದೆ. ಅದು ಅವನ ಕಲ್ಪನಾಶಕ್ತಿಯನ್ನು ಅವಲಂಬಿಸುವುದಿಲ್ಲ. ಭಗವಂತನ ವಿರಾಟ್ ಸ್ವರೂಪದಲ್ಲಿ ಏನನ್ನು ನೋಡಲಾಗುತ್ತದೆಯೋ ಅದನ್ನೇ ಸ್ವಲ್ಪವೂ ಕುಂದಿಲ್ಲದ, ಬೆರಕೆಯಾಗದ ರೂಪದಲ್ಲಿ ಭಗವಂತನ ಮೂರ್ತಿಯಲ್ಲೂ ನೋಡಲಾಗುತ್ತದೆ. ಕಾವ್ಯದಲ್ಲಿ ಉಪಮಾನಗಳು ರೂಪಕಗಳು ಯಾವ ಕೆಲಸ ಮಾಡುತ್ತವೆಯೋ ಅದೇ ಬಗೆಯ ಉದ್ದೇಶವನ್ನು ಮೂರ್ತಿಗಳು ನಿರ್ವಹಿಸುತ್ತವೆ. ಅವು ನಿದರ್ಶಿಸುತ್ತವೆ, ಹೆಚ್ಚಿಸುತ್ತವೆ ಮತ್ತು ಸ್ಪಷ್ಟಪಡಿಸುತ್ತವೆ.

ಮನುಷ್ಯನಿಗೆ ಸಂತೋಷವು ವಸ್ತುಗಳ ಆಕಾರದಿಂದ ಬರುವುದಿಲ್ಲ, ಅವುಗಳೊಂದಿಗೆ ಅವನು ಸ್ಥಾಪಿಸಿಕೊಂಡಿರುವ ಸಂಬಂಧದ ಮೂಲಕ ಬರುತ್ತದೆ. ತಾಯಿಗೆ ಅವಳ ಮಗುವು ಸಂತೋಷಕೊಡುತ್ತದೆಯೇ ಹೊರತು ಯಾವುದೋ ಮಗುವಲ್ಲ. ಹಾಗೆಯೇ ಪ್ರತಿಯೊಬ್ಬರ, ಪ್ರತಿಯೊಂದು ವಸ್ತುವಿನ, ಈ ವಿಶ್ವದಲ್ಲಿರುವ ಸಮಸ್ತದ ವಿಷಯವೂ. ಅವುಗಳೊಡನೆ ನಂಟನ್ನು ಬೆಳೆಸಿಕೊಂಡಾಗ, ಈಶ್ವರ ಪ್ರೇಮ ಬೆಳೆದಾಗ, ಎಂಥ ಅಪಾರ ಸಂತೋಷವನ್ನು ಅನುಭವಿಸಬಹುದು! ಅದನ್ನು ಅನುಭವಿಸುವವರಿಗೆ ಮಾತ್ರ ಅದು ಅರ್ಥವಾಗುತ್ತದೆ.

## ೧೩. ಅಧ್ಯಯನ

ವೇದ ಪುರಾಣಗಳನ್ನು ಓದಬೇಕು ಮತ್ತು ಕೇಳಬೇಕು. ಭಗವಂತನ ನಾಮವನ್ನು ಹಾಡಬೇಕು, ಆಲಿಸಬೇಕು. ಕೆಲವು ಕಾಯಿಲೆಗಳಲ್ಲಿ ಮೇಲೆ ಹಚ್ಚುವುದಕ್ಕೂ ಮತ್ತೆ ಕೆಲವು ವ್ಯಾಧಿಗಳಲ್ಲಿ ಹೊಟ್ಟೆಗೆ ಸೇವಿಸುವುದಕ್ಕೂ ಔಷಧಿಗಳನ್ನು ವಿಧಿಸುತ್ತಾರೆ. ಆದರೆ ಸರ್ವಸಮಾನವಾದ ಈ ಭವರೋಗವೆಂಬ ಕಾಯಿಲೆಗೆ, ಹುಟ್ಟು ಸಾವುಗಳ ಚಕ್ರಕ್ಕೆ ಶ್ರವಣ ಮತ್ತು ಕೀರ್ತನಗಳನ್ನೂ ಇತರ ಚಿಕಿತ್ಸೆಗಳನ್ನೂ ವಿಧಿಸಲಾಗುತ್ತದೆ. ವ್ಯಕ್ತಿಯು ಭಗವಂತನ ಪವಿತ್ರನಾಮವನ್ನು ಉಚ್ಚರಿಸಬೇಕು ಮತ್ತು ಆಲಿಸಬೇಕು. ಅದರಿಂದ ಸಾಧಕನು ಭಗವಂತನ ಕೃಪೆಯನ್ನೂ ಗುರುವಿನ ಅನುಗ್ರಹ ಹಾಗೂ ಭಗವದ್ಭಕ್ತರ ಅನುಗ್ರಹಗಳನ್ನೂ ಪಡೆಯುವುದು ಸಾಧ್ಯವಾಗುತ್ತದೆ. ಆದರೆ ಅವನು ಇನ್ನೊಂದು ಕೃಪೆಯನ್ನು ಗಳಿಸದೆ ಹೋದರೆ ಈ ಯಾವ ಅನುಗ್ರಹಗಳಿಂದಲೂ ಪ್ರಯೋಜನವಿಲ್ಲ. ಅದೇ ತನ್ನ ಅಂತಃಕರಣದ ಕೃಪೆ. ಅದಿಲ್ಲದೆ ಹೋದರೆ ಅವನು ಅವನತಿ ಹೊಂದುತ್ತಾನೆ, ಮಿಕ್ಕ ಏನೊಂದೂ ಲೆಕ್ಕಕ್ಕೇ ಬರುವುದಿಲ್ಲ.

ಭಗವತ್ಕೃಪೆಯು ಸುಲಭವಾಗಿ ದೊರಕಲಾರದು. "ಮಾಡುವವನು ನಾನು," ಎಂದು ಹೇಳಿಕೊಳ್ಳುವಂತೆ ಮಾಡುವ ಅಹಂಕಾರವನ್ನು ಹೃದಯದಿಂದ ಬೇರು ಸಹಿತ ಕಿತ್ತುಹಾಕಬೇಕು. ಪ್ರತಿಯೊಬ್ಬನೂ ಅವನು ವಿದ್ಯಾವಂತನಿರಲಿ ಅಥವಾ

ಅನಕ್ಷರಸ್ಥನಾಗಿರಲಿ ಭಗವಂತನನ್ನು ಅರಿಯಬೇಕೆಂಬ ಉತ್ಕಟವಾದ ಹಂಬಲ ವನ್ನು ಹೊಂದಿರಬೇಕು. ಭಗವಂತನಿಗೆ ಅವನ ಎಲ್ಲ ಮಕ್ಕಳನ್ನೂ ಕುರಿತು ಸಮಾನವಾದ ಪ್ರೀತಿ. ಏಕೆಂದರೆ ಬೆಳಗುವುದೇ ಬೆಳಕಿನ ಸ್ವಭಾವ. ಆ ಬೆಳಕನ್ನು ಉಪಯೋಗಿಸಿಕೊಂಡು ಕೆಲವರು ಒಳ್ಳೆಯ ಪುಸ್ತಕಗಳನ್ನು ಓದಬಹುದು. ಇತರ ತಮ್ಮ ದೈನಂದಿನ ಕಾರ್ಯಗಳನ್ನು ಅವು ಯಾವುವೇ ಇರಲಿ, ನಿರ್ವಹಿಸಬಹುದು. ಹಾಗೆಯೇ ಭಗವನ್ನಾಮವನ್ನು ಉಚ್ಚರಿಸುತ್ತಾ ಒಬ್ಬ ವ್ಯಕ್ತಿಯು ಭಗವತ್ಸಾಕ್ಷಾತ್ಕಾರದ ಪಥದಲ್ಲಿ ಮುಂದುವರಿಯಬಹುದು, ಇನ್ನೊಬ್ಬನು ಕೆಟ್ಟ ಕೆಲಸಗಳನ್ನು ಮಾಡ ಬಹುದು! ಎಲ್ಲವೂ ನೀವು ಬೆಳಕನ್ನು ಹೇಗೆ ಉಪಯೋಗಿಸಿಕೊಳ್ಳುವಿರೆಂಬುದರ ಮೇಲೆ ನಿಂತಿದೆ. ಭಗವನ್ನಾಮವು ಮಾತ್ರ ಎಂದೆಂದೂ ನಿರ್ಮಲ, ಕಳಂಕರಹಿತ.

# ೧೪ ಸನಾತನ ವಿದ್ಯೆಯ ಆವಶ್ಯಕತೆ

ಜನರು ಲೆಕ್ಕವಿಲ್ಲದಷ್ಟು ಬಗೆಯ ಕಲೆಗಳಲ್ಲಿ, ಕರ ಕೌಶಲಗಳಲ್ಲಿ, ವಿಜ್ಞಾನಗಳಲ್ಲಿ ತಜ್ಞತೆ ಪಡೆದಿಲ್ಲವೇನು? ಅಸಂಖ್ಯ ಯಂತ್ರಗಳನ್ನು ಅವರು ರೂಪಿಸಿಕೊಂಡಿಲ್ಲವೇನು? ಟನ್ನುಗಟ್ಟಲೆ ಮಾಹಿತಿಯನ್ನು ತೆಗೆದಿಟ್ಟುಕೊಂಡಿಲ್ಲವೇನು? ಆದರೂ ಮಾನವನು ಸಂತೋಷಕ್ಕೆ ಅಗತ್ಯವಾದ ಮನಶ್ಶಾಂತಿಯನ್ನು ಮಾತ್ರ ಪಡೆದಿಲ್ಲ. ಅದರ ಬದಲು, ಒಂದೊಂದು ದಿನ ಉರುಳುತ್ತಿದ್ದಂತೆ ಅವನ ಈ ವಿದ್ಯೆಯು ಹೆಚ್ಚು ಹೆಚ್ಚು ಆಳಕ್ಕೆ ಸೆಳೆಯುತ್ತಿದೆ, ಶಾಂತಿಯು ಅವನಿಂದ ದೂರ ದೂರ ಸರಿದು ಹೋಗುತ್ತಿದೆ.

ಇದಕ್ಕೆ ಕಾರಣವನ್ನು ಹೀಗೆ ಹೇಳಬಹುದು. ಈ ಕಲೆಗಳು ಮತ್ತು ವಿಜ್ಞಾನಗಳಿಗೆ ಇರುವುದು ತಾತ್ಕಾಲಿಕ ಮೌಲ್ಯ ಮಾತ್ರ. ಈ ಯಂತ್ರಗಳು ಪ್ರಾಪಂಚಿಕ ಸುಖವನ್ನು ಪಡೆಯಲು ನೆರವಾಗುತ್ತವೆ. ಈ ಜ್ಞಾನವೆಲ್ಲ ಇರುವುದು ನಶ್ವರವಾದ, ತಾತ್ಕಾಲಿಕವಾದ ವಸ್ತುಗಳ ಬಗೆಗೆ. ವಿಶ್ವದ ಆಂತರ್ಯದ ರಹಸ್ಯವನ್ನು ಈ ವಿದ್ಯೆಯು ವ್ಯಕ್ತಿಗೆ ಕೊಡುವುದಿಲ್ಲ. ಯಾವುದನ್ನು ತಿಳಿದುಕೊಂಡರೆ ಮಿಕ್ಕೆಲ್ಲ ರಹಸ್ಯಗಳೂ ತಮಗೆ ತಾವೇ ಬಯಲಾಗಿ ಬಿಡುವವೋ ಆ ಒಂದು ರಹಸ್ಯವಿದೆ. ಆ ಸಮಸ್ಯೆಯನ್ನು ಪರಿಹರಿಸಿದ್ದೇ ಆದರೆ ಎಲ್ಲ ಸಮಸ್ಯೆಗಳೂ ಪರಿಹಾರವಾಗುತ್ತವೆ. ಅದೊಂದು ಗಂಟನ್ನು ಬಿಡಿಸಿದರೆ ಮಿಕ್ಕ ಎಲ್ಲ ಗಂಟುಗಳೂ ತಾವಾಗಿ ಬಿಚ್ಚಿಕೊಳ್ಳುತ್ತವೆ. ಒಂದು ವಿಜ್ಞಾನವಿದೆ, ಅದರಲ್ಲಿ ಪರಿಣತಿ ಸಂಪಾದಿಸುವುದರಿಂದ ಉಳಿದೆಲ್ಲ ಜ್ಞಾನವನ್ನು ಪಡೆದುಬಿಡಬಹುದು. ಆ ಮೂಲಭೂತವಾದ ವಿಜ್ಞಾನವೇ ಸನಾತನ ವಿದ್ಯೆ.

ಒಂದು ಮರವನ್ನು ನಾಶಮಾಡಬೇಕಾದರೆ ಅದರ ತಾಯಿ ಬೇರನ್ನು ಕಡಿಯಬೇಕು; ಒಂದೊಂದಾಗಿ ಎಲೆಗಳನ್ನು ಕೀಳುವುದರ ಮೂಲಕ ಮರವನ್ನು ಸಾಯಿಸಲೆತ್ನಿಸು ವುದರಿಂದ ಪ್ರಯೋಜನವಿಲ್ಲ. ಅದು ಬಹು ದೀರ್ಘಕಾಲ ತೆಗೆದುಕೊಳ್ಳುವ ಕೆಲಸ,

ಅಲ್ಲದೆ ಅದು ಸಫಲವಾಗದೆಯೂ ಹೋಗಬಹುದು. ಪ್ರಾಚೀನ ವೇದಕಾಲೀನ ಋಷಿಗಳು ಈ ವಿದ್ಯೆಯನ್ನು ಅರಿತಿದ್ದರು. ಆದರೆ ಭಾರತೀಯರು ಅವರನ್ನು ತಮ್ಮ ಬಂಧುಗಳೆಂದು ಹೇಳಿಕೊಳ್ಳಲು ಸಂಕೋಚಪಡುತ್ತಾರೆ. ಅವರು ತಮ್ಮ ತಪಸ್ಸಿನ ಮೂಲಕ ಭಗವಂತನ ದರ್ಶನ ಮಾಡಿದರು, ಅವನ ಕೃಪೆಯನ್ನು ಗಳಿಸಿದರು. ಹಾಗೆ ತಾವು ಕಂಡುಹಿಡಿದ ವಿಜ್ಞಾನವನ್ನು ಮುಂದಿನವರಿಗಾಗಿ ನಿರೂಪಿಸಿದರು. ಇತರ ದೇಶಗಳ ಜನರು ಈ ಗ್ರಂಥಗಳನ್ನು ಅಧ್ಯಯನ ಮಾಡಿ, ಭಾರತವು ಇಡಿ ಜಗತ್ತಿಗೆ ದಾರಿಯನ್ನು ತೋರಿಸಿಕೊಟ್ಟಿದೆ ಎಂದು ಹೇಳಿದರು. ಇದು ಸುಪ್ರಸಿದ್ಧವಾದ ವಿಚಾರವೇ ಆಗಿದೆ. ದೀಪವು ಇಡೀ ಮನೆಯನ್ನು ಬೆಳಗುತ್ತದೆ. ಆದರೆ ಆ ದೀಪದ ಕೆಳಗೆಯೇ ಕತ್ತಲೆಯ ಒಂದು ವರ್ತುಲವಿರುತ್ತದೆ. ಭಾರತಕ್ಕೆ ಆ ಅಮೂಲ್ಯ ನಿಧಿ ಗೊತ್ತಿಲ್ಲ ಅಥವಾ ಅದನ್ನು ಕುರಿತ ಕಾಳಜಿಯಿಲ್ಲ. ಇದನ್ನು ವಿಧಿಯ ಆಟ ಎಂದು ಹೇಳಿ ಸುಮ್ಮನಿದ್ದುಬಿಡೋಣವೇ?

ಹಿಂದಿನ ದಿನಗಳಲ್ಲಿ ಭಾರತೀಯರು ತಮ್ಮ ದೈನಂದಿನ ಧಾರ್ಮಿಕಾಚರಣೆಗಳನ್ನು ತಪ್ಪದೆ ಮಾಡುತ್ತಿದ್ದರು. ಪವಿತ್ರವಾದ ಒಂದು ಸ್ಥಳದಲ್ಲಿ ನೆಮ್ಮದಿಯಾಗಿ ಕುಳಿತು ವೇದೋಪನಿಷತ್ತುಗಳ ಅಧ್ಯಯನ ಮತ್ತು ಅವುಗಳ ಉಪದೇಶದ ಆಚರಣೆಗಳಲ್ಲಿ ಮುಳುಗಿರುತ್ತಿದ್ದರು. ಜೊತೆಗೆ ತಮ್ಮ ಅನುಭವಗಳನ್ನು ಅವರು ದಾಖಲು ಮಾಡಿದರು, ಇತರರಿಗೆ ದಾರಿ ತೋರಿಸುವ ಸಲುವಾಗಿ ಹಾಗೂ ಮತ್ತೆ ಅವುಗಳನ್ನು ತಮ್ಮ ಚಿತ್ತಕ್ಕೆ ತಂದುಕೊಳ್ಳುವ ಸಲುವಾಗಿ. ಆದರೆ ಅವರ ಮಕ್ಕಳು ಮೊಮ್ಮಕ್ಕಳು ಆ ಗ್ರಂಥಗಳನ್ನು ಪೂಜಾವೇದಿಕೆಯ ಮೇಲಿಟ್ಟು ಪೂಜಿಸಿದರು. ಕಾಲಕಳೆದಂತೆ ಅವುಗಳ ಬಗೆಗೆ ಅಲಕ್ಷ್ಯವು ಅವುಗಳನ್ನು ಕೆಲಸಕ್ಕೆ ಬಾರದ ವಸ್ತುಗಳನ್ನಾಗಿ ಮಾಡಿತು. ತಾಳೆಗರಿಗಳು ಪುಡಿಪುಡಿಯಾದವು. ಇಲಿಗಳು ತಿಂದವು. ಆದರೆ ಕುತೂಹಲಿಗಳಾದ ಉತ್ಸುಕರಾದ ಪಶ್ಚಿಮ ದೇಶಗಳ ವಿದ್ಯಾರ್ಥಿಗಳು ಈ 'ಅನುಪಯುಕ್ತ' ವಸ್ತುಗಳು ತುಂಬಿದ ಕೋಣೆಯನ್ನು ಜಾಲಾಡಿ, ಅಲ್ಲಿ ಬೆಳಕು ಕೊಡುವ ಅನುಪಮ ರತ್ನಗಳು, ಬೆಲೆ ಕಟ್ಟಲಾಗದ ಅಮೂಲ್ಯ ಜ್ಞಾನರತ್ನಗಳು ಬಿದ್ದಿರುವುದನ್ನು ಅರ್ಥಮಾಡಿಕೊಂಡರು. ಅವುಗಳನ್ನು ಭಕ್ತಿ ಗೌರವಗಳಿಂದ ತಲೆಯ ಮೇಲಿರಿಸಿಕೊಂಡು ತಮಗೂ ತಮ್ಮ ಮಕ್ಕಳಿಗೂ ಭರತ ಖಂಡವು ನೀಡಿದ ಅಮೂಲ್ಯ ಉಡುಗೊರೆ ಎಂದು ಹೇಳುತ್ತಾರೆ. ಸಾಗರದಾಚೆಗೆ ಅವನ್ನು ಅವರು ಒಯ್ಯುತ್ತಾರೆ. ಅವರ ಕಣ್ಣುಗಳಲ್ಲಿ ಸಂತಸ ಮಿನುಗುತ್ತದೆ, ಹೃದಯಗಳಲ್ಲಿ ಕೃತಜ್ಞತೆ ತುಂಬುತ್ತದೆ.

ಈಗ ಭಾರತದ ಮಕ್ಕಳು ಏನು ಮಾಡುತ್ತಿದ್ದಾರೆ ಎಂಬುದನ್ನು ಹೇಳಲೆ? ಅವರು ಪುಟಗಳನ್ನು ತಿರುವುವುದಿಲ್ಲ ಅಥವಾ ಒಳಪಡಿಯನ್ನು ಗಮನಿಸುವುದಿಲ್ಲ. ಅದರ ಬಗೆಗೆ ಅವರಿಗೆ ಎಳ್ಳಷ್ಟೂ ಆಸಕ್ತಿಯಿಲ್ಲ. ಹತ್ತು ಲಕ್ಷಕ್ಕೆ ಒಬ್ಬ ಆ ಗ್ರಂಥಗಳನ್ನು ಓದಬಹುದು. ಅವನನ್ನು ಹುಚ್ಚ ಎಂದೋ ಅವಿವೇಕಿ ಎಂದೋ ಅವಹೇಳನ ಮಾಡಲಾಗುತ್ತದೆ. ಪುಸ್ತಕಗಳು ಸುಳ್ಳಿನ ಮತ್ತು ಪುರಾಣ ಕತೆಗಳ ಮೂಟೆ ಎಂದು

ಅಪಹಾಸ್ಯ ಮಾಡುತ್ತಾರೆ. ಕೃತಿಗಳ ಮತ್ತು ಅವುಗಳ ಕರ್ತೃಗಳ ಐತಿಹಾಸಿಕತೆಯ ಬಗೆಗೆ ವಾದ ಮಾಡುತ್ತಾರೆ. "ಕಲಿಯಲು ಅತಿ ಕಠಿಣವಾದದ್ದು" ಎಂದು ಸಂಸ್ಕೃತ ಭಾಷೆಯನ್ನು ತಳ್ಳಿಹಾಕುತ್ತಾರೆ. ಆ ಅಮೂಲ್ಯ ನಿಧಿಯನ್ನು ಬೇರೆ ದೇಶಗಳಿಂದ ಬಂದ ವಿದ್ವಾಂಸರಿಗೆ ಒಪ್ಪಿಸುತ್ತಾರೆ. ಇದು ಎಂಥ ವಿಷಾದದ ದೃಶ್ಯ! ಹೋಗಲಿ, ತಮ್ಮ ಮಾತೃಭಾಷೆಯನ್ನಾದರೂ ಆಸಕ್ತಿಯಿಂದ ಅವರು ಕಲಿಯುತ್ತಿದ್ದರೆ ಸ್ವಲ್ಪ ವಿನಾಯಿತಿ ಕೊಡಬಹುದಾಗಿತ್ತು; ಅದನ್ನೂ ಅವರು ಮಾಡುತ್ತಿಲ್ಲ. ಎಲ್ಲ ಕಡೆಯೂ ಅಲಕ್ಷ್ಯ, ಅಲಕ್ಷ್ಯ!

ಇಲ್ಲ, ನಾನು ಪ್ರಾಪಂಚಿಕವಾದ ಸಂತೋಷವನ್ನು ತಿರಸ್ಕರಿಸುವುದಿಲ್ಲ. ಜನರು ಸಂತೋಷವಾಗಿದ್ದರೆ ಅದನ್ನು ನೋಡಿ ನಾನು ಸಂತೋಷಪಡುತ್ತೇನೆ. ಆದರೆ ಈ ಸಂತೋಷವು ಶಾಶ್ವತವಾದದ್ದು ಎಂದು ದಯವಿಟ್ಟು ನಂಬಬೇಡಿ. ಪ್ರಾಪಂಚಿಕ ಸಂತೋಷವನ್ನು ಗಳಿಸಲು ಎಲ್ಲ ಕಲೆಗಳನ್ನೂ ವಿಜ್ಞಾನಗಳನ್ನೂ ಅಧ್ಯಯನ ಮಾಡಿ. ಆದರೆ ಈ ಸಂತೋಷವು ನಿತ್ಯವಾದದ್ದಲ್ಲ ಎಂಬುದನ್ನು ಎಲ್ಲರೂ ನೆನಪಿನಲ್ಲಿ ಇಟ್ಟುಕೊಂಡಿರಬೇಕೆಂದು ನಾನು ಬಯಸುತ್ತೇನೆ.

ಶಾಶ್ವತ ಆನಂದವನ್ನು ಒಂದೇ ಒಂದು ವಿದ್ಯೆಯಿಂದ ಪಡೆಯಬಹುದು. ಅದೇ ಉಪನಿಷತ್ ವಿದ್ಯೆ. ಅದು ಭಗವತ್ಸಾಕ್ಷಾತ್ಕಾರದ ವಿಜ್ಞಾನ, ಅದು ಋಷಿಗಳು ಮಾಡಿರುವ ಉಪದೇಶ. ಮಾನವನನ್ನು ರಕ್ಷಿಸಿ ಅವನಿಗೆ ಶಾಂತಿಯನ್ನು ನೀಡಬಲ್ಲದ್ದು ಅದೊಂದೇ. ಅದಕ್ಕಿಂತ ಉನ್ನತವಾದದ್ದು ಬೇರೆ ಯಾವುದೂ ಇಲ್ಲ. ಇದು ನಿರ್ವಿವಾದವಾದ ಸಂಗತಿ. ನಿಮ್ಮ ಸುಖ ದುಃಖ ಏನೇ ಇರಲಿ, ಹೊಟ್ಟೆಪಾಡಿಗಾಗಿ ನೀವು ಯಾವ ವಿಷಯಗಳನ್ನೇ ಬೇಕಾದರೂ ವಿಶೇಷಾಧ್ಯಯನ ಮಾಡಿರಿ, ಆದರೆ ನಿಮ್ಮ ಕಣ್ಣುಗಳನ್ನು ಬ್ರಹ್ಮವಿದ್ಯೆಯ ಮೇಲೆ ಕೀಲಿಸಿರಿ. ಮೌಲ್ಯಗಳ ವಿಕಾಸವಾಗಲಿ ಆಚರಣೆಯಾಗಲಿ ಇಲ್ಲದೆ ಬುದ್ಧಿಯನ್ನು ಮಾತ್ರ ಹರಿತಗೊಳಿಸಿಕೊಂಡರೆ, ಮಿದುಳಿನಲ್ಲಿ ಕೇವಲ ಮಾಹಿತಿಯನ್ನು ತುಂಬಿಟ್ಟುಕೊಂಡರೆ ಜಗತ್ತು ಪ್ರಗತಿ ಹೊಂದಲಾರದು, ಅದರ ಕಲ್ಯಾಣವು ಅಪಾಯದ ದವಡೆಗೆ ಸಿಲುಕುತ್ತದೆ.

ಆದರೆ ಜನರು ಮೌಲ್ಯಗಳಲ್ಲಿ ನಂಬಿಕೆ ಕಳೆದುಕೊಳ್ಳುತ್ತಿದ್ದಾರೆ ಎಂದು ತೋರುತ್ತದೆ. ಏಕೆಂದರೆ ಇಂದಿನ ಶಿಕ್ಷಣ ಪದ್ಧತಿಯು ಆಧ್ಯಾತ್ಮಿಕ ಬೋಧನೆಗಾಗಲಿ ತರಬೇತಿಗಾಗಲಿ ಯಾವ ಸ್ಥಾನವನ್ನೂ ಕೊಡುವುದಿಲ್ಲ. ಮಿದುಳಿನಲ್ಲಿ ಕೆಲಸಕ್ಕೆ ಬಾರದ ಮಾಹಿತಿಗಳ ರಾಶಿಯನ್ನು ತುಂಬಿಕೊಳ್ಳುವುದರಿಂದ ನಿಜವಾದ ವಿದ್ಯಾಭ್ಯಾಸವು ತೃಪ್ತಿ ಹೊಂದಬಾರದು. ಮನುಷ್ಯನನ್ನು ವಿಶಿಷ್ಟನನ್ನಾಗಿಸುವ ಸಕಲ ಮೌಲ್ಯಗಳು ಅರಳುವುದಕ್ಕೆ ಪೂರ್ಣ ಅವಕಾಶವನ್ನು ಯಾವುದು ಕೊಡುತ್ತದೆಯೋ ಅದೀಗ ಪ್ರಯೋಜನಕಾರಿಯಾದ ಶಿಕ್ಷಣ.

# ೧೫ ವಸ್ತು ಜಗತ್ತು ಸತ್ಯವಲ್ಲ

ವಾಸ್ತವವಾಗಿ ಜನರು ನೆರಳನ್ನು ನೋಡಿ ಅದು ನಿಜವಾದ ವಸ್ತುವೆಂದೇ ಭಾವಿಸುತ್ತಾರೆ. ಉದ್ದ, ಅಗಲ, ಎತ್ತರ ಮತ್ತು ಮಂದಗಳನ್ನು ನೋಡಿ ವಸ್ತುವೇ ತಮ್ಮೆದುರಿಗಿದೆ ಎಂದು ಅವರು ದಿಢೀರನೆ ನಿರ್ಣಯಿಸಿಬಿಡುತ್ತಾರೆ. ಹಲವು ಸಂವೇದನೆಗಳೂ ಸ್ಮರಣೆಗಳೂ ಅವರ ಅನುಭವಕ್ಕೆ ಬರುತ್ತವೆ. ಅವೆಲ್ಲವನ್ನೂ ಕೂಡಿಸಿ ಅವುಗಳನ್ನು ಉತ್ಪತ್ತಿ ಮಾಡುವ ಕೆಲವು ವಸ್ತುಗಳು ಇರಬೇಕು ಎಂದು ಊಹಿಸುತ್ತಾರೆ. ಹೀಗೆ ತೋರಿಕೆಯನ್ನು ಸತ್ಯವೆಂದು ತಪ್ಪಾಗಿ ತಿಳಿದುಕೊಳ್ಳುವುದಕ್ಕೆ ಜ್ಞಾನವೆಂದು ತಪ್ಪಾಗಿ ಹೆಸರು ಕೊಟ್ಟಿದ್ದಾರೆ. ಅದು ಎಂದಿಗಾದರೂ ಜ್ಞಾನವಾಗಲು ಸಾಧ್ಯವೆ? ಒಬ್ಬ ವ್ಯಕ್ತಿಯ ಪ್ರತಿರೂಪವು ಎಂದಿಗಾದರೂ 'ಅವನೇ' ಆಗಲು ಸಾಧ್ಯವಿದೆಯೇನು?

ಪ್ರತಿಬಿಂಬವನ್ನು 'ಅವನು' ಎಂದೇ ತಿಳಿದುಕೊಂಡರೆ ಆ ತಿಳಿವನ್ನು ಜ್ಞಾನ ಎಂದು ಕರೆಯಬಹುದೇನು? ಇಂದಿನ ಸಮಸ್ತ ಜ್ಞಾನದ ಸ್ವರೂಪವು ಹೀಗೆಯೇ ಇದೆ. ವಸ್ತು ಎಂದು ಗ್ರಹಿಸುತ್ತಿರುವುದು ನಿಜವಲ್ಲವೇ ಅಲ್ಲ; ಅದರ ಸತ್ಯತೆ ಗ್ರಾಹ್ಯವಾಗಿಲ್ಲ.

ಅದ್ವೈತಿಯು 'ಅಹಂ ಬ್ರಹ್ಮಾಸ್ಮಿ (ನಾನು ಬ್ರಹ್ಮ)' ಎಂಬುದನ್ನು ನಂಬುತ್ತಾನೆ. ಈ ನಂಬಿಕೆಯನ್ನು ಅವನು ಪಡೆದದ್ದು ಹೇಗೆ? ಅವನು ಹಾಗೇಕೆ ಹೇಳುತ್ತಾನೆ? ಅವನನ್ನು ಕೇಳಿ ನೋಡಿ, ಉತ್ತರ ಹೀಗಿರುತ್ತದೆ: "ಶ್ರುತಿಯು ಹಾಗೆಂದು ಸಾರುತ್ತದೆ, ಗುರುವು ಹಾಗೆ ಬೋಧಿಸಿದ್ದಾನೆ." ಆದರೆ ಈ ಮೂಲಗಳಿಂದ ಅದನ್ನು ಕಲಿತುಕೊಳ್ಳುವುದರಿಂದ ಆ ಗಹನವಾದ ಮಹಾವಾಕ್ಯವನ್ನು ಹೇಳುವ ಹಕ್ಕು ಅವನಿಗೆ ಬರುವುದಿಲ್ಲ. ವ್ಯಕ್ತಿಯು ಅಹಂ, ಬ್ರಹ್ಮ, ಅಸ್ಮಿ ಈ ಮೂರು ಪದಗಳ ಪರಿಣತಿ ಸಾಧಿಸಿದ್ದ ಮಾತ್ರಕ್ಕೆ ಬ್ರಹ್ಮದೊಂದಿಗೆ ಐಕ್ಯವನ್ನು ಪಡೆಯಲು ಸಾಧ್ಯವೇನು? ಇಲ್ಲ. ಅಸಂಖ್ಯ ಜನ್ಮಗಳ ಮೂಲಕ ಕಷ್ಟಪಟ್ಟು, ಆಧ್ಯಾತ್ಮಿಕ ಕರ್ತವ್ಯಗಳನ್ನು ನಿಷ್ಠೆಯಿಂದ ನಡೆಸುವುದು ಮನಸ್ಸನ್ನು ಶುದ್ಧೀಕರಿಸುತ್ತದೆ. ಅಂತಹ ಮನಸ್ಸಿನಲ್ಲಿ ಭಕ್ತಿಯ ಬೀಜಗಳು ಮೊಳೆಯುತ್ತವೆ, ಜಾಗರೂಕತೆಯಿಂದ ಕಾಳಜಿಯಿಂದ ಸಾಕಿದರೆ, ಹೂವುಗಳು ಅರಳಿ, ಕಾಯಿಗಳು ಮೂಡಿ ಅವು ಪಕ್ವವಾಗಿ ಸಿಹಿಯನ್ನೂ ಪರಿಮಳವನ್ನೂ ತುಂಬಿಕೊಳ್ಳುತ್ತವೆ. ಹಣ್ಣನ್ನು ತಿಂದು ಮಾನವನು ಸಕಲ ಚರಾಚರಗಳನ್ನೂ ಸಕಲ ಧರ್ಮಗಳನ್ನೂ ತುಂಬಿಕೊಂಡ ಹಾಗೂ ಶಾಶ್ವತ ಸತ್ ಚಿತ್ ಆನಂದದೊಂದಿಗೆ ಒಂದಾಗುತ್ತಾನೆ.

ವ್ಯಕ್ತಿಯು 'ಅಹಂ ಬ್ರಹ್ಮಾಸ್ಮಿ' ಎಂಬ ಸೂತ್ರವನ್ನು ಸರಿಯಾಗಿಯೇ ವಿವರಿಸಬಹುದು; ವ್ಯುತ್ಪತ್ತಿ ಸಮರ್ಪಕವಾಗಿರಬಹುದು. ಆದರೆ ಜಗತ್ತು ಎಂಬುದರ ಬಗೆಗೆ ತಿಳಿದಿರದಿದ್ದರೆ, 'ನಾನು' ಎಂಬುದರ ಸ್ವರೂಪ ಗೊತ್ತಿರದಿದ್ದರೆ, 'ಬ್ರಹ್ಮ'ದ ಬಗೆಗೆ ತೀರಾ ಕತ್ತಲಲ್ಲಿದ್ದರೆ ಅವನು ಜ್ಞಾನಿಯ ಅಪರೂಪವಾದ ಆನಂದವನ್ನು ಎಂದಿಗಾದರೂ

ಹಂಚಿಕೊಳ್ಳಲು ಸಾಧ್ಯವಿದೆಯೆ? ಪದಗಳು ಮತ್ತು ಅವುಗಳ ಅರ್ಥದ ಮೇಲಿನ ಪ್ರಭುತ್ವ ಇಲ್ಲಿ ಗಣನೆಗೆ ಬರುವುದಿಲ್ಲ; ಅರಿವು, ಅನುಭವ ಇವೇ ಮೂಲಭೂತ ಅಂಶಗಳು.

ಮಣ್ಣು ಒಂದೇ ಸತ್ಯ. ಮಡಕೆಯ ಭಾವನೆಯು ಮಣ್ಣನ್ನು ಕುರಿತ ಅಜ್ಞಾನದಿಂದ ಬಂದದ್ದು. ಮಣ್ಣು ಆಧಾರ, ಮಡಕೆಯ ಮೂಲ ವಸ್ತು. ಮಣ್ಣು ಇಲ್ಲದೆ ಮಡಕೆಯು ಇರುವುದು ಹೇಗೆ ಸಾಧ್ಯ? ಕಾರಣವಿಲ್ಲದೆ ಪರಿಣಾಮವು ಇರಲು ಸಾಧ್ಯವೆ? ಜಗತ್ತು ಅಜ್ಞಾನಿಗೆ ಅನೇಕವೆಂಬಂತೆ ತೋರುವುದು. ಜ್ಞಾನಿಗೆ ಬ್ರಹ್ಮವೊಂದೇ ಸತ್ಯ, ಬೇರೆ ಎಲ್ಲವನ್ನೂ ಅದರ ಮೇಲೆ ಆರೋಪಿಸಲಾಗಿದೆ ಎಂಬುದು ಅರ್ಥವಾಗಿರುವುದು. ಅವನು ಆತ್ಮವೊಂದನ್ನೇ ನೋಡುತ್ತಾನೆ, ಅದಲ್ಲದೆ ಬೇರೆ ಏನೂ ಇಲ್ಲ. ಇದೇ ಅದ್ವೈತಾನುಭವ.

ಜಗತ್ತು ಸತ್ಯವಾಗಿದ್ದ ಪಕ್ಷದಲ್ಲಿ ಸ್ವಪ್ನರಹಿತವಾದ ಆಳವಾದ ನಿದ್ರಾಸ್ಥಿತಿ ಅಥವಾ ಸುಷುಪ್ತಿಯಲ್ಲೂ ಅದು ಅರಿವಿಗೆ ಬರಬೇಕಾಗಿತ್ತು, ಆದರೆ ನಮಗೆ ಹಾಗೆ ಅನುಭವಕ್ಕೆ ಬರುವುದಿಲ್ಲ. ಆದ್ದರಿಂದ ಈ ದೃಷ್ಟಿಗೋಚರ ಜಗತ್ತು ಸ್ವಪ್ನ ಜಗತ್ತಿನಂತೆಯೇ ಅಸತ್ಯ. ಭ್ರಮೆಯಿಂದಾಗಿ ಹಗ್ಗದ ಮೇಲೆ ಹಾವನ್ನು ಹೇರಲಾಗುತ್ತದೆ. ಹಾಗೆಯೇ ಬ್ರಹ್ಮದ ಮೇಲೆ ಜಗತ್ತನ್ನು ಹೊರಿಸಲಾಗಿದೆ. ಏಕಕಾಲದಲ್ಲಿ ಹಾವು ಹಗ್ಗ ಎರಡನ್ನೂ ನೋಡಲು ಸಾಧ್ಯವಿಲ್ಲ. ಇಡೀ ಹಗ್ಗವು ಹಾವಾಗಿದೆ. ಅದೇ ರೀತಿಯಲ್ಲಿ ಇಡೀ ಜಗತ್ತೇ ಬ್ರಹ್ಮ. ನಾಮರೂಪಗಳ ಅಸಂಖ್ಯ ವೈವಿಧ್ಯವುಳ್ಳ ಈ ಜಗತ್ತು ಬ್ರಹ್ಮವಾಗಿದೆ. ಆದರೆ ಕಲ್ಪನೆಯಿಂದ ಕಲ್ಪಿಸಿಕೊಂಡ ಈ ವೈವಿಧ್ಯವೆಲ್ಲವೂ ಮೂಲತಃ ಮಿಥ್ಯೆ, ಬ್ರಹ್ಮವೊಂದೇ ಸತ್ಯ.

ಹೆಂಡದ ಮಡಕೆಯಲ್ಲೂ ಆಕಾಶವು ಪ್ರತಿಬಿಂಬಿತವಾಗಬಹುದು, ಆದರೆ ಅದ ರಿಂದ ಹೆಂಡವು ಆಕಾಶವನ್ನು ಮಲಿನಗೊಳಿಸಿದಂತಾಗುವುದಿಲ್ಲ. ಹಾಗೆಯೇ ಈ ದೇಹವೆಂಬ ವಾಹನದಲ್ಲಿ ಆತ್ಮನು ಶುದ್ಧವಾಗಿ ಮಲಿನಗೊಳ್ಳದೆ ವಾಸ ಮಾಡುತ್ತಿದ್ದಾನೆ. ಕರ್ಮಫಲಗಳು, ಒಳ್ಳೆಯವು ಕೆಟ್ಟವು, ಉತ್ತಮ ನೀಚ ಎಲ್ಲವೂ ವಾಹನಕ್ಕೆ ಅನ್ವಯಿಸುತ್ತವೆಯೇ ಹೊರತು ಒಳಗೆ ವಾಸಿಸುತ್ತಿರುವ 'ನೋಡುಗ'ನಿಗೆ ಅನ್ವಯಿಸುವುದಿಲ್ಲ.

ಇಂತಹ ಜ್ಞಾನವು ಉದಿಸಿದಾಗ ಆಗಾಮಿ, ಸಂಚಿತ ಮತ್ತು ಪ್ರಾರಬ್ಧ ಎಂಬ ಮೂರು ಬಗೆಯ ಕರ್ಮಗಳ ಕರಿಯ ನೆರಳುಗಳು ಅದರೆದುರಿಗೆ ಪಲಾಯನ ಮಾಡುತ್ತವೆ. ಹೌದು, ಪ್ರಾರಬ್ಧಕರ್ಮವನ್ನು ಗೆಲ್ಲಬಹುದು. ಏಕೆಂದರೆ ಭಗವದಿಚ್ಛೆಯು ಸರ್ವಶಕ್ತ ಮತ್ತು ಸರ್ವಶಕ್ತತ್ವಕ್ಕೆ ಯಾವುದೇ ಮಿತಿಯಿಲ್ಲ, ಯಾವುದೂ ಅದರಿಂದ ವಿನಾಯಿತಿ ಪಡೆದಿಲ್ಲ. ಸಾಧನೆಯ ಮೂಲಕ ಭಗವತ್ಸಂಕಲ್ಪವನ್ನು ನೀವು ಜಯಿಸಿದರೆ ಆ

ಸಂಕಲ್ಪದಿಂದ ಪ್ರಾರಬ್ಧದ ಮೇಲೂ ಜಯಗಳಿಸಬಹುದು. ಆದ್ದರಿಂದ ಯಾವ ಪರಿಸ್ಥಿತಿಯಲ್ಲೂ ನಿರುತ್ಸಾಹಗೊಳ್ಳಬೇಡಿ.

ಈ ಜಗತ್ತಿನ ನೋವು, ಸಂಕಟಗಳು ಭ್ರಮಾತ್ಮಕವಾದವು ಮತ್ತು ಅನಿತ್ಯವಾದವು. ಈ ಅತಿ ಮುಖ್ಯ ವಿಷಯದ ಮೇಲೆ ನಿಮ್ಮ ಮನಸ್ಸನ್ನು ಸ್ಥಿರವಾಗಿ ನೆಟ್ಟು ಭಕ್ತಿ ಸಾಧನೆಯ ಪಥದಲ್ಲಿ ಮುನ್ನಡೆಯಿರಿ.

## ೧೬ ಜೀವನವು ಸಂಸ್ಕಾರಗಳನ್ನವಲಂಬಿಸಿದ ಯಾತ್ರೆ

ಜನರು ಅನೇಕ ಚಟುವಟಿಕೆಗಳಲ್ಲಿ ಮುಳುಗಿ ಹೋಗಿದ್ದಾರೆ, ಹಲವು ಉದ್ಯಮಗಳಲ್ಲಿ ನಿರತರಾಗಿದ್ದಾರೆ. ಇದು ಚೆನ್ನಾಗಿ ತಿಳಿದಿರುವ ವಿಚಾರ. ಅವು ಎಷ್ಟಿವೆ ಎಂದರೆ ಕೆಲವು ಸಾರಿ ದಿನನಿತ್ಯದ ಚಟುವಟಿಕೆಗಳಿಗೆ ಇಪ್ಪತ್ತನಾಲ್ಕು ಗಂಟೆಗಳ ಅವಧಿ ಸಾಲುವುದೇ ಇಲ್ಲ ಎಂಬ ಭಾವನೆ ಬರಬಹುದು. ಕುಡಿಯುವುದು, ತಿನ್ನುವುದು, ಓದುವುದು, ನಡೆಯುವುದು, ಕುಳಿತುಕೊಳ್ಳುವುದು, ಜೊತೆಗೆ ಕನಸು ಕಾಣುವುದು, ದ್ವೇಷಿಸುವುದು, ಜಂಬ ಕೊಚ್ಚುವುದು, ಹೊಗಳುವುದು, ಅಳುವುದು, ನಗುವುದು, ಬೇಸರಪಡುವುದು, ಆಶಿಸುವುದು ಹೀಗೆ ಬಗೆಬಗೆಯಾದ ಚಟುವಟಿಕೆಗಳು ಕೊನೆಯೇ ಇಲ್ಲದೆ ನಡೆದಿವೆ. ಅವು ಜೀವಿತಾವಧಿಯನ್ನು ತುಂಬಿಕೊಂಡಿವೆ. ಈ ಚಟುವಟಿಕೆಗಳು ಮನಸ್ಸಿಗೆ ಸಂಬಂಧಪಟ್ಟಿವೆ. ಇವು ಜೀವನವನ್ನು ಶೀಲದ ಮೇಲೂ ವ್ಯಕ್ತಿತ್ವದ ಮೇಲೂ ಪ್ರಭಾವ ಬೀರುವಂತಹ ಸಂಸ್ಕಾರಗಳ ಒಂದು ಸಂಗ್ರಹವನ್ನಾಗಿ ಮಾಡುತ್ತವೆ.

ಒಳ್ಳೆಯವು ಮತ್ತು ಕೆಟ್ಟವು ಎಂಬ ಎರಡು ಬಗೆಯ ಚಟುವಟಿಕೆಗಳಿವೆ. ಮನುಷ್ಯನ ಬದುಕಿನ ಮೇಲೆ ಈ ಎರಡರ ಪರಿಣಾಮಗಳನ್ನೂ ಪರಿಗಣಿಸಬೇಕು. ಎಳೆಯ ವಯಸ್ಸಿನಲ್ಲಿ ಮಾಡುವ ಕರ್ಮಗಳು ಆ ಬಾಲಕನು ಕಪ್ಪು ಹಲಗೆಯ ಮೇಲೆ ಬರೆದ ಅಕ್ಷರಗಳ ಹಾಗೆ ಅಳಿಸಿ ಹೋಗುತ್ತವೆ. ಬಾಲ್ಯದ ಘಟನೆಗಳೇ ಹೀಗೆ ಮರವೆಗೆ ಸರಿದ ಮೇಲೆ ಹಿಂದಿನ ಜನ್ಮದ ಘಟನೆಗಳು ನೆನಪಿನಲ್ಲಿ ಉಳಿಯುವುದಾದರೂ ಹೇಗೆ? ಈ ವಿಷಯವನ್ನು ಒತ್ತಟ್ಟಿಗಿಟ್ಟರೂ, ನೆನಪಿನಲ್ಲಿ ಉಳಿದಿರುವ ಘಟನೆಗಳು ಮಾತ್ರವೇ ನಡೆದಿವೆ ಅಥವಾ ನಡವಳಿಕೆಯನ್ನು ರೂಪಿಸಿವೆ ಎಂದು ಊಹಿಸುವುದು ತಪ್ಪಾಗುತ್ತದೆ. ನಡೆದುಹೋಗಿರುವ ಘಟನೆಗಳನ್ನು ಆಮೇಲಿನ ಘಟನೆಗಳು ಮರವೆಗೆ ನೂಕಿರುತ್ತವೆ. ಅವೂ ಕೂಡ ಮನಸ್ಸಿನ ಮೇಲೆ ತಮ್ಮ ಪರಿಣಾಮಗಳ ಕುರುಹುಗಳನ್ನು ಬಿಟ್ಟಿರುತ್ತವೆ. ಅವು ಅಲ್ಲಿ ಉಳಿದೇ ಇವೆ. ರಾತ್ರಿ ಮಲಗುವಾಗ ದಿನದ ಸಂಭವಗಳನ್ನು ನೆನೆಯುವಾಗ ಅಮುಖ್ಯವಾದುದರಿಂದ ಅತಿ ಮುಖ್ಯ

ವಾದುದರವರೆಗೆ ಎಲ್ಲವೂ ನೆನಪಿಗೆ ಬರುವುದಿಲ್ಲ. ಒಳಗೆ ಆಳವಾಗಿ ನಾಟಿಕೊಂಡಿರುವಂಥವನ್ನು ಮಾತ್ರ ಮತ್ತೆ ನೆನಪಿಗೆ ಸೆಳೆದು ತರಬಹುದು.

ಒಂದು ದಿನದ ಘಟನೆಗಳ ವಿಷಯದಲ್ಲೇ ಈ ಪರಿಸ್ಥಿತಿಯಿದ್ದರೆ, ನೋವು ನಲಿವುಗಳಿಗೆ ಸಂಬಂಧಪಡದ ಎಲ್ಲ ಘಟನೆಗಳನ್ನೂ ನಾವು ಮರೆತುಬಿಡುವುದಾದರೆ ಹೋದ ವಾರ ಅಥವಾ ತಿಂಗಳು ಅಥವಾ ವರ್ಷಗಳಲ್ಲಿ ನಡೆದ ಘಟನೆಗಳ ಬಗೆಗೆ ಏನು ಹೇಳಬಹುದು? ಮುಖ್ಯವಾದ ಕೆಲವು ಘಟನೆಗಳು ಮಾತ್ರ ದಾಖಲಾಗಿರುತ್ತವೆ, ಮಿಕ್ಕವು ಮಂಕಾಗಿ, ಹಿಂದಕ್ಕೆ ಸರಿದು ಮಾಯವಾಗುತ್ತವೆ. ಉಳಿಯುವ ಈ ಕೆಲವೇ ಸಂಸ್ಕಾರಗಳು.

ಅಸಂಖ್ಯಾತವಾದ ಕಾರ್ಯಗಳನ್ನು ಮಾಡುವುದು, ವ್ಯಾಪಕವಾದ ಅನುಭವವನ್ನೂ ಜ್ಞಾನವನ್ನೂ ಸಂಪಾದಿಸುವುದು, ಅಪಾರ ವೈವಿಧ್ಯದಿಂದ ಕೂಡಿದ ಚಟುವಟಿಕೆಗಳಿಂದ ಅಪಾರವಾದ ಪಾಠಗಳನ್ನು ಕಲಿಯುವುದು–ಇವುಗಳ ನಡುವೆ ವ್ಯಕ್ತಿಯು ನಾಲ್ಕೋ ಐದೋ ಘಟನೆಗಳನ್ನು ಬಲವಾಗಿ ಆಳವಾಗಿ ಬೇರೂರುವಂತೆ ಮಾಡಿ ಮಹತ್ವದ್ದನ್ನಾಗಿ ಉಳಿಸಿಕೊಳ್ಳುತ್ತಾನೆ.

ವ್ಯಾಪಾರಿಯು ವಾರದ ಕೊನೆಗೆ ಅಥವಾ ತಿಂಗಳ ಅಥವಾ ವರ್ಷದ ಕೊನೆಗೆ ಲಾಭ ನಷ್ಟಗಳನ್ನು ಲೆಕ್ಕಹಾಕಿ ಅಂತಿಮವಾಗಿ ತನ್ನ ಸಂಪಾದನೆಯೇನು ಎಂದು ಕಂಡುಹಿಡಿಯಲು ಪ್ರಯತ್ನಿಸುತ್ತಾನೆ. ಹಾಗೆಯೇ ಜೀವಿತವೆಂಬ ಈ ವ್ಯವಹಾರದಲ್ಲಿ ಕೊಡುವುದು ಕೊಳ್ಳುವುದು ಎಲ್ಲ ಮುಗಿದ ಮೇಲೆ ಕೊನೆಗೆ ನಿವ್ವಳ ವರಮಾನವಾಗಿ ಕೊಂಚ ಉಳಿಯುತ್ತದೆ. ಜೀವಿತಾವಧಿಯ ಕೊಟ್ಟ ಕೊನೆಯಲ್ಲಿ ನೆನಪಿನಲ್ಲಿ ಉಳಿಯುವುದು ಅತ್ಯಲ್ಪ ಪ್ರಮಾಣ ಮಾತ್ರ. ಕಡೆಯ ಗಳಿಗೆಯವರೆಗೆ ಉಳಿಯುವಂತಹ ಜೀವನದಲ್ಲಿ ನಡೆದುದನ್ನು ನೆನೆದಾಗ ಪ್ರಜ್ಞೆಗೆ ಬರುವ ಎರಡೋ ಮೂರೋ ಅನುಭವಗಳು ನಿಜವಾಗಿ ಸತ್ವಯುತವಾದವು, ಅಸಲಿ ಸಾಧನೆಗಳು.

ಮಿಕ್ಕೆಲ್ಲ ಕರ್ಮಗಳು ಮತ್ತು ಮಿಕ್ಕೆಲ್ಲ ಅನುಭವಗಳು ವ್ಯರ್ಥ ಎಂದು ಇದರ ಅರ್ಥವಲ್ಲ. ಅವುಗಳನ್ನು ಮರೆಯುವುದೆಂದರೆ ಆ ಕೆಲಸಗಳನ್ನು ಯಶಸ್ವಿಯಾಗಿ ಮಾಡಿದ್ದಾಗಿದೆ, ಅವುಗಳ ಮೌಲ್ಯವನ್ನು ಪಡೆದಾಗಿದೆ ಎಂದು ಅರ್ಥ.

ಸಾವಿರಾರು ರೂಪಾಯಿಗಳನ್ನಿಟ್ಟು ವ್ಯವಹಾರ ಮಾಡಿದಾಗ ಕೆಲವು ಸಾವಿರಗಳ ನಷ್ಟವಾದರೆ ವ್ಯಕ್ತಿಯ ಹೃದಯದ ಬಡಿತ ನಿಂತುಹೋಗುತ್ತದೆ; ಸಾವಿರಗಳ ಲಾಭವಾದರೆ ಹೃದಯವು ಸಂತೋಷದಲ್ಲಿ ನಲಿಯುತ್ತದೆ. ಜೀವನ ವ್ಯವಹಾರದ ಕಥೆಯೂ ಹೀಗೆಯೆ; ವ್ಯಕ್ತಿಯು ಮರಣೋನ್ಮುಖನಾಗಿರುವಾಗ ನಾಲಗೆ ಚಪಲವನ್ನು ತೀರಿಸಿಕೊಳ್ಳಬಯಸಿದರೆ, ಜೀವನಪೂರ್ತಿಯಾಗಿ ನಾಲಗೆಯೇ ಅವನ ಯಜಮಾನನಾಗಿತ್ತು ಎಂಬುದಕ್ಕೆ ಅದು ಸಮರ್ಥನೆಯಾಗುತ್ತದೆ. ಸಾಯುವ ಗಳಿಗೆಯಲ್ಲಿ ಹೆಂಗಸು ಮಗುವನ್ನು ಮುದ್ದಿಸಬಯಸಿದರೆ, ಮಗುವಿನ ಮೇಲಿನ

ಪ್ರೀತಿಯ ಸಂಸ್ಕಾರವೇ ಬದುಕಿನುದ್ದಕ್ಕೂ ಪ್ರಮುಖವಾಗಿದ್ದಿತೆಂಬುದನ್ನು ಅದು ತೋರಿಸುತ್ತದೆ. ಇತರ ಎಲ್ಲ ಅನುಭವಗಳನ್ನೂ ಮರವೆಗೆ ನೂಕಿರುವುದನ್ನು ಅದು ಸಮರ್ಥಿಸುತ್ತದೆ.

ಹೀಗೆ, ಬದುಕಿನ ಸಂಸ್ಕಾರಗಳು, ಒಂದಲ್ಲ ಒಂದು, ಮಿಕ್ಕವುಗಳಿಗಿಂತ ಬಲವಾಗಿ ಕೊನೆಯವರೆಗೂ ಉಳಿಯುತ್ತವೆ. ಅದೇ ಜೀವನ; ಇದನ್ನು ತಿಳಿದುಕೊಂಡಿರ ಬೇಕು. ಈ ಬದುಕಿನ ಈ ದುಡಿಮೆಯೆಲ್ಲದರ ನಿವ್ವಳ ಫಲ, ಅವನ ಬದುಕಿನ ಕೊನೆಯ ಕ್ಷಣದಲ್ಲಿ ಸ್ಮರಣೆಗೆ ಯಾವುದು ಬರುವುದೋ ಅದೇ ಆಗಿದೆ. ಆದ್ದರಿಂದ ಕೊನೆಯ ಕ್ಷಣಕ್ಕೆ ಯಾವುದು ಅತ್ಯುತ್ತಮವೋ ಆ ಸಂಸ್ಕಾರವನ್ನು ಗಳಿಸುವುದ ಕ್ಕಾಗಿಯೇ ಜೀವನ ಪ್ರವಾಹವನ್ನು ತಿರುಗಿಸಿರಿ. ಆ ಸಂಸ್ಕಾರದ ಬಗೆಗೆ ಹಗಲು ರಾತ್ರಿ ಗಮನವನ್ನು ನೆಡಿರಿ. ಮರಣ ಸಮಯದಲ್ಲಿ ಪ್ರಧಾನವಾಗಿ ನಿಲ್ಲುವ ಭಾವನೆಯೇ ಮುಂಬರುವ ಜನ್ಮದಲ್ಲಿ ಪ್ರಬಲವಾಗಿ ವರ್ತಿಸುತ್ತದೆ. ಈ ಸತ್ಯವು ಮನುಷ್ಯನಿಗೆ ಅವನ ಜೀವನಯಾತ್ರೆಯಲ್ಲಿ ಮಾರ್ಗದರ್ಶನ ಮಾಡಬೇಕು. ಏಕೆಂದರೆ ಈ ಪ್ರಯಾಣಕ್ಕೂ ಇದಾದ ನಂತರದ ಬದುಕಿನ ಯಾತ್ರೆಗಳಿಗೂ ಸಂಸ್ಕಾರಗಳೇ ಮೂಲವಸ್ತು.

ಆದ್ದರಿಂದ, ನಾಳೆಯಿಂದಲೇ ನೆನಪಿನ ಕಣ್ಣಿನ ಮುಂದೆ, ಅನಿವಾರ್ಯವಾದ ಮರಣ ವನ್ನು ಇಟ್ಟುಕೊಳ್ಳಿರಿ. ಸಕಲರಿಗೂ ಶುಭವನ್ನು ಕೋರುತ್ತಾ ಪಟ್ಟಾಗಿ ಸತ್ಯವನ್ನೇ ಹಿಡಿದು, ಸಜ್ಜನ ಸಹವಾಸವನ್ನೇ ಸದಾ ಬಯಸುತ್ತಾ ಮನಸ್ಸನ್ನು ಸದಾ ಭಗವಂತನ ಮೇಲೆ ನೆಟ್ಟು ಜೀವನ ಯಾತ್ರೆಯಲ್ಲಿ ನಿರತರಾಗಿರಿ. ಕೆಟ್ಟ ಕೆಲಸಗಳನ್ನೂ ಮತ್ಸರಗ್ರಸ್ತವಾದ ಕೆಟ್ಟ ಆಲೋಚನೆಗಳನ್ನೂ ನಿವಾರಿಸಿಕೊಂಡು ಬದುಕಿರಿ. ಈ ಜಗತ್ತಿಗೆ ಅಂಟಿಕೊಳ್ಳಬೇಡಿ. ಹೀಗೆ ಬದುಕಿದಾಗ ನಿಮ್ಮ ಕೊನೆಯ ಕ್ಷಣವು ಶುದ್ಧವೂ ಸಿಹಿಯೂ ಧನ್ಯವೂ ಆಗಿರುತ್ತದೆ. ಈ ಪರಮೋನ್ನತ ಫಲವನ್ನು ಪಡೆಯಲು ಜೀವನದುದ್ದಕ್ಕೂ ಶಿಸ್ತುಬದ್ಧ ಪರಿಶ್ರಮವು ಅತ್ಯಾವಶ್ಯಕವಾಗಿರುತ್ತದೆ. ಮನಸ್ಸನ್ನು ಉತ್ತಮ ಸಂಸ್ಕಾರಗಳ ಕಡೆಗೆ ತಿರುಗಿಸಬೇಕು. ಪ್ರತಿಯೊಬ್ಬನೂ ತನ್ನನ್ನೇ ತಾನು ಕಟ್ಟೆಚ್ಚರದಿಂದ ಪರೀಕ್ಷಿಸಿಕೊಂಡು, ತನ್ನ ದೋಷಗಳನ್ನು ತಿದ್ದಿಕೊಳ್ಳಲು ಕಷ್ಟಪಟ್ಟು ಪ್ರಯತ್ನ ಮಾಡಬೇಕು. ಮನುಷ್ಯನು ತನ್ನ ದೋಷಗಳನ್ನು ಅರ್ಥಮಾಡಿಕೊಂಡು ಹೊರಗೆಳೆದಾಗ ಅದು ಅವನಿಗೆ ಹೊಸ ಹುಟ್ಟಿನಂತೆ. ಆಮೇಲೆ ಅವನು ಹೊಸದಾಗಿ ಶೈಶವದಿಂದ ಪ್ರಾರಂಭ ಮಾಡುತ್ತಾನೆ. ಅದೇ ನಿಜವಾದ ಜಾಗೃತಿಯ ಕ್ಷಣ.

ಸಾವು ಸುಳಿವನ್ನೇ ಕೊಡದೆ ಬೆನ್ನಟ್ಟಿ ಬರುತ್ತದೆ. ಆದರೂ ಮನುಷ್ಯನು 'ಸಾವು' ಎಂಬ ಪದವನ್ನೇ ಸಹಿಸುವುದಿಲ್ಲ, ಅದನ್ನು ಕೇಳುವುದೂ ಅಶುಭಕರ ಎಂದು ಭಾವಿಸುತ್ತಾನೆ. ಪದವು ಎಷ್ಟೇ ಅಸಹನೀಯವಾಗಿದ್ದರೂ ಪ್ರತಿಯೊಬ್ಬ ಜೀವಿಯೂ ಪ್ರತಿಯೊಂದು ಕ್ಷಣದಲ್ಲೂ ಅದರ ಹತ್ತಿರ ಹತ್ತಿರಕ್ಕೆ ಹೋಗುತ್ತಿರುತ್ತಾನೆ. ಪ್ರಯಾಣ ಮಾಡುವ ಉದ್ದೇಶದಿಂದ ಅದಕ್ಕಾಗಿ ಟಿಕೆಟ್ಟನ್ನು ಕೊಂಡು ರೈಲಿಗೆ ಹತ್ತಿದ

ಮೇಲೆ ನೀವು ಸುಮ್ಮನೆ ಕುಳಿತರೂ ಮಲಗಿದರೂ ಓದುತ್ತಿದ್ದರೂ ಅಥವಾ ಧ್ಯಾನ ಮಾಡುತ್ತಿದ್ದರೂ ಏನೂ ಭೇದವಿಲ್ಲ, ರೈಲು ನಿಮ್ಮನ್ನು ನಿಶ್ಚಿತ ನಿಲ್ದಾಣಕ್ಕೆ ಕೊಂಡೊಯ್ಯುತ್ತದೆ. ಹಾಗೆಯೇ ಪ್ರತಿಯೊಬ್ಬ ಜೀವಿಯೂ ಹುಟ್ಟಿದೊಡನೆ ಮರಣಕ್ಕಾಗಿ ಒಂದು ಟಿಕೆಟ್ಟನ್ನು ಪಡೆದುಕೊಂಡಾಗಿದೆ, ಪ್ರಯಾಣವನ್ನು ಪ್ರಾರಂಭಿಸಿಯಾಗಿದೆ. ಈಗ ನಿಮ್ಮ ಕಷ್ಟಗಳು, ಎಚ್ಚರಿಕೆಯ ಕ್ರಮಗಳು, ರಕ್ಷಣಾ ವ್ಯವಸ್ಥೆ ಇವು ಏನೇ ಇರಲಿ ಒಂದು ದಿನ ಆ ಸ್ಥಳವನ್ನು ತಲುಪಲೇಬೇಕು. ಬೇರೆ ಯಾವುದೇ ಅನಿಶ್ಚಿತವಾಗಿರಬಹುದು, ಆದರೆ ಸಾವು ಮಾತ್ರ ಖಚಿತ. ಆ ಕಟ್ಟಳೆಯನ್ನು ಬದಲಾಯಿಸುವುದು ಸಾಧ್ಯವೇ ಇಲ್ಲ.

ಮನುಷ್ಯನು ಕಣ್ಣಿಗೆ, ಕಿವಿಗೆ, ನಾಲಗೆಗೆ ಅನುದಿನವೂ ಹೊಸ ಹೊಸತರ ಸುಖ ಭೋಗವನ್ನು ಅಭ್ಯಾಸ ಮಾಡಿಸಿದ್ದಾನೆ; ಈಗ ಅದಕ್ಕೆ ವಿರುದ್ಧವಾದ ಪ್ರವೃತ್ತಿಗಳನ್ನು ಅವುಗಳಿಗೆ ಕಲಿಸಬೇಕು. ಮನಸ್ಸನ್ನು ಒಳ್ಳೆಯದರ ಕಡೆಗೆ ತಿರುಗಿಸಬೇಕು; ಪ್ರತಿಯೊಂದು ಕ್ಷಣದ ಚಟುವಟಿಕೆಗಳನ್ನು ಆ ನೆಲೆಯಿಂದ ಪರೀಕ್ಷಿಸಬೇಕು. ಅಂತಹ ಒಂದೊಂದು ಕೆಲಸವೂ ಉಳಿಯ ಒಂದೊಂದು ಪೆಟ್ಟು. ಮಾನವ ವ್ಯಕ್ತಿತ್ವವೆಂಬ ಬಂಡೆಗೆ ಈ ಪೆಟ್ಟುಗಳು ಆಕಾರ ಕೊಡುತ್ತಿವೆ. ತಪ್ಪಾದ ರೀತಿಯಲ್ಲಿ ಉಳಿಯ ಪೆಟ್ಟು ಕೊಟ್ಟರೆ ಎಲ್ಲಾ ಹಾಳಾಗಿ ಬಂಡೆಯು ವಿರೂಪಗೊಳ್ಳಬಹುದು. ಆದ್ದರಿಂದ ಅತ್ಯಂತ ಸಣ್ಣದಾದ ಕೆಲಸಗಳನ್ನು ಕೂಡ ಅತ್ಯಂತ ಹೆಚ್ಚು ಕಾಳಜಿಯಿಂದಲೂ ಶ್ರದ್ಧೆಯಿಂದಲೂ ಮಾಡಬೇಕು.

ಮುಳುಗುತ್ತಿರುವವನಿಗೆ ಒಂದು ಹುಲ್ಲು ಕಡ್ಡಿಯೂ ಸಹಾಯವಾಗುತ್ತದೆ. ಹಾಗೆ ಸಂಸಾರ ಸಾಗರದಲ್ಲಿ ಹೋರಾಡುತ್ತಿರುವ ವ್ಯಕ್ತಿಗೆ ಯಾರೋ ಆಡಿದ ನಾಲ್ಕು ಒಳ್ಳೆಯ ಮಾತುಗಳೂ ಬಹಳ ಸಹಾಯಕವಾಗಬಹುದು. ಯಾವುದೇ ಒಳ್ಳೆಯ ಕೆಲಸವೂ ವ್ಯರ್ಥವಾಗುವುದಿಲ್ಲ, ಹಾಗೆಯೇ ಒಂದು ಕೆಟ್ಟ ಕೆಲಸವೂ ವ್ಯರ್ಥವಾಗದು. ಏಕೆಂದರೆ ಅದಕ್ಕೂ ಪರಿಣಾಮಗಳಿದ್ದೇ ಇವೆ. ಆದ್ದರಿಂದ ಕೆಟ್ಟ ಕೆಲಸದ ಒಂದು ಸಣ್ಣ ಕುರುಹು ಕೂಡ ಹತ್ತಿರ ಸುಳಿಯದಂತೆ ನಿವಾರಿಸಿರಿ. ನಿಮ್ಮ ಕಣ್ಣುಗಳನ್ನು ಶುದ್ಧವಾಗಿರಿಸಿಕೊಳ್ಳಿ, ಕಿವಿಗಳನ್ನು ಭಗವಂತನ ಮಾತುಗಳಿಂದ, ದೈವಲೀಲೆಯ ಕಥೆಗಳಿಂದ ತುಂಬಿರಿ. ಕೆಲಸಕ್ಕೆ ಬಾರದ ಹೀನ ಮಾತುಗಳನ್ನು ಕೇಳಲು ಕಿವಿಗೆ ಅವಕಾಶ ಕೊಡಬೇಡಿ. ನಾಲಗೆಯನ್ನು ಒಳ್ಳೆಯ ಮಾತಾಡಲು, ದಯಾಪೂರ್ಣವೂ ಸತ್ಯವೂ ಆದ ಮಾತುಗಳನ್ನಾಡಲು ಉಪಯೋಗಿಸಿರಿ. ಅದು ಸದಾ ನಿಮಗೆ ಭಗವಂತನ ನೆನಪು ಕೊಡುತ್ತಿರಲಿ. ಅಂತಹ ನಿರಂತರ ಪ್ರಯತ್ನವು ನಿಮಗೆ ಜಯವನ್ನು ತಂದುಕೊಡಲೇಬೇಕು. ಈ ಪವಿತ್ರ ಸಂಸ್ಕಾರಗಳನ್ನು ಗಳಿಸುವ ಸಲುವಾಗಿ ವ್ಯಕ್ತಿಯು ಅವಿಚ್ಛಿನ್ನವಾಗಿ ಉನ್ನತ ಆಲೋಚನೆಗಳು ಮತ್ತು ಭಾವನೆಗಳ ಪ್ರವಾಹವನ್ನು ಉಳಿಸಿಕೊಳ್ಳಬೇಕು.

ಕೈಗಳನ್ನು ಸತ್ಕಾರ್ಯಗಳಿಗಾಗಿಯೇ ಉಪಯೋಗಿಸಬೇಕು. ಒಳಗೆ ಭಗವಂತನ ನಾಮ ಸ್ಮರಣೆ, ಹೊರಗೆ ಸ್ವಧರ್ಮಪರಿಪಾಲನೆಗಳನ್ನು ಇಟ್ಟುಕೊಳ್ಳಿ. ಕೈಗಳು ಸೇವಾನಿರತ ವಾಗುತ್ತಾ ಮನಸ್ಸು ಬೇಕಾದರೆ ಹಲವಾರು ವಿಷಯಗಳಲ್ಲಿ ತೊಡರಿಕೊಂಡಿರಲಿ, ಅದರಿಂದ ಕೆಡುಕೇನೂ ಇಲ್ಲ. ಮಳೆಯು ಪರ್ವತಶಿಖರಗಳ ಮೇಲೆ ಸುರಿದು ರಭಸವಾಗಿ ಪಾರ್ಶ್ವಗಳಿಂದ ಕೆಳಕ್ಕೆ ಹರಿದು ಬರುವಾಗ ಅದರಿಂದ ಯಾವ ನದಿಯೂ ಹುಟ್ಟುವುದಿಲ್ಲ. ಆದರೆ ಆ ನೀರು ಒಂದೇ ದಿಕ್ಕಿನಲ್ಲಿ ಹರಿದರೆ, ಒಂದು ಸಣ್ಣ ತೊರೆಯಾಗಿ, ಆಮೇಲೆ ಹೊಳೆಯಾಗಿ, ಕೊನೆಗೆ ತುಂಬು ಪ್ರವಾಹವಾಗಿ ರೂಪುಗೊಳ್ಳುತ್ತದೆ, ಮಳೆಯ ನೀರು ಸಮುದ್ರವನ್ನು ಸೇರುತ್ತದೆ. ಒಂದು ದಿಕ್ಕಿನಲ್ಲಿ ಹರಿಯುವ ನೀರು ಸಮುದ್ರವನ್ನು ಸೇರಿದರೆ, ನಾಲ್ಕು ದಿಕ್ಕುಗಳಲ್ಲಿ ಹರಿದ ನೀರು ಇಂಗಿ ಹೋಗುತ್ತದೆ. ಸಂಸ್ಕಾರಗಳು ಈ ಬಗೆಯವು. ಅವು ಇಂದು ಈ ರೀತಿಯಲ್ಲಿ, ಇನ್ನೊಂದು ದಿನ ಇನ್ನೊಂದು ರೀತಿಯಲ್ಲಿ ಕೇವಲ ಬಂದುಹೋಗಿಬಿಟ್ಟರೆ ಅವು ಗಳಿಂದ ಪ್ರಯೋಜನವೇನು? ಸಂಸ್ಕಾರಗಳ ಪವಿತ್ರ ನದಿಯು ಪೂರ್ತಿ ತುಂಬಿ, ಸ್ಥಿರಗತಿಯಲ್ಲಿ, ಪವಿತ್ರ ಆಲೋಚನೆಗಳ ಗದ್ದೆ ಬಯಲಲ್ಲಿ ಹರಿದು, ವ್ಯಕ್ತಿಯ ಮರಣ ಸಮಯದಲ್ಲಿ ದಿವ್ಯಾನಂದದ ಮಹಾಸಾಗರದಲ್ಲಿ ಸೇರಿಕೊಳ್ಳಬೇಕು. ಆ ಲಕ್ಷ್ಯವನ್ನು ತಲುಪುವವನು ನಿಜವಾಗಿ ಶ್ರೇಷ್ಠ ವ್ಯಕ್ತಿ.

ಒಂದು ಕಲ್ಲನ್ನು ಇಪ್ಪತ್ತು ಸುತ್ತಿಗೆ ಹೊಡೆತಗಳು ಒಡೆಯದೆ ಇರಬಹುದು; ಇಪ್ಪತ್ತೊಂದನೆಯ ಹೊಡೆತವು ಅದನ್ನು ಒಡೆಯಬಹುದು. ಇದರಿಂದ ಮೊದಲ ಇಪ್ಪತ್ತು ಪೆಟ್ಟುಗಳು ವ್ಯರ್ಥವೆಂದು ಅರ್ಥವಾಗುವುದೇನು? ಇಲ್ಲ. ಈ ಇಪ್ಪತ್ತು ಹೊಡೆತಗಳಲ್ಲಿ ಒಂದೊಂದೂ ಕೊನೆಯ ಗೆಲುವಿಗೆ ತನ್ನ ಕಾಣಿಕೆಯನ್ನು ನೀಡಿತು; ಅಂತಿಮ ಫಲವು ಆ ಇಪ್ಪತ್ತೊಂದು ಪೆಟ್ಟುಗಳ ಒಟ್ಟು ಪರಿಣಾಮ. ಹಾಗೆಯೇ ಮನಸ್ಸು ಪ್ರಪಂಚದೊಂದಿಗೆ ಒಳಗೆ ಮತ್ತು ಹೊರಗೆ ಹೋರಾಡುತ್ತಿದೆ. ಯಾವಾ ಗಲೂ ನಿಮ್ಮ ಪಾಲಿಗೆ ಗೆಲುವೇ ಇರುತ್ತದೆ ಎಂದು ಹೇಳಲಾಗುವುದಿಲ್ಲ. ಆದರೆ ಮನುಷ್ಯನು ಸತ್ಕಾರ್ಯಗಳಲ್ಲಿ ನಿರತನಾಗಿದ್ದು, ಮನಸ್ಸು ಭಗವತ್ ಪ್ರೇಮದಿಂದ ಪರ್ಯಾಪ್ತವಾಗಿದ್ದರೆ ಶಾಶ್ವತವಾದ ಆನಂದವನ್ನು ಪಡೆಯಬಹುದು. ಬದುಕಿನ ಪ್ರತಿಯೊಂದು ಕ್ಷಣವನ್ನೂ ಆ ಪ್ರೇಮದಿಂದ ತುಂಬಿರಿ. ಆಗ ದುಷ್ಟ ಪ್ರವೃತ್ತಿಗಳು ನಿಮ್ಮ ದಾರಿಯನ್ನು ತಡೆಗಟ್ಟಲಾರವು. ಅವನ ಮನಸ್ಸು ಸದಾ ಭಗವಂತನಲ್ಲಿ ನೆಲೆಸಿರುವುದರಿಂದ ಅವನು ತಾನಾಗಿಯೇ ಸತ್ಕಾರ್ಯಗಳ ಕಡೆಗೆ ಮಾತ್ರ ಸೆಳೆಯ ಲ್ಪಡುತ್ತಾನೆ. ಸಮಸ್ತ ಸಾಧನೆಯ ಉದ್ದೇಶವಾದರೂ ಮನಸ್ಸನ್ನು ನಾಶಪಡಿಸು ವುದು. ಒಂದು ದಿನ ಯಾವುದೇ ಒಂದು ಸತ್ಕಾರ್ಯವು ಅದನ್ನು ನಾಶಪಡಿಸುವುದ ರಲ್ಲಿ ಯಶಸ್ವಿಯಾಗಬಹುದು, ಇಪ್ಪತ್ತೈದನೆಯ ಪೆಟ್ಟು ಕಲ್ಲನ್ನು ಒಡೆದ ಹಾಗೆ. ಈ ಗೆಲುವಿಗೆ, ಈ ಹಿಂದೆ ಮಾಡಿದ ಒಳ್ಳೆಯ ಕೆಲಸಗಳೆಲ್ಲವೂ ಕೊಡುಗೆಯಿತ್ತಿರುತ್ತವೆ. ಪ್ರತಿಯೊಂದು ಅತಿ ಸಣ್ಣ ವಸ್ತುವೂ ಗಣನೀಯವಾಗುತ್ತದೆ. ಯಾವುದೇ ಸತ್ಕಾ ರ್ಯವು ವ್ಯರ್ಥವಾಗುವುದಿಲ್ಲ.

ಆಧ್ಯಾತ್ಮಿಕ ವಲಯದಲ್ಲಿ ಹೋರಾಡುವಾಗ ಪರಮೇಶ್ವರನೇ ನಿಮ್ಮ ರಕ್ಷಕನೆಂದು ಭಾವಿಸಬೇಕು. ಮಗುವಿಗೆ ಧೈರ್ಯ ತುಂಬಲು ತಾಯಿಯು ಒಂದೆರಡು ಹೆಜ್ಜೆ ನಡೆದು ಹಿಂದಿರುಗಿ ಬಂದುಬಿಡುವಂತೆ ಒಲಿಸುತ್ತಾಳೆ. ಮಗುವು ಸಮತೋಲನ ಕಳೆದುಕೊಳ್ಳಲು ಅವಳು ಬಿಡುವುದಿಲ್ಲ. ಹಿಂದಿನಿಂದ ಧಾವಿಸಿ ಬಂದು ಅದು ನೆಲಕ್ಕೆ ಬಿದ್ದುಬಿಡದಂತೆ ಹಿಡಿದುಕೊಳ್ಳುತ್ತಾಳೆ. ಈಶ್ವರನೂ ಹಾಗೆಯೇ ಜೀವಿಯ ಮೇಲೆ ತನ್ನ ದೃಷ್ಟಿಯನ್ನು ನೆಟ್ಟಿದ್ದಾನೆ. ಮಾನವನೆಂಬ ಗಾಳಿಪಟದ ದಾರವನ್ನು ಅವನು ಕೈಯಲ್ಲಿ ಹಿಡಿದುಕೊಂಡಿದ್ದಾನೆ. ಕೆಲವು ಸಾರಿ ಅದನ್ನು ಅವನು ಜಗ್ಗಿಸಬಹುದು, ಕೆಲವು ಸಾರಿ ಸಡಿಲಬಿಡಬಹುದು, ಅವನು ಏನೇ ಮಾಡಲಿ, ನೀವು ಧೈರ್ಯವಾಗಿ ನಿಮ್ಮಷ್ಟಕ್ಕೆ ಇರಬಹುದು, ಏಕೆಂದರೆ ದಾರವನ್ನು ಅವನು ಹಿಡಿದಿದ್ದಾನೆ. ಆ ಶ್ರದ್ಧೆಯು ನಿರಂತರವಾಗಿರುತ್ತಾ ಅದೇ ಭಾವನೆಯೇ ಒಂದು ಸಂಸ್ಕಾರವಾಗಿ ಹರಳುಗಟ್ಟಿದಾಗ ನಿಮ್ಮಲ್ಲಿ ಪ್ರೇಮರಸವು ತುಂಬುತ್ತದೆ.

ಪ್ರೇಮ ಮತ್ತು ದಯೆಯೇ ದಾರ. ಗಾಳಿಪಟ ಅಥವಾ ಜೀವಿಯು ಹೀಗೆ ಈಶ್ವರನೊಂದಿಗೆ ಬಂಧಿತನಾಗಿದ್ದಾನೆ. ಆ ಪ್ರೇಮ ಮತ್ತು ಕರುಣೆಗಳ ಬಂಧನವು ಉಳಿಯುವಂತೆ, ಇನ್ನೂ ಬಿಗಿಯಾಗುವಂತೆ ಪವಿತ್ರ ಸಂಸ್ಕಾರಗಳನ್ನು ಗಳಿಸಿಕೊಳ್ಳ ಬೇಕು.

ಸಂಸ್ಕಾರಗಳು ಜೀವಿಯನ್ನು ರೂಪಿಸುತ್ತವೆ ಅಥವಾ ಹಾಳು ಮಾಡುತ್ತವೆ; ಅವು ಸಕಲ ಜೀವಿಗಳನ್ನೂ ಗುರಿಯ ಕಡೆಗೆ ಒಯ್ಯುವ ಹೆಜ್ಜೆಗಳು. ಜೀವಿಯು ನಷ್ಟ ಮತ್ತು ದುಃಖಗಳನ್ನು ದಾಟಿ ಬರುವಂತೆ ಅವು ಮಾಡುತ್ತವೆ. ಒಳ್ಳೆಯ ಸಂಸ್ಕಾರಗಳ ಮೂಲಕ ಮಾತ್ರವೇ ಮಾನವನು ಭಗವಂತನನ್ನು ಪಡೆಯಬಹುದು. ಆದ್ದರಿಂದ ಪ್ರತಿಯೊಬ್ಬ ಜೀವಿಯೂ ಸತ್ಕರ್ಮಗಳಲ್ಲೇ ಸದಾ ನಿರತನಾಗಿರಬೇಕು. ಸತ್ಕರ್ಮವೇ ಅಧಿಕೃತವಾದ ಪೂಜೆ. ಅದು ಭಗವಂತನನ್ನು ನೆನೆಯುವ ಅತ್ಯುತ್ತಮವಾದ ದಾರಿ. ಅದೇ ಅತ್ಯಂತ ಶ್ರೇಷ್ಠವಾದ ಭಜನೆ. ಅದು ಯಾವುದೇ ವಿವಿಕ್ತೆ ವ್ಯತ್ಯಾಸ ಇಲ್ಲದೆ ಪ್ರೇಮವನ್ನು ಹರಡುತ್ತದೆ, ಜೀವಿಯ ಕರ್ತವ್ಯವೆಂಬಂತೆ ಮಾಡಿದ ಸೇವೆಯೇ ಆ ಪೂಜೆ.

ಅಂತಹ ಕರ್ಮಗಳಲ್ಲಿ ನಿರತರಾಗಿರಿ. ಅವಿಚ್ಛಿನ್ನವಾಗಿ ಭಗವಂತನನ್ನು ಕುರಿತ ಆಲೋಚನೆಯಲ್ಲಿ ನಿರತರಾಗಿರಿ, ನೀವು ತಲುಪಬೇಕಾಗಿರುವ ಗುರಿಯ ಕಡೆಗೆ ಹೋಗಲು ಇದೇ ರಾಜಮಾರ್ಗ.

## ೧೭ ಸನಾತನ ಧರ್ಮವು ಮಾನವತೆಯ ದಿವ್ಯ ಮಾತೆ

ಸನಾತನ ಧರ್ಮವು ಈ ಜಗತ್ತಿನ ಸಕಲ ಧರ್ಮಗಳ ಹಾಗೂ ನೀತಿ ಸಂಹಿತೆಗಳ ತಾಯಿ. ಆ ತಾಯಿಯ ಜನ್ಮಭೂಮಿ ಭಾರತ ದೇಶ. ಓಹ್! ಭಾರತೀಯರದು ಎಂಥ ಅದೃಷ್ಟ! ಈ ಭಾರತ ದೇಶವಾದರೂ ಎಷ್ಟು ಭವ್ಯವಾದದ್ದು!

ಈ ಜಗತ್ತು ವಿಶ್ವಪ್ರಭುವಿನ ದೇಹ. ಈ ಭಾರತ ದೇಶವು ಭಗವಂತನ ದೇಹದ ಕಣ್ಣು. ಕಣ್ಣಿಲ್ಲದೆ ದೇಹವು ತನ್ನ ಮೇಲೆ ಪ್ರಭುತ್ವ ಹೊಂದಿರುವುದಿಲ್ಲವಲ್ಲವೆ? ಭಾರತ ದೇಶವು ಎರಡು ಕಣ್ಣುಗಳಿಂದ ಅಲಂಕೃತವಾಗಿದೆ—ವೇದಗಳು ಮತ್ತು ಶಾಸ್ತ್ರಗಳು. ಆದ್ದರಿಂದ ಹೀಗೆ ಹೇಳಬಹುದು: ಭಾರತೀಯರು ಪಡೆದುಕೊಂಡಿರುವ ಸಂಸ್ಕಾರವನ್ನು ಜಗತ್ತಿನ ಬೇರೆ ಯಾವುದೇ ಭಾಗದ ಜನರು ಪಡೆದಿಲ್ಲ. ಸಕಲ ಧರ್ಮಗಳ ಸತ್ಯವನ್ನೂ ಸಕಲ ಧರ್ಮಗಳ ಸಹಿಷ್ಣುತೆಯನ್ನೂ ಬೋಧಿಸುವ ಸನಾತನ ಧರ್ಮವೇ ಮಾನವ ಜನಾಂಗದ ನಿಜವಾದ ಧರ್ಮ. ಬೇರೆ ಬೇರೆ ಪ್ರದೇಶಗಳಲ್ಲಿ ಹುಟ್ಟಿ, ವಿವಿಧ ಪಥಗಳಲ್ಲಿ ಹರಿದು ನದಿಗಳು ಕೊನೆಗೆ ಸಾಗರವನ್ನು ಸೇರುತ್ತವೆ. ಹಾಗೆಯೇ ಬೇರೆ ಬೇರೆ ದೇಶಗಳಲ್ಲಿ ಹುಟ್ಟಿ ವಿಭಿನ್ನ ಧರ್ಮ ಪಂಥಗಳನ್ನು ಅನುಸರಿಸುತ್ತಾ ಜನರು ಬೇರೆ ಬೇರೆ ಆರಾಧನ ವಿಧಾನಗಳ ಮೂಲಕವಾಗಿ ಭಗವಂತನ ಸನ್ನಿಧಿಯೆಂಬ ಮಹಾಸಾಗರವನ್ನು ಸೇರುತ್ತಾರೆ. ಬೇರೆ ಬೇರೆ ದಿಕ್ಕುಗಳಲ್ಲಿ ಚಲಿಸುವ ಈ ಎಲ್ಲಾ ಪಥಗಳು ಒಂದುಗೂಡುವ ಕೇಂದ್ರ ಬಿಂದು ಸನಾತನ ಧರ್ಮ. ಬೇರೆ ಬೇರೆ ಧರ್ಮಗಳನ್ನನುಸರಿಸುವವರು, ಮಾತಿನಲ್ಲಿ ಸತ್ಯವಂತರಾಗಿರುವುದರ ಮೂಲಕ, ಅಸೂಯೆ, ಕ್ರೋಧಗಳನ್ನು ತೊರೆಯುವುದರ ಮೂಲಕ, ಸದಾ ಪ್ರೇಮಯುತ ಹೃದಯದಿಂದ ಕಾರ್ಯನಿರತರಾಗುವುದರ ಮೂಲಕ ಈ ಸನಾತನ ಧರ್ಮವನ್ನು ಆಚರಿಸಬಹುದು. ಹಾಗೆ ಸನಾತನ ಧರ್ಮವನ್ನು ಆಚರಿಸುವ, ಮುಗ್ಗರಿಸದೆ ಅದನ್ನು ಸಾಧಿಸುವವರು ಭಾರತೀಯರೆಂದು ಕರೆಸಿ ಕೊಳ್ಳಲು ಅರ್ಹರು.

ಬಹಳ ಪ್ರಾಚೀನ ಕಾಲದಿಂದಲೂ ಧರ್ಮಗಳಲ್ಲಿ ಅತ್ಯುನ್ನತವಾದ ಸ್ಥಾನವನ್ನು ಗಳಿಸಿಕೊಂಡಿರುವುದು ಶಾಶ್ವತವಾಗಿ ಅದನ್ನು ಉಳಿಸಿಕೊಂಡಿರುವುದು ಹಿಂದೂ ಧರ್ಮವೊಂದೇ. ಇತಿಹಾಸದುದ್ದಕ್ಕೂ ನಾಶವಾಗದೆ ಉಳಿದುಕೊಂಡಿರುವವರು ಹಿಂದೂಗಳು ಮಾತ್ರವೇ. ಈ ಧರ್ಮದಲ್ಲಿ ಬೇರೆಲ್ಲ ಧರ್ಮಗಳಿಗಿಂತ ಮಿಗಿಲಾಗಿ ಜನರು ಪ್ರೇಮ, ಸಮಾನತೆ, ಕೃತಜ್ಞತೆ ತುಂಬಿದ ಬದುಕನ್ನು ನಡೆಸಿಕೊಂಡು ಬಂದಿದ್ದಾರೆ. ಅವರು ತಮ್ಮ ಧರ್ಮವನ್ನು ದಾರ್ಶನಿಕ ತತ್ವಗಳನ್ನು ಕಂಡುಕೊಳ್ಳುವು ದರ ಮೂಲಕ ಹಾಗೂ ವೇದಗಳ ಮೂಲಕ ಗಳಿಸಿಕೊಂಡಿದ್ದಾರೆ. ಅವರು ಅನಾದಿಯೂ ಅನಂತವೂ ಆದ ವೇದಗಳ ಸಾರವನ್ನು ಕಂಠಪೂರ್ತಿಯಾಗಿ

ಕುಡಿದಿದ್ದಾರೆ. ಅಷ್ಟು ಪವಿತ್ರವಾದ ದೇಶವು ಜಗತ್ತಿನ ಪಾಲಿಗೆ ಒಂದು ಆಧ್ಯಾತ್ಮಿಕ ಗಣಿ. ಭೂಗರ್ಭವು ಬೇರೆ ಬೇರೆ ಪ್ರದೇಶದಲ್ಲಿ ವಿಭಿನ್ನ ಲೋಹಗಳ ಸಂಗ್ರಹವಿರುವುದನ್ನು ತೋರಿಸಿದೆ. ಹಾಗೆಯೇ ಭಾರತ ದೇಶದ ಸನಾತನ ಧರ್ಮವೆಂಬ ಗಣಿಯಲ್ಲಿ ಸಕಲ ಶಾಸ್ತ್ರ ತತ್ವಗಳ, ಸಮಸ್ತ ವೇದೋಪನಿಷತ್ತುಗಳ ಸಾರಭೂತ ದೊರಕುತ್ತದೆ.

ಭಾರತೀಯರ ಅದೃಷ್ಟದಿಂದಲೋ ಎನ್ನುವಂತೆ, ಸನಾತನ ಧರ್ಮದ ಗಣಿಯು ರೂಪುಗೊಂಡಂದಿನಿಂದಲೂ ನಾಯಕರು, ಚಿಂತಕರು, ವ್ಯಾಖ್ಯಾನಕಾರರು, ಪ್ರವಾದಿಗಳು ಮತ್ತು ಬೋಧಕರು ಈ ದೇಶದಲ್ಲೇ ಹುಟ್ಟುತ್ತಾ ಬಂದಿದ್ದಾರೆ. ಈ ಭಾರತ ದೇಶದಲ್ಲೇ ಋಷಿಗಳು, ದ್ರಷ್ಟಾರರು, ಕರ್ಮಯೋಗಿಗಳು, ಜ್ಞಾನಿಗಳು, ಮುಕ್ತಾತ್ಮರು, ಈ ಧರ್ಮದೊಂದಿಗೆ ಸಂಬಂಧಪಟ್ಟ ಮಹಾಪುರುಷರು ಹುಟ್ಟಿದ್ದಾರೆ. ಇವರ ಮೂಲಕವಾಗಿ ಅನುಭವದಿಂದ ಬಲಗೊಂಡ ಆಧ್ಯಾತ್ಮಿಕ ಜ್ಞಾನವು ದೇಶದಾದ್ಯಂತ ಪ್ರವಹಿಸಿದೆ. ಹೀಗೆ ಸಾರಭೂತವಾಗಿ ಸನಾತನ ಧರ್ಮವು ಜಗತ್ತಿನಾದ್ಯಂತ ಮುನ್ನಡೆದಿದೆ. ಆದರೆ ಯಾವುದೇ ದೇಶದಲ್ಲಿ ಅದು ಹರಡಲಿ, 'ಮೂಲ ನೆಲೆ', ತವರು ಮನೆ ಭಾರತವೇ.

ಇಂದು ಜಗತ್ತಿನ ಸ್ಥಿತಿಯನ್ನು ನೋಡಿ. ಯಂತ್ರಗಳು, ಕಾರುಗಳು, ಎಂಜಿನುಗಳು ಒಂದು ದೇಶದಲ್ಲಿ ತಯಾರಾಗಿ ಇತರ ದೇಶಗಳಿಗೆ ರಫ್ತಾಗುತ್ತವೆ. ಆದರೆ ಅವುಗಳ ಮೂಲ ನೆಲೆಯನ್ನು ಮರೆಯಲು, ಅಲಕ್ಷಿಸಲು ಸಾಧ್ಯವಿಲ್ಲ. ಅಂತಹ ಕಾರುಗಳು ಮತ್ತು ಯಂತ್ರಗಳನ್ನು ಅನುಭವದ ಆಧಾರದ ಮೇಲೆ ಉತ್ಪಾದಿಸಲಾಗುತ್ತದೆ. ಆ ಆಧಾರವಿಲ್ಲದೆ ಏನನ್ನೂ ಮಾಡಲು ಸಾಧ್ಯವಿಲ್ಲ. ಹಾಗೆಯೇ ಸನಾತನ ಧರ್ಮವು ಭಾರತ ದೇಶದಲ್ಲಿ ಉದಿಸಿತು. ಮಹಾಪುರುಷರ ಮೂಲಕ, ಅವರು ರಚಿಸಿದ ಉದ್ಗ್ರಂಥಗಳ ಮೂಲಕ ಇತರ ದೇಶಗಳ ಜನರು ಆ ಪ್ರವಾಹದ ನೀರಿನ ಪ್ರಯೋಜನವನ್ನು ಪಡೆದುಕೊಂಡರು. ಆದ್ದರಿಂದ ಮೂಲ ನೆಲೆಯ ಆಧಾರವನ್ನು ಅಲಕ್ಷಿಸಲಾಗದು. ಅದು ಸಾಧ್ಯವೇ ಇಲ್ಲ. ಆದರೆ ಈ ಭಾರತ ದೇಶದಲ್ಲಿ, ಈ ಪವಿತ್ರ ಧರ್ಮವನ್ನು ಪಾಲಿಸಿ ಪೋಷಿಸಿದ ಮಹಾತ್ಮರ ಜನ್ಮಭೂಮಿಯಲ್ಲಿ ಯಾವ ಯಾವುದೋ ಹೊಸ ಜೀವನ ವಿಧಾನಗಳನ್ನು ಧರ್ಮವೆಂದು ಹೇಳಿಕೊಳ್ಳುತ್ತಿದ್ದಾರೆ. ಧರ್ಮದ ಸಿಹಿಯನ್ನು ಎಂದೂ ಸವಿಯದವರು, ಅದರ ಅರ್ಥವನ್ನು ಗ್ರಹಿಸದವರು, ಪೊಳ್ಳು ವಾದವಿವಾದಗಳಿಂದ ಅದನ್ನು ಅಡಗಿಸಿದವರು ಸನಾತನ ಧರ್ಮವನ್ನು ಒತ್ತಟ್ಟಿಗೆ ನೂಕಿದ್ದಾರೆ, ಇತರ ದೇಶಗಳಿಗೆ ಕೊಟ್ಟುಬಿಟ್ಟಿದ್ದಾರೆ. ಇದು ತುಂಬ ವಿಷಾದದ ಸಂಗತಿಯಾಗಿದೆ. ಇದಕ್ಕೆ ಕಾರಣ ಅವರಿಗೆ ಸರಿಯಾದ ದಾರಿಯನ್ನು ತೋರಿಸಬಲ್ಲ ಮಾರ್ಗದರ್ಶಿಗಳ ಕೊರತೆ. ಆದರೆ ಅಂತಹ ಮಾರ್ಗದರ್ಶಿಗಳಿರುವಾಗಲೂ ಜನರು ಈ ಆಧುನಿಕ ವಿಧಾನಗಳಿಗೆ ಬಲಿಬಿದ್ದು, ಅವುಗಳಿಂದ ಮೋಹಿತರಾಗುತ್ತಾರೆ. ಇವು ಸಂತೆ ಬೀದಿಯಲ್ಲಿ ಮಾರುವ ಪಕೋಡಗಳ ಹಾಗೆ ತಮ್ಮ ಪರಿಮಳದಿಂದ ಅವು ಆಕರ್ಷಿಸುತ್ತವೆ. ವಿವೇಚನೆಯಿಲ್ಲದ ಜನರು ಅವು

ಗಳನ್ನು ಕೊಳ್ಳುತ್ತಾರೆ. ಅವರ ಸ್ವಧರ್ಮವು ಪರಿಶುದ್ಧ ಸನಾತನ ಧರ್ಮವಾಗಿದ್ದರೂ ಹೊರಗಿನ ಆಡಂಬರದ ಥಳುಕು ಬೆಳಕಿನ ಪ್ರದರ್ಶನ ಅದರಲ್ಲಿ ಇಲ್ಲವಾದ್ದರಿಂದ ಅದನ್ನು ಅಲಕ್ಷಿಸುತ್ತಾರೆ. ಸತ್ಯಕ್ಕೆ ಅಂತಹ ಆಡಂಬರ ಅಲಂಕಾರಗಳ ಆವಶ್ಯಕತೆ ಇಲ್ಲ. ಅಲ್ಲಿ ಮುಖ್ಯವಾದದ್ದು ರುಚಿ. ಈ ಪರಿಸ್ಥಿತಿಗೆ ಮೂಲ ಕಾರಣ ಇಂದು ಜನರು ಮನಸ್ಸಿಗೆ ಬಂದಂತೆ ವರ್ತಿಸುವುದರಲ್ಲಿ ಆಸಕ್ತರಾಗಿರುವುದು. ಸತ್ಯವನ್ನು ತಿರಸ್ಕರಿಸಿ ಬೇರೊಬ್ಬರ ಧರ್ಮವನ್ನು ಒಪ್ಪಿಕೊಳ್ಳುವುದು ಇಂದಿನ ಅಭ್ಯಾಸವಾಗಿ ಹೋಗಿದೆ. ಇದೇ ಬಹು ದೊಡ್ಡ ತಪ್ಪು. ಭಾರತೀಯರು ಬಾಹ್ಯ ಆಕರ್ಷಣೆಗಳಿಂದಲೂ ಆಡಂಬರಗಳಿಂದಲೂ ಆಕರ್ಷಿತರಾಗುವುದು ಧರ್ಮವಿರುದ್ಧವಾಗುತ್ತದೆ. ಸನಾತನ ಧರ್ಮದಲ್ಲಿರುವುದಕ್ಕಿಂತ ಮಿಗಿಲಾಗಿ, ಅದಕ್ಕಿಂತ ಅಧಿಕವಾಗಿ ಪ್ರೇಮವನ್ನೂ ಸತ್ಯವನ್ನೂ ಬೇರೆ ಯಾವ ಧರ್ಮವೂ ಇದುವರೆಗೆ ಹೊಂದಿಲ್ಲ, ಮುಂದೆ ಹೊಂದಿರುವುದೂ ಇಲ್ಲ. ಅದು ಸತ್ಯದ ಮೂರ್ತರೂಪವೇ ಆಗಿದೆ. ಅದು ಎಲ್ಲರಿಗೂ ಸೇರಿದ ಪರಂಪರಾಗತ ಆಸ್ತಿ. ಪವಿತ್ರತೆಗೆ ಮಿತಿಯುಂಟೆ? ಪವಿತ್ರತೆ ಎನ್ನುವುದು ಒಂದೇ; ಅದಕ್ಕೆ ಎರಡಿಲ್ಲ.

ಈ ಸನಾತನ ಧರ್ಮಕ್ಕೆ ಬದ್ಧರಾಗಿ ಮೋಕ್ಷವನ್ನು ಪಡೆದವರು, ಭಗವಂತನ ಕೃಪೆಯನ್ನು ಸಂಪಾದಿಸಿದರು, ಸತ್ಯದ ಸ್ವರೂಪವನ್ನು ಅರಿತವರು, ಸಾಕ್ಷಾತ್ಕಾರವನ್ನು ಸಾಧಿಸಿದವರು ಎಲ್ಲರೂ ಭಾರತೀಯರು. ಆ ಪರಮ ಪವಿತ್ರ ನೆಲೆಯನ್ನು ತಲುಪಿದ ವರೆಲ್ಲರನ್ನೂ, ಜಾತಿ ಮತ ಲಿಂಗ ವಿವಕ್ಷೆಯಿಲ್ಲದೆ ಭಾರತೀಯರು ಕೊಂಡಾಡಿದ್ದಾರೆ. ಆ ನೆಲೆಯ ಪಾವಿತ್ರ್ಯವು ಹೇಗಿರುತ್ತದೆಂದರೆ ಎಲ್ಲ ಮಿತಿಗಳನ್ನೂ ಸೀಮಿತಗಳನ್ನೂ ಅದು ಸುಟ್ಟು ಬೂದಿ ಮಾಡುತ್ತದೆ. ಆ ಹಂತವನ್ನು ಮುಟ್ಟುವವರೆಗೂ ಎಲ್ಲವನ್ನೂ ಸಮಾನವೆಂದು ಪರಿಗಣಿಸುವ ಶಕ್ತಿ ಬರುವುದಿಲ್ಲ. ಆದ್ದರಿಂದ ಸನಾತನ ಧರ್ಮವನ್ನು ಅರಿಯುವ ಮಾರ್ಗದಲ್ಲಿ ಧೈರ್ಯವಾಗಿ ಮುನ್ನುಗ್ಗಬೇಕು. ಅದು ಭಾರತೀಯರೆಲ್ಲರ ಜನ್ಮಸಿದ್ಧ ಹಕ್ಕು.

ಇತಿಹಾಸವನ್ನು ನಾವು ಆದಿಕಾಲದಿಂದಲೂ ಪರೀಕ್ಷಿಸಿ ನೋಡಿದರೆ, ಹಿಂದೂಗಳ ಯಾವ ವರ್ಗಗಳಲ್ಲಿ ಎಂತೆಂತಹ ಮಹಾ ಪುರುಷರು ಉದಿಸಿ ಬಂದರು ಎನ್ನುವುದು ತಿಳಿಯುತ್ತದೆ. ರಾಮ, ಕೃಷ್ಣ, ಬಲರಾಮ ಮೊದಲಾದ ಅವತಾರಗಳು, ದಿವ್ಯ ಪುರುಷರು, ಜನಕ, ಪರೀಕ್ಷಿತ ಮೊದಲಾದ ಜೀವನ್ಮುಕ್ತರು, ವಿಶ್ವಾಮಿತ್ರರಂತಹ ರಾಜಯೋಗಿಗಳು ಕ್ಷತ್ರಿಯ ವರ್ಗದಿಂದ ಬಂದವರು. ಬ್ರಹ್ಮರ್ಷಿಗಳು, ಪ್ರಕಾಂಡ ಪಂಡಿತರು, ಶಾಸ್ತ್ರವಿದರು, ವೇದ ಋಷಿಗಳು, ಮೊದಲಾದವರು ಬ್ರಾಹ್ಮಣ ವರ್ಗದಿಂದ ಬಂದರು. ಭಾರತ ಭಾಗವತ ಮೊದಲಾದ ಇತಿಹಾಸ ಕಾವ್ಯಗಳಲ್ಲಿ ಶೂದ್ರರು ಪ್ರಮುಖ ಸ್ಥಾನವನ್ನು ಪಡೆಯುತ್ತಾರೆ. ಭಗವಂತನ ಮಹಾಭಕ್ತರಲ್ಲಿ ಸಮಾಜದ ಕೆಳವರ್ಗಗಳಿಗೆ ಸೇರಿದವರೇ ಹೆಚ್ಚು ಸಂಖ್ಯೆಯವರು. ಪ್ರಪಂಚದಿಂದ ಬಾಧಿತನಾಗದೆ ಪರಮಾತ್ಮನನ್ನು ತಲುಪಲು, ವ್ಯಕ್ತಿಯ ಸಾಧನೆಯು ಮುಖ್ಯವಾಗು

ತ್ತದೆ; ಜಾತಿ ಮೊದಲಾದ ಇತರ ಅಂಶಗಳು ಅಡ್ಡಿಯಾಗುವುದೇ ಇಲ್ಲ. ಆದರೆ ಅದಕ್ಕೆ ಅಗತ್ಯವಾದ ದೈವ ಕೃಪೆಗೆ ಅರ್ಹತೆ ಬರಬೇಕು, ಅವನು ಕ್ರಮಬದ್ಧವಾಗಿ ಸಾಧನೆ ಮಾಡಬೇಕು.

ಅನೇಕ ಭಾರತೀಯರು ಮೇಲೆ ಹೇಳಿದ ಮಹಾವ್ಯಕ್ತಿಗಳ ಜೀವನ ತತ್ವಗಳನ್ನು ಅಲಕ್ಷಿಸುವುದರ ಮೂಲಕ ಹಿಂದೂಧರ್ಮಕ್ಕೆ ಕೊನೆಯಿಲ್ಲದ ಕಳಂಕವನ್ನು ತರುತ್ತಿದ್ದಾರೆ. ಆ ಮಹಾಪುರುಷರು ಹೇಳಿರುವುದನ್ನು ಅವರು ಓದುವುದಿಲ್ಲ, ಆಚರಿಸುವುದಿಲ್ಲ. ಬದಲಾದ ಕಾಲಕ್ಕೆ ತಕ್ಕಂತೆ ತಮ್ಮ ಜೀವನದ ವಿಧಾನವನ್ನೂ ಬದಲಾಯಿಸಿಕೊಂಡುಬಿಡುತ್ತಾರೆ. ಅವರು 'ವಿನಾಶಕಾಲೇ ವಿಪರೀತ ಬುದ್ಧಿಃ' ಎನ್ನುವ ಹಾಗೆ. ಹೆಸರಿಗೆ ಕೀರ್ತಿಗೆ ದಾಸರಾಗಿ ಅಧಿಕಾರ ಅಂತಸ್ತುಗಳಿಗೆ ಹಂಬಲಿಸುತ್ತಾ ಸ್ವಾರ್ಥಪೂರಿತ ವಿಧಾನಗಳಿಂದ ತಮ್ಮ ಹೆಂಡತಿ ಮಕ್ಕಳ ಸುಖಕ್ಕಾಗಿ ಕಾಳಜಿ ವಹಿಸುತ್ತಾರೆ. ಆದರೂ ಎಲ್ಲರನ್ನೂ ಸಮಾನವಾಗಿ ಪರಿಗಣಿಸುವಂತಹ, ಸ್ವಾರ್ಥರಹಿತರಾದಂಥ, ಸಕಲರ ಕಲ್ಯಾಣಕ್ಕಾಗಿ ಶ್ರಮಿಸುವ, ಮಾನವ ಸೇವೆಗಾಗಿ ತಮ್ಮನ್ನು ಮುಡುಪಾಗಿಟ್ಟುಕೊಂಡ, ಸಮಸ್ತವನ್ನೂ ತ್ಯಾಗಮಾಡಲು ಸಿದ್ಧರಾಗಿರುವ ಜನರಿಗೆ ಕೊರತೆಯಿಲ್ಲ. ಅಂಥವರಿದ್ದಾರೆ, ಆದರೆ ಅವರನ್ನು ಅಡಗಿಸಲಾಗಿದೆ. ದುರ್ಜನರಿಗೆ, ವಂಚಕರಿಗೆ, ಅನ್ಯಾಯಕಾರರಿಗೆ ಎಡೆಯಿರುವುದಿಲ್ಲವಲ್ಲ ಎಂಬ ಭೀತಿಯಿಂದ ಅಂಥವರಿಗೆ ಉನ್ನತ ಸ್ಥಾನಮಾನ, ಅಧಿಕಾರ ಕೊಡದೆ ತಿರಸ್ಕರಿಸಲಾಗಿದೆ.

ಸಾಗರವು ಎಷ್ಟೇ ಆಳವಾಗಿರಬಹುದು, ಅಗಲವಾಗಿರಬಹುದು, ಆದರೆ ತಳದಲ್ಲಿ ಭೂಮಿಯು ಕಂಪಿಸಿದರೆ ನೀರು ಅಲ್ಲೋಲಕಲ್ಲೋಲವಾಗಿ ಇಬ್ಭಾಗವಾಗುತ್ತದೆ, ಆಮೇಲೆ ಕ್ಷೋಭೆಯು ಶಾಂತವಾದಾಗ ಮತ್ತೆ ಮೊದಲಿನಂತಾಗುತ್ತದೆ. ಹಾಗೆಯೇ ಅನ್ಯಾಯ, ಅಧರ್ಮ, ಸ್ವಾರ್ಥ, ಅಹಂಕಾರಗಳ ಭೂಕಂಪದ ಸಮಯದಲ್ಲಿ ಈ ಸಜ್ಜನರು ಅದಕ್ಕೆ ಸಿಕ್ಕಿಕೊಳ್ಳದೆ ದೂರವಾಗಿರುತ್ತಾರೆ; ಆ ವಿಕ್ಷೋಭೆಯೆಲ್ಲ ತಣ್ಣಗಾದ ಮೇಲೆ ಮತ್ತೆ ಜಗತ್ತನ್ನು ಪ್ರವೇಶಿಸುತ್ತಾರೆ. ನಶ್ವರ ಅಧಿಕಾರವಾಗಲಿ, ಆತ್ಮಪ್ರಶಂಸೆಯಾಗಲಿ ಶಾಶ್ವತವಾಗಿರಲು ಸಾಧ್ಯವಿಲ್ಲ. ಬೆಳೆಯುವುದು ಕೇವಲ ಕ್ಷಯಿಸುವುದಕ್ಕೇ ಎಂಬ ಸೂಕ್ತಿಯಿದೆ. ಪ್ರಸ್ತುತ ಕಾಣುತ್ತಿರುವ ಅಶಾಂತಿಯು ಕ್ಷಯವೇ ಹೊರತು ಬೆಳವಣಿಗೆಯಲ್ಲ. ಏಕೆಂದರೆ ಭಾರತೀಯರು ಹೇಗೆ ಮೊದಲಿನಿಂದಲೂ ಪರಿಶುದ್ಧ ಭಾವನೆಗಳಿಂದಲೂ ಆತ್ಮಸಂಯಮ, ಒಳ್ಳೆಯ ಹೆಸರಿಗೆ ಗೌರವಗಳಿಂದ ಬೆಳೆದು ಬಂದರು ಎಂಬುದನ್ನು ನೋಡಿ! ಅವರು ವೇದ, ಶಾಸ್ತ್ರ, ಉಪನಿಷತ್ತುಗಳ ಮೊಲೆ ಹಾಲು ಕುಡಿದರು. ತಮ್ಮ ದೇಶದಿಂದ ಹೊರನೂಕಲ್ಪಟ್ಟ ಜನಾಂಗಗಳನ್ನೂ ಸ್ವಾಗತಿಸಿ, ಗೌರವಿಸಿ, ಸಮಾನ ಪ್ರಮಾಣದ ಪ್ರೇಮವನ್ನು ಅವರಿಗೆ ಹಂಚಿದರು. ಆದರೆ ಇಂದು ಇದೇ ಭಾರತೀಯರು ಅಧಿಕಾರಕ್ಕಾಗಿ, ಸ್ವಾರ್ಥಕ್ಕಾಗಿ ತಮ್ಮ ಸೋದರರನ್ನೇ ನಿಂದಿಸುತ್ತಾರೆ. ಒಬ್ಬ ವ್ಯಕ್ತಿಯು ಇನ್ನೊಬ್ಬನ ಅಭ್ಯುದಯವನ್ನು ನೋಡಿ ಅಸಹನೆಯಿಂದ ಅಸೂಯೆಪಡುತ್ತಾನೆ.

ಸ್ವಾರ್ಥ ಲೋಭಗಳ ಹುಚ್ಚು ಹಿಡಿದು ತಮ್ಮ ಸೋದರರನ್ನೇ ವಂಚಿಸುತ್ತಾರೆ, ತಮ್ಮ ನಿಜವಾದ ಹಿತಚಿಂತಕರನ್ನು ದೂರಕ್ಕೆ ನೂಕುತ್ತಾರೆ. ಪ್ರತಿಯೊಬ್ಬನೂ ತನ್ನ ಸ್ವಾರ್ಥವನ್ನು ಪೂರೈಸಿಕೊಳ್ಳಲು ಶ್ರಮಿಸುತ್ತಾನೆ. ಇದುವರೆಗೆ ಹಿಂದೂ ಜನಾಂಗದಲ್ಲಿ ಕೇಳರಿಯದ ದುರ್ಗುಣಗಳನ್ನು ಇಮ್ಮಡಿ ಮುಮ್ಮಡಿ ಬೆಳೆಸಿಕೊಳ್ಳುತ್ತಿದ್ದಾನೆ. ದುಷ್ಟ ಮಾರ್ಗಗಳನ್ನು, ಜೀವನ ವಿಧಾನಗಳನ್ನು ಹಿಡಿದು ಸಂಘರ್ಷ ಹಾಗೂ ಚಡಪಡಿಕೆಗಳಿಗೆ ಗುರಿಯಾಗುತ್ತಿದ್ದಾನೆ. ಪಾಪ ಭೀತಿ, ದೈವ ಭೀತಿಗಳಿಲ್ಲದೆ, ಸಂಯಮ, ಗೌರವ, ಶ್ರದ್ಧೆಗಳಿಲ್ಲದೆ ಹಾಳಾಗುತ್ತಿದ್ದಾನೆ. ಈ ಅವನತಿ ನಿಜವಾಗಿ ಆಶ್ಚರ್ಯಕರವಾಗಿದೆ.

ಹಿಂದೂ ಸೋದರರೆ! ಭಾರತದ ಮಕ್ಕಳೆ! ಸನಾತನ ಮಾರ್ಗವನ್ನು ಕ್ರಮಿಸುವವರೆ! ಹಿಂದಿನ ದಿನಗಳ ಮಾನವಿಯ ಗುಣಗಳು ಎಲ್ಲಿ ಹೋದುವು? ಸತ್ಯ, ಸಹಿಷ್ಣುತೆ, ನೈತಿಕತೆ, ಸಂಯಮ ಇವುಗಳನ್ನು ನೀವು ಸ್ವೀಕರಿಸುವುದು ಯಾವಾಗ? ಏಳಿ, ಎಚ್ಚರಗೊಳ್ಳಿ. ಸತ್ಯ ಧರ್ಮ ಶಾಂತಿಗಳೆಂಬ ಭವ್ಯ ಸೌಧಗಳಿಂದ ಶೋಭಿಸುವ ರಾಮರಾಜ್ಯವನ್ನು ಮತ್ತೆ ಸ್ಥಾಪಿಸಿರಿ. ನಿಮ್ಮ ಭಾರತೀಯ ಸಹೋದರರನ್ನು ಪ್ರೀತಿಸಿ. ಸನಾತನ ಧರ್ಮವನ್ನು ಪಾಲಿಸಿ. ಅಜ್ಞಾನ, ಅಶಾಂತಿ, ಅನ್ಯಾಯ, ಅಸೂಯೆಗಳ ಬೆಂಕಿಯ ಜ್ವಾಲೆಗಳನ್ನು ಪ್ರೇಮ, ಸಹಿಷ್ಣುತೆ ಮತ್ತು ಸತ್ಯಗಳೆಂಬ ನೀರಿನಿಂದ ಆರಿಸಿ. ಪಾರಸ್ಪರ್ಯದ ಭಾವನೆಯನ್ನು ಬಲಗೊಳಿಸಿ. ಎಲ್ಲಾ ಬಗೆಯ ಅಸೂಯೆಯನ್ನೂ ಕ್ರೋಧವನ್ನೂ ತೊಡೆದು ಹಾಕಿ. ಪವಿತ್ರಾತ್ಮರಾಗಿದ್ದ ವ್ಯಕ್ತಿಗಳ ಆಳಿಕೆಯನ್ನೂ ಅತ್ಯಂತ ಸಮರ್ಥರಾಗಿದ್ದವರ ಒಳ್ಳೆಯ ಗುಣಗಳನ್ನೂ ಭಗವಂತನ ಆಡಳಿತವನ್ನು ನೆನಪಿಗೆ ತಂದುಕೊಳ್ಳಿ. ಪ್ರತಿಯೊಬ್ಬನೂ ತನ್ನ ದೋಷವನ್ನು ಅರ್ಥಮಾಡಿಕೊಳ್ಳಬೇಕು, ಇತರರಲ್ಲಿ ದೋಷಗಳನ್ನು ಹುಡುಕುವುದರಿಂದ ಏನೂ ಪ್ರಯೋಜನವಿಲ್ಲವೆಂದು ತಿಳಿದುಕೊಳ್ಳಬೇಕು. ಹಾಗೆ ಬೆದಕುತ್ತಾ ಹೋಗುವುದು ಕೇವಲ ಸಮಯದ ಹಾಳು; ಅಲ್ಲದೆ ಅದು ಕಲಹಗಳಿಗೆ ಕಾರಣವಾಗುತ್ತದೆ. ಆದ್ದರಿಂದ ಆ ವರ್ತನೆಯನ್ನು ಬಿಟ್ಟುಬಿಡಿ. ಈ ಅವಕಾಶವನ್ನು ತಪ್ಪಿಸಿಕೊಂಡರೆ ಮತ್ತೇನನ್ನು ಮಾಡಲಾದೀತು? ವಿಷಣ್ಣತೆಗೆ ಬಲಿಯಾಗಬೇಡಿ, ಹಿಂದಿನ ಅಧಾರ್ಮಿಕತೆಗಳಿಗೆಲ್ಲ ಮುಕ್ತಾಯ ಹೇಳಿ. ಪ್ರಾಮಾಣಿಕವಾಗಿ ಪಶ್ಚಾತ್ತಾಪಪಟ್ಟು ಭಗವತ್ ಪ್ರಾರ್ಥನೆ, ಸತ್ಕಾರ್ಯಗಳು ಮತ್ತು ಸೋದರ ಪ್ರೇಮಗಳ ದಾರಿಯಲ್ಲಿ ನಡೆಯಿರಿ. ಶಾಶ್ವತ ರಾಮರಾಜ್ಯವನ್ನು ಸ್ಥಾಪಿಸಿರಿ.

ಈ ರಾಜ್ಯವನ್ನು ಈಡೇರಿಸುವ ಉದೇಶದಿಂದಲೇ 'ಸನಾತನ ಸಾರಥಿಯನ್ನು' ಪ್ರಾರಂಭ ಮಾಡಲಾಗಿದೆ. ಅದರ ಸೈನ್ಯವು ಈ ಪ್ರಯತ್ನಕ್ಕೆ ಕಾಯಾ ವಾಚಾ ನೆರವಾಗುತ್ತದೆ. ಆ ರಥವನ್ನು ಮುಂದಕ್ಕೆ ಎಳೆಯಿರಿ! ಸೊಂಟ ಕಟ್ಟಿ ಸಿದ್ಧರಾಗಿ. ನಾರಾಯಣ ಶರಣವನ್ನು ತೊಡಗಿ. ಭಾರತೀಯರೆಲ್ಲರೂ ಒಬ್ಬ ತಾಯಿಯ ಮಕ್ಕಳು. ಆ ತಾಯಿಯ ಹೆಸರು ಸನಾತನ ಧರ್ಮ. ತಾಯಿಗೆ ಸಲ್ಲಿಸಬೇಕಾದ ಋಣವನ್ನು ತೀರಿಸಿ. ತಾಯಿಯನ್ನು ಮರೆಯುವವನು ಮಗನೇ ಅಲ್ಲ. ತಾಯಿ

ಕೆಟ್ಟವಳು ಎಂದು ಹೇಳುವವನು ಒಳ್ಳೆಯವನಾಗಿರುವುದಿಲ್ಲ. ಆಕೆಯ ಸ್ತನ್ಯವೇ ನಮ್ಮ ಜೀವದ ಉಸಿರು. ಪರಮಾತ್ಮನೇ ಈ ಜನ್ಮವನ್ನಿತ್ತವನು, ಎಲ್ಲರ ತಂದೆ.

ಎಲ್ಲರೂ ಅದೇ ತಂದೆ ತಾಯಿಯರ ಮಕ್ಕಳು. ಆದ್ದರಿಂದ ಒಬ್ಬರನ್ನೊಬ್ಬರು ನಿಂದಿಸುತ್ತಾ ಆಪಾದನೆ ಹೊರಿಸುತ್ತಾ ಕಾಲ ಕಳೆಯದೆ, ತಮ್ಮ ಬಂಧುಬಾಂಧವರಿಗೆ ಕೆಡುಕನ್ನು ಎಣಿಸದೆ, ನೀವು ಬಯಸುವ ವಸ್ತುಗಳ ಬಗೆಗೆ ನೀವು ಎಷ್ಟೇ ಪ್ರೀತಿಯನ್ನಿಟ್ಟುಕೊಂಡಿರುವಿರೋ ನಿಮ್ಮ ಇತರ ಸೋದರರೂ ತಾವು ಬಯಸುವ ವಸ್ತುಗಳ ಬಗೆಗೆ ಅಷ್ಟೇ ಪ್ರೀತಿಯನ್ನಿಟ್ಟು ಕೊಂಡಿರುತ್ತಾರೆ, ಅಷ್ಟೇ ಮೋಹವನ್ನಿಟ್ಟು ಕೊಂಡಿರುತ್ತಾರೆ ಎಂದು ಅರ್ಥಮಾಡಿಕೊಳ್ಳಿರಿ. ಬೇರೊಬ್ಬರು ಪ್ರೀತಿಸುವ ವಸ್ತು ವಿನಲ್ಲಿ ನೀವು ತಪ್ಪು ಹುಡುಕಬೇಡಿ ಅಥವಾ ಅದನ್ನು ಅಪಹಾಸ್ಯ ಮಾಡಬೇಡಿ. ಅದಕ್ಕೆ ಬದಲು ಅದನ್ನು ಪ್ರೀತಿಸಲು ಪ್ರಯತ್ನಿಸಿ. ಇದೇ ಭಾರತೀಯರ ಸತ್ಯ ಮತ್ತು ಪ್ರೇಮಗಳ ಸ್ವರೂಪ.

# ೧೮ ಸರ್ವಾಂತರ್ಯಾಮಿಯು ಒಬ್ಬನು, ಒಬ್ಬನೇ ಒಬ್ಬನು

ವೇದಗಳು, ಶಾಸ್ತ್ರಗಳು, ಋಷಿಗಳು, ಸಂದೇಶಗಳು ಎಲ್ಲವೂ ಒಂದೇ ರೀತಿಯಾಗಿ, ಸಂದೇಹಕ್ಕೆ ಎಡೆಯೇ ಇಲ್ಲದಂತೆ, ಅಂದಿನಿಂದ ಇಂದಿನವರೆಗೂ ಒಂದು ಸತ್ಯವನ್ನು ಘೋಷಿಸಿವೆ. ಪರಮಾತ್ಮನು ಸರ್ವಾಂತರ್ಯಾಮಿ, ಪ್ರತಿಯೊಂದರಲ್ಲೂ ಅವನು ಅಂತರ್ಗತನಾಗಿದ್ದಾನೆ ಎಂಬುದೇ ಆ ಸತ್ಯ. ಹಾಗೆಯೇ ಸೇವೆಗೊಳ್ಳುವವನು ಸೇವೆಗೈಯುವವನು ಮತ್ತು ಸೇವಾಸಾಧನ ಅಂದರೆ ಪ್ರಕೃತಿ ಇವುಗಳ ನಡುವಣ ಸಂಬಂಧವನ್ನು ಕುರಿತ ಪ್ರಶ್ನೆಗಳು ಕೊನೆಯೇ ಇಲ್ಲದಷ್ಟು ಚರ್ಚೆಗೆ ಒಳಪಟ್ಟಿವೆ. ಪ್ರತಿಯೊಬ್ಬ ಆಸ್ತಿಕನೂ ಭಾಗವತದ ಈ ಶ್ಲೋಕವನ್ನು ಕೇಳಿರುತ್ತಾನೆ. ಅದರಲ್ಲಿ ಮಹಾಭಕ್ತ ಪ್ರಹ್ಲಾದನು ತನ್ನ ಅನುಭವವನ್ನು ಹೇಳುತ್ತಾ ಸರ್ವಾಂತರ್ಯಾಮಿ ಯಾದ ಪರಮಾತ್ಮನನ್ನು ಹೊರಗೆ ಎಲ್ಲೆಲ್ಲೋ ಅರಸಬೇಕಾಗಿಲ್ಲ, ಅವನು ಹಾಗೆ ಅರಸುವವನ ಅತಿ ಸಮೀಪದಲ್ಲೇ ಇದ್ದಾನೆ ಎನ್ನುತ್ತಾನೆ.

ಅವನು ಇಲ್ಲಿದ್ದಾನೆ, ಅವನು ಅಲ್ಲಿಲ್ಲ
ಈ ಸಂದೇಹಗಳನ್ನು ಬಿಡು.
ಕೇಳು, ದಾನವನಾಯಕನೆ, ಕೇಳು
ಎಲ್ಲೆಲ್ಲಿ ಹುಡುಕುವೆಯೋ ಎಲ್ಲೆಲ್ಲಿ ನೋಡುವೆಯೋ
ಅಲ್ಲಿ … ಅಲ್ಲೆಲ್ಲ … ಅವನಿದ್ದಾನೆ.

ಭಗವಂತನಿಗೆ ನಿರ್ದಿಷ್ಟ ಸ್ವಭಾವವಿದೆ, ನಿರ್ದಿಷ್ಟ ಸ್ವರೂಪವಿದೆ ಎಂಬ ರೀತಿಯಲ್ಲಿ ಜನರು ಮಾತನಾಡುತ್ತಾರೆ. ಊಹೆ ಕಲ್ಪನೆಗಳು ಸತ್ಯಕ್ಕೆ ಸುಮಾರಾಗಿ ಹತ್ತಿರ ಬರುತ್ತವೆ ಎಂಬಷ್ಟಕ್ಕೆ ಮಾತ್ರ ಸತ್ಯ ಅಷ್ಟೇ ಹೊರತು ಮೂಲಸತ್ಯವಲ್ಲ. ವಾಸ್ತವಿಕ ಪ್ರಾಪಂಚಿಕ ಜ್ಞಾನಕ್ಕೆ ಸಂಬಂಧಿಸಿದಂತೆ ಆ ಬಗೆಯ ಕಲ್ಪನೆಗಳು ಸಿಂಧುವಾಗುತ್ತವೆ, ಆದರೆ ಪರತತ್ವದ ಜ್ಞಾನಕ್ಕೆ ಸಂಬಂಧಿಸಿದಂತೆ ಅವು ಸಿಂಧುವಾಗವು. ಏಕೆಂದರೆ ಪೂರ್ಣವನ್ನು ನೋಡುವುದಾಗಲಿ, ಅದನ್ನು ಕುರಿತು ಮಾತನಾಡುವುದಾಗಲಿ ಸಾಧ್ಯವಿಲ್ಲ.

ಹೀಗಿದ್ದರೂ ಭಕ್ತರು, ಸಾಧಕರು ತಮ್ಮ ಸಾಧನೆಯ ಪ್ರಗತಿಗೆ ತಕ್ಕ ಹಾಗೆ, ತಮ್ಮ ಭಕ್ತಿಯ ಆಧಾರವಾಗಿ ಭಗವಂತನ ಒಂದಲ್ಲ ಒಂದು ರೂಪವನ್ನು ರಚಿಸಿಕೊಳ್ಳುತ್ತಲೇ ಇದ್ದಾರೆ. ಅವರು ಪರಮಾತ್ಮನನ್ನು ಯಾವುದೇ ಅಯೋಧ್ಯೆಯಲ್ಲೋ ದ್ವಾರಕೆಯಲ್ಲೋ ಇರುವುದಾಗಿ ಪೂಜಿಸುತ್ತಾರೆ. ಬೇರೆಲ್ಲೂ ಅವನನ್ನು ಅವರು ಕಾಣರು; ವಿಗ್ರಹವೋ ಚಿತ್ರವೋ ಇರುವ ಕಡೆ ಮಾತ್ರ ದೇವರಿದ್ದಾನೆ, ಮಿಕ್ಕ ಕಡೆಗಳಲ್ಲಿ ಇಲ್ಲ ಎನ್ನುವ ಹಾಗೆ. ಅವರು ಆ ರೂಪವನ್ನೇ ಪೂರ್ಣವೆಂದು ಆರಾಧಿಸುತ್ತಾರೆ. ಸರಿ, ಹಾಗೆ ಮಾಡುವುದು ತಪ್ಪೇನಲ್ಲ; ಆದರೆ ಭಕ್ತರು ತಮ್ಮ ನಂಬಿಕೆ ಮಾತ್ರವೇ ಸತ್ಯ, ತಾವು ಭಗವಂತನಿಗೆ ಕೊಟ್ಟಿರುವ ನಾಮರೂಪಗಳು ಮಾತ್ರವೇ ಸರಿ, ಮಿಕ್ಕ ನಾಮರೂಪಗಳೆಲ್ಲ ಕೆಳಮಟ್ಟದವು, ಬೆಲೆಯಿಲ್ಲದವು ಎಂದು ಸಾರಬಾರದು ಅಷ್ಟೆ. ತಾನು ಕೊಟ್ಟುಕೊಂಡ ಭಗವನ್ನಾಮ ರೂಪಗಳು ತನಗೆ ಎಷ್ಟು ಪ್ರೀತಿ ಪಾತ್ರವೋ ಅಷ್ಟೇ ಮಟ್ಟಿಗೆ ಆ ಇತರರು ಕೊಟ್ಟುಕೊಂಡ ನಾಮರೂಪಗಳು, ಇಟ್ಟುಕೊಂಡ ಆದರ್ಶಗಳು ಅವರಿಗೆ ಪ್ರೀತಿಪಾತ್ರ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

ಒಂದು ರೂಪವನ್ನು ಮೂರ್ತೀಕರಿಸಿದಾಗ ಅದು ವಿಶ್ವಾತ್ಮಕ ತತ್ವದ ಸಂಕೇತವಾಗುತ್ತದೆ. ಆದರೆ ಒಂದು ಸಂಕೇತವು ಎಂದಿಗಾದರೂ ಮೂಲವೇ ಆಗುತ್ತದೆಯೇ? ಇದನ್ನು ಸದಾ ಮನಸ್ಸಿನಲ್ಲಿಟ್ಟುಕೊಂಡು, ವಿವೇಕರಹಿತ ದ್ವೇಷ, ಮಾತ್ಸರ್ಯಗಳಿಗೆ ಎಡೆಗೊಡದೆ ಆ ಆದರ್ಶದ ಸಕಲ ರೂಪಗಳೂ ಸಮಾನವಾಗಿ ಮೌಲ್ಯವುಳ್ಳವು, ಸತ್ಯವಾದವು ಎಂಬ ದೃಷ್ಟಿಯನ್ನು ಬೆಳೆಸಿಕೊಳ್ಳತಕ್ಕದ್ದು. ಈ ದೃಷ್ಟಿಯಿಲ್ಲದೆ ಪೂರ್ಣವನ್ನು ಸಾಕ್ಷಾತ್ಕರಿಸಿಕೊಳ್ಳುವುದು ಸಾಧ್ಯವೇ ಇಲ್ಲ. ಮೂಲವಸ್ತುವಿನ ಈ ಎಲ್ಲಾ ಸ್ಥೂಲರೂಪಗಳೂ ಸೂಕ್ಷ್ಮ ದೈವತತ್ವದಿಂದ ತುಂಬಿ ಪರ್ಯಾಪ್ತವಾಗಿವೆ. ಅಗಾಧವಾದ ಸಾಗರದ ನೀರಿನ ರುಚಿಯನ್ನು ಅದರ ಒಂದೊಂದು ಹನಿ ನೀರಿನಲ್ಲೂ ಸವಿಯಬಹುದು; ಹಾಗೆಂದ ಮಾತ್ರಕ್ಕೆ ಹನಿಯೇ ಸಾಗರ ಎಂದರ್ಥವಾಗುವುದಿಲ್ಲ. ನಾವು ಹನಿಯನ್ನೂ ಸಾಗರವನ್ನೂ ಬೇರೆ ಬೇರೆ ಎಂದು ಗುರುತಿಸಿದರೂ ಎರಡರ ಸ್ವರೂಪವೂ ರುಚಿಯೂ ಒಂದೇ ಸಮನಾಗಿವೆ. ಹಾಗೆ ಸರ್ವಾಂತರ್ಯಾಮಿ

ಪರಮಾತ್ಮನೂ ಅವನು ಧರಿಸುವ ಹಾಗೂ ಸಾಧಕನ ಅರಿವಿಗೆ ನಿಲುಕುವ ಸ್ಥೂಲನಾಮ ರೂಪಗಳೂ ಬೇರೆ ಬೇರೆಯಲ್ಲ, ಸಂವಾದಿಗಳು.

ಸರ್ವವ್ಯಾಪಕವೂ ಸರ್ವಭರಿತವೂ ಆದ ಶುದ್ಧ ತತ್ವವನ್ನು ವರ್ಣಿಸುವಾಗ ವಸ್ತುವೂ ವಿಧಾನವೂ ಮಾತಾಡುವವನು ಇಟ್ಟುಕೊಂಡ ತತ್ವಗಳನ್ನೂ ಕೇಳುವವನ ಅಭಿರುಚಿ ಗಳನ್ನೂ ಅವಲಂಬಿಸುತ್ತವೆ. ಭಕ್ತನು ಆರೋಪಿಸಿದ ನಾಮರೂಪಗಳು ನಿರ್ಗುಣ ಮತ್ತು ನಿರಾಕಾರವಾಗಿ ಪರಿವರ್ತಿತವಾದಾಗ ಅದನ್ನು ಬ್ರಹ್ಮನ್ ಎಂದು ಕರೆಯಲಾ ಗುತ್ತದೆ. ಇದೇ ಬ್ರಹ್ಮವು ಸಗುಣ ಮತ್ತು ಸಾಕಾರವಾದಾಗ ಅದನ್ನು ರಾಮ, ಕೃಷ್ಣ, ವಿಷ್ಣು ಅಥವಾ ಶಿವ ಎಂಬುದಾಗಿ ಹೇಳಲಾಗುತ್ತದೆ. ಭಕ್ತನು ಆಧ್ಯಾತ್ಮಿಕ ಐಕ್ಯವನ್ನು ಪಡೆದಾಗ ಅವನಿಗೂ ಭಗವಂತನಿಗೂ ಇರುವ ವ್ಯತ್ಯಾಸವು ಮಾಯವಾಗುತ್ತದೆ ಎಂದು ಬೇರೆ ಧರ್ಮಗಳ ಅನುಯಾಯಿಗಳೂ ಒಪ್ಪುವುದಿಲ್ಲವೇನು? ಇತರ ದೇಶ ಗಳ ಯೋಗಿಗಳು, ದಾರ್ಶನಿಕರು ಕೂಡ ಈ ವ್ಯತ್ಯಾಸರಹಿತ ದಿವ್ಯಾನುಭವವನ್ನು ಪರಾಭಕ್ತಿಯ ಮೂಲಕ ಪಡೆಯಬಹುದು ಎಂದು ಸಂದೇಹವಿಲ್ಲದೆ ಒಪ್ಪಿಕೊಳ್ಳು ತ್ತಾರೆ. ವ್ಯತ್ಯಾಸದ ಅಲ್ಪ ಸ್ವಲ್ಪ ಕುರುಹು ಉಳಿದರೂ ಅದು ವ್ಯಕ್ತಿಯ ಸ್ವಂತವಾದ ಅಭಿರುಚಿ ಮತ್ತು ಅಪೇಕ್ಷೆ ಅದಕ್ಕೆ ಕಾರಣವೇ ಹೊರತು ನಿರ್ದಿಷ್ಟವಾಗಿ ಮೂಲ ಭೂತವಾದದ್ದು ಏನೂ ಇಲ್ಲ. ನಾಮ ಮತ್ತು ರೂಪ ಬರಬೇಕಾದಾಗ ಬೇರೆ ಬೇರೆಯಾಗಿ ಪ್ರಕೃತಿ, ಪರಮಾತ್ಮ ಮತ್ತು ಭಕ್ತ ಎಂದು ಹೆಸರಿಸಲಾಗುತ್ತದೆ. ನಾಮರೂಪಗಳು ಇಲ್ಲದಾಗ ಅದು ಗಂಡೋ ಹೆಣ್ಣೋ ಅಥವಾ ನಪುಂಸಕವೋ ಮುಂತಾದ ಚರ್ಚೆಗಳಾಗಲಿ ಸಂದೇಹವಾಗಲಿ ಮೂಡುವುದಿಲ್ಲ. ಆಗ ಯಾವುದೇ ವರ್ಣನೆಯು ಅದಕ್ಕೆ ಸರಿಹೊಂದುತ್ತದೆ. ಕಲ್ಪನೆಗೆ ಅತೀತವಾಗಿಯೂ ಆಚೆಗೂ ಇರುವುದಕ್ಕೆ ಯಾವ ನಾಮವನ್ನಾಗಲಿ ರೂಪವನ್ನಾಗಲಿ ಕೊಡಬಹುದು. ವಾಸ್ತವ ವಾಗಿ ಅದಕ್ಕೆ ಯಾವ ಗುಣವಾಗಲಿ ಆಕಾರವಾಗಲಿ ಇಲ್ಲ. ಅದು ಸರ್ವವ್ಯಾಪಿ, ಸರ್ವಸ್ಥಿತಿ. ಈ ಸೂಕ್ಷ್ಮ ಸರ್ವವ್ಯಾಪಕ ತತ್ವವನ್ನು ನಿಯತವಾಗಿ ಒಂದು ಸ್ಥೂಲ ರೂಪದ ಮೂಲಕ, ಗುಣಗಳನ್ನು ಹೊಂದಿರುವಂತೆ ಪೂಜಿಸುತ್ತಾ ಹೋದರೆ ಭಕ್ತನು ಸಾಧನೆಯ ಮೂಲಕವೇ ಅದರ ನಿಜಸ್ವರೂಪವನ್ನು ಸ್ಪಷ್ಟವಾಗಿ ಅರಿತುಕೊಳ್ಳುವನು. ಈ ಸಾಧನೆಯನ್ನು ಹಾಗೂ ಆ ಸತ್ಯವನ್ನು ಪ್ರಮಾಣಿಸುವ ಸಲುವಾಗಿ ಮತ್ತು ಭಕ್ತರಿಗೆ ಆ ಆನಂದವನ್ನು ಅನುಗ್ರಹಿಸುವ ಸಲುವಾಗಿ ನಿರ್ಗುಣ ನಿರಾಕಾರ ಪರಮಾತ್ಮನು ಈ ಜಗತ್ತಿನಲ್ಲಿ ನಾಮರೂಪಗಳನ್ನು ಧರಿಸಿ ಅವತರಿಸುತ್ತಾನೆ. ಸಕಲ ಜೀವಿಗಳಿಗೂ ಖಚಿತವಾದ ಅನುಭವವನ್ನೂ ಸಂತೋಷವನ್ನೂ ಪಡೆಯುವ ಅವಕಾಶವನ್ನು ಒದಗಿಸುತ್ತಾನೆ. ಈ ಅನುಭವಗಳ ಮೂಲಕ ಅವತಾರ ಪುರುಷರು, ಪರಮಾತ್ಮನು ಸರ್ವಾಂತರ್ಯಾಮಿ, ಸರ್ವಭೂತಾಂತರಾತ್ಮ ಎನ್ನುವುದನ್ನು ಅರ್ಥಮಾಡಿಕೊಳ್ಳು ವಂತೆ ಮಾಡುತ್ತಾರೆ. ಭಗವಾನ್ ಕೃಷ್ಣನು ತನ್ನ ದೇಹದಲ್ಲಿ ಸಕಲ ಸೃಷ್ಟಿಯೂ ಇರುವುದನ್ನು ತೋರಿಸಿದನು. ಅರ್ಜುನನಂಥವನೂ ಕೂಡ ತಾನೇ ಕಣ್ಣಾರ ಕೃಷ್ಣನ

ದೇಹದಲ್ಲಿ ಸಕಲ ಸೃಷ್ಟಿಯೂ ಅಂತರ್ಗತವಾಗಿರುವುದನ್ನು ನೋಡುವವರೆಗೆ ಅವನು ಸರ್ವಾಂತರ್ಯಾಮಿ ಎಂಬುದನ್ನು ಅರ್ಥಮಾಡಿಕೊಳ್ಳಲಾರದಾದನು.

ಪ್ರೇಮ, ಪ್ರೇಮಿಸುವವನು, ಪ್ರೇಮಿಸಲ್ಪಡುವವನು ಎಲ್ಲರೂ ಒಂದೇ. ಪ್ರೇಮವಿಲ್ಲದೆ ಪ್ರೇಮಿಯಿರಲು ಸಾಧ್ಯವಿಲ್ಲ. ಪ್ರೇಮ ಮತ್ತು ಪ್ರೇಮಿ ಇದ್ದರೂ ಪ್ರೇಮಕ್ಕೆ ಪಾತ್ರನಾಗಬೇಕಾದವನು, ಪ್ರೇಮಿಸಲ್ಪಡುವವನು ಇಲ್ಲದೆ ಹೋದರೆ ಪ್ರೇಮಕ್ಕೆ ಕೆಲಸವೇ ಇಲ್ಲ. ಈ ಮೂರರಲ್ಲೂ ಪ್ರೇಮವೇ ಅತಿ ಮುಖ್ಯವಾದ ಅಂಶ. ಮುಖ್ಯವಾಗಿ ತುಂಬಿಕೊಂಡಿರುವುದು ಎಲ್ಲ ವಸ್ತುಗಳಲ್ಲೂ ಸಮಾನವಾಗಿ ವ್ಯಾಪಿಸಿರುವುದೇ ಪರಮಾತ್ಮ. ಆದ್ದರಿಂದ ಈ ಮೂರರ ನಡುವೆ ಭೇದವಿಲ್ಲ, ಮೂರರಲ್ಲೂ ಪ್ರೇಮವು ಸರ್ವಾಂತರ್ಯಾಮಿಯಾಗಿರುವುದನ್ನು ನೋಡಬಹುದು. ಆದ್ದರಿಂದ ಎಲ್ಲವೂ ಪರಮಾತ್ಮ ಸ್ವರೂಪವೆಂದು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲವೇನು? ಖಂಡಿತವಾಗಿಯೂ ಅದನ್ನು ಅರಿತುಕೊಳ್ಳಬಹುದು. ಸಮಸ್ತವೂ ಪ್ರೇಮದಿಂದ ತುಂಬಿದೆ. ಆದ್ದರಿಂದ ಯಾವುದೇ ಸಂಕೋಚವಿಲ್ಲದೆ ಪರಮಾತ್ಮನು ಪ್ರೇಮ ಸ್ವರೂಪ ಎಂದು ನಿರ್ಣಯಿಸಬಹುದು. ಸಮಸ್ತ ಸೃಷ್ಟಿಯಲ್ಲಿ ಸಮಸ್ತ ಜೀವಿಗಳಿಗಾಗಿ ಪ್ರೇಮವು ಅಸಂಖ್ಯಾತ ಬಗೆಗಳಲ್ಲಿ ಪ್ರಕಟವಾಗುತ್ತಿದೆ. ವಾತ್ಸಲ್ಯ, ಅನುರಾಗ, ಭಕ್ತಿ, ಇಷ್ಟ ಮೊದಲಾದ, ಅದು ನಿರ್ದೇಶಿತವಾಗುವ ದಿಸೆಯನ್ನನುಸರಿಸಿದ ಹೆಸರುಗಳು ಹಲವಿದ್ದರೂ ಪ್ರೇಮದ ನಿಜ ಸ್ವರೂಪವು ಮಾತ್ರ ಬದಲಾಗುವುದಿಲ್ಲ. ರೂಪ ಯಾವುದೇ ಇದ್ದರೂ ಸಾರವು ವ್ಯತ್ಯಾಸಗೊಳ್ಳುವುದಿಲ್ಲ. ಈ ಅರಿವು ಮತ್ತು ಅನುಭವದ ಆಧಾರದಿಂದ ಒಂದು ನಿರ್ಣಯವು ಸ್ಪಷ್ಟವಾಗುತ್ತದೆ. ಅದು ಪರಮಾತ್ಮನು ಸೃಷ್ಟಿಗೊಂಡ ಸಮಸ್ತ ಜೀವಿಗಳ ಒಳಗಿರುವ ಆತ್ಮವು, ಸರ್ವ ಭೂತಾಂತರಾತ್ಮ ಎನ್ನುವುದು.

ಈ ಐಕ್ಯದ ಅತ್ಯುನ್ನತ ಜ್ಞಾನವನ್ನು ಕೊಡುವುದೇ ಅದ್ವೈತ; ಪ್ರೇಮಿ ಮತ್ತು ಪ್ರೇಮಿತ ವ್ಯಕ್ತಿ, ಜೀವ ಮತ್ತು ಬ್ರಹ್ಮ ಎಂಬ ಎರಡೆರಡು ತತ್ವಗಳನ್ನು ಬೋಧಿಸುವುದು ದ್ವೈತ; ಪ್ರೇಮ, ಪ್ರೇಮಿ ಮತ್ತು ಪ್ರೇಮಿತ ಅಂದರೆ ಪ್ರಕೃತಿ, ಜೀವ ಮತ್ತು ಬ್ರಹ್ಮ ಈ ಮೂರೂ ತತ್ವಗಳನ್ನು ಹೇಳುವುದು ವಿಶಿಷ್ಟಾದ್ವೈತ. ಈ ಮೂರೂ ಒಂದೇಯೆ. ಹುಟ್ಟಿದ ಮಗುವು ಬೆಳೆದು ವಿದ್ಯಾರ್ಥಿಯಾಗುತ್ತದೆ; ವಿದ್ಯಾರ್ಥಿಯು ಗೃಹಸ್ಥನಾಗುತ್ತಾನೆ; ಆದರೆ ಈ ಮೂವರೂ ಒಬ್ಬನೇ ವ್ಯಕ್ತಿಯಲ್ಲವೆ? ನಡವಳಿಕೆಗಳು, ಸಂಬಂಧಗಳು ಹಲವು ಬಗೆಗಳಲ್ಲಿ ಬದಲಾದರೂ ಅವನು ಅದೇ ವ್ಯಕ್ತಿಯಾಗಿ ಉಳಿಯುತ್ತಾನೆ. ಹಾಲಿನಿಂದ ಬೆಣ್ಣೆಯೂ ಮಜ್ಜಿಗೆಯೂ ಮೂಡುತ್ತವೆ. ಅವೆಲ್ಲವನ್ನೂ ಒಳಗೊಂಡಿರುವುದು ಅದ್ವೈತ; ಎರಡು ಅಂಶಗಳನ್ನು ಒಳಗೊಂಡಿರುವ ಬೆಣ್ಣೆಯು ದ್ವೈತ, ಅದನ್ನು ಬೇರ್ಪಡಿಸಿದ ಮೇಲೆ ಉಳಿಯುವ ಮಜ್ಜಿಗೆಯಂಥದು ವಿಶಿಷ್ಟಾದ್ವೈತ. ಆದರೆ, ಅವುಗಳ ರುಚಿಯು ಬೇರೆಬೇರೆಯಾಗಿದ್ದರೂ ಬಣ್ಣ ಮಾತ್ರ ಯಾವಾಗಲೂ ಒಂದೇ. ಹೀಗೆ ಎಲ್ಲವುಗಳಲ್ಲೂ ಸಮಾನವಾಗಿರುವುದೇ ನಿರ್ಗುಣ ಬ್ರಹ್ಮ.

# ೧೯ ಭಕ್ತಿಯ ಬೀಜಗಳು ಮೊಳೆಯುತ್ತವೆ

ಪೂಜಕನ ಮತ್ತು ಪೂಜಿತನ ಮನೋಧರ್ಮವೇ ಭಕ್ತಿಯ ಬೀಜ. ಮೊದಲು ಆರಾಧಕನ ಮನಸ್ಸು ಪೂಜ್ಯವಸ್ತುವಿನ ವಿಶಿಷ್ಟ ಗುಣಗಳಿಂದ ಆಕರ್ಷಿತವಾಗುತ್ತದೆ. ಈ ವಿಶೇಷ ಗುಣಗಳನ್ನು ತಾನೂ ಪಡೆಯಲು ಅವನು ಪ್ರಯತ್ನಿಸುತ್ತಾನೆ. ಇದೇ ಸಾಧನೆ. ಈ ಸಾಧನೆಯ ಪ್ರಾರಂಭಿಕ ಹಂತಗಳಲ್ಲಿ ಆರಾಧಕ ಮತ್ತು ಆರಾಧಿತರ ನಡುವೆ ವ್ಯತ್ಯಾಸ ಪೂರ್ತಿಯಾಗಿರುತ್ತದೆ. ಆದರೆ ಸಾಧನೆಯು ಮುಂದುವರಿದಂತೆ, ಈ ಭಾವನೆಯು ಕಡಮೆಯಾಗಿ, ಸಿದ್ಧಿ ದೊರೆತಾಗ ವ್ಯತ್ಯಾಸವೆನ್ನುವುದೇ ಉಳಿಯುವುದಿಲ್ಲ. ಪೂಜಾ ವಸ್ತುವು ಯಾವುದೇ ಇರಲಿ, ಸಾಧಕನು ಅರಿತು, ಪ್ರೀತಿಸಿ, ಗ್ರಹಿಸಬೇಕಾದರೆ ಜೀವಾತ್ಮವೇ ಪರಮಾತ್ಮ ಎಂಬ ಖಚಿತವಾದ ನಂಬಿಕೆ ಅವನಿಗಿರಬೇಕು. ಸಾಧಕನಿಗೆ ಒಂದೇ ಒಂದು ಅಭೀಪ್ಸೆಯಿರಬೇಕು. ಅದು ಭಗವಂತನ ಅರಿವು, ಈಶ್ವರ ಸಾಕ್ಷಾತ್ಕಾರ. ಮನಸ್ಸಿನಲ್ಲಿ ಬೇರೆ ಯಾವುದೇ ಬಯಕೆಗೆ ಎಡೆಯಿರಬಾರದು. ಆದ್ದರಿಂದಲೇ ಕುಂತೀದೇವಿಯು ಕೃಷ್ಣನನ್ನು ಹೀಗೆ ಪ್ರಾರ್ಥಿಸಿದಳು, "ಜಗದ್ಗುರುವೆ, ಯಾವಾಗಲೂ ನಮಗೆ ಕಷ್ಟಗಳೇ ಇರಲಿ. ಪುನರ್ಜನ್ಮವನ್ನು ನಾಶಪಡಿಸುವ ನಿನ್ನ ದರ್ಶನವೊಂದಿದ್ದರೆ ಸಾಕು."

ಸರ್ವೋನ್ನತ ಪರತತ್ವವನ್ನು ಬಯಸುವ ಭಕ್ತನಿಗೆ ಈ ಮನೋಧರ್ಮವಿರಬೇಕು. ಆಗ ಅವನು ನೋವು ನಲಿವುಗಳ ವಿವಕ್ಷೆಯಿಲ್ಲದೆ, ತನ್ನ ತೃಪ್ತಿಯ ಕಡೆಗೂ ಗಮನವಿಲ್ಲದೆ, ಸಾಧನೆಯಲ್ಲಿ ಪಟ್ಟಾಗಿ, ತೆರಪಿಲ್ಲದೆ, ಪೂರ್ಣವಿಶ್ವಾಸದಿಂದ ತೊಡಗುತ್ತಾನೆ. ಸತ್ಯದ ಸಾಕ್ಷಾತ್ಕಾರವಾದ ನಂತರ ಅವನು ಪೂರ್ಣತೃಪ್ತಿಯನ್ನು ಪಡೆಯುತ್ತಾನೆ.

ಈ ದೃಷ್ಟಿಯಿಂದ ಒಬ್ಬ ಜೀವನ್ಮುಕ್ತನಿಗೂ ಒಬ್ಬ ಭಕ್ತನಿಗೂ ಭೇದವಿಲ್ಲ; ಅವರಿಬ್ಬರೂ ಅಹಂಕಾರ, ಮೂರು ಗುಣಗಳಿಂದ ಕೂಡಿದ ಪ್ರಕೃತಿ ಮತ್ತು ವರ್ಣಾಶ್ರಮಧರ್ಮಗಳಿಗೆ ಅತೀತರಾಗಿರುವವರು. ಅಂಥವರ ಹೃದಯಗಳು ಅನುಕಂಪೆಯಿಂದ ತುಂಬಿರುತ್ತವೆ, ಲೋಕಕ್ಕೆ ಒಳ್ಳೆಯದು ಮಾಡಬೇಕೆಂಬ ಬಯಕೆ ತುಂಬಿರುತ್ತದೆ. ಅವರು ಅನುಭವಿಸುವ ಬ್ರಹ್ಮಾನಂದವೇ ಅವರನ್ನು ಹೀಗೆ ವರ್ತಿಸಲು ಪ್ರಚೋದಿಸುವುದು. ಅಂತಹ ಭಕ್ತನಿಗೆ ಯಾವ ಬಯಕೆಯೂ ಇಲ್ಲ. ಏಕೆಂದರೆ ಬಯಕೆಗಳು 'ನಾನು' ಮತ್ತು 'ನನ್ನದು' ಎಂಬ ಭಾವನೆಗಳ ಉತ್ಪನ್ನಗಳು. ಅವುಗಳನ್ನು ಮೂಲೋತ್ಪಾಟನೆ ಮಾಡಿದ ಮೇಲೆ ಮಾತ್ರವೆ ವ್ಯಕ್ತಿಯು ಒಬ್ಬ ಭಕ್ತನಾಗುತ್ತಾನೆ. ಅವನಲ್ಲಿ ಬಯಕೆಗೆ ಎಡೆಯೇ ಇರುವುದಿಲ್ಲ. ಅವನು ಅಮೃತಸ್ವರೂಪನ ಭಕ್ತನು. ಅಮೃತಸ್ವರೂಪನಾದವನಿಗೆ ಆನಂದದ ಸಿಹಿಯ ಹೊರತು ಬೇರೆ ಯಾವುದರಲ್ಲೂ ರುಚಿಯಿರುವುದಿಲ್ಲ.

# ೨೦ ಇಂದು ಸಾಧಕನದು ನಾಳೆ ಯಾರದೊ?

ಯಮನು ಶಿವನ ಹಾಗೆಯೇ ಎಲ್ಲದರಲ್ಲೂ ಇದ್ದಾನೆ! ಯಮನು ದೇಹದೊಂದಿಗೆ ಸಂಬಂಧಪಡುತ್ತಾನೆ, ಅವನು ಜೀವಿಯನ್ನು ಏನೂ ಮಾಡಲಾರ. ಶಿವನು ಜೀವಿಯೊಂದಿಗೆ ಸಂಬಂಧಿಸಿದ್ದಾನೆ; ಆದರೆ ಅವನು ದೇಹವನ್ನು ಶಾಶ್ವತವಾಗಿರಲು ಬಿಡುವುದಿಲ್ಲ. ಜೀವಿಗೆ ತನ್ನ ನಿಜ ಸ್ವರೂಪವನ್ನು ಅರಿಯಲು ದೇಹವು ಅಗತ್ಯವಾದ ವಾಹನ. ಆದರೂ ದೇಹದ ಪ್ರಭುವಾದ ಯಮನ ಗಮನಕ್ಕೆ ಅದು ಯಾವಾಗ ಗುರಿಯಾಗುತ್ತದೆಂದು ಯಾರು ಬಲ್ಲರು? ಈ ದೇಹವು ಯಮನ ಪಾಶಗಳಿಗೆ ಯಾವಾಗ ತುತ್ತಾಗುತ್ತದೆಂದು ಯಾರಿಗೆ ಗೊತ್ತಾಗುತ್ತದೆ? ಸುಲಭವಾಗಿ ನಾಶವಾಗುವ ಈ ದೇಹದ ಹೊರೆಯನ್ನು ಹೊತ್ತುಕೊಂಡ ಜೀವಿಯು ಮೇಲಿನ ಈ ಎಚ್ಚರಿಕೆಯನ್ನು ಗ್ರಹಿಸಬೇಕು ಮತ್ತು ಆ ಕ್ಷಣವೇ ಅದು ಹೇಗೇ ಇರಲಿ, ಶಿವನಲ್ಲಿ ಲೀನವಾಗಲು ಉತ್ಸುಕರಾಗಬೇಕು. ಉರುಳಿ ಹೋದ ಒಂದೇ ಒಂದು ಕ್ಷಣವೂ ಮರಳಿ ಬರುವುದಿಲ್ಲ. ಜನರು ಇಂದು ಮಾಡಬೇಕಾದ ಕೆಲವು ಕೆಲಸಗಳನ್ನು ನಾಳೆಗೆ ಮುಂದೂಡುವುದು, ನೆನ್ನೆಯದನ್ನು ಇಂದಿನವರೆಗೂ ತಳ್ಳುವುದು ಸಾಮಾನ್ಯ. ಆದರೆ ಸಾಧನೆಯ ಪ್ರಕ್ರಿಯೆ ಇಂಥದಲ್ಲ. ಅದಕ್ಕೆ ನೆನ್ನೆಯೂ ಇಲ್ಲ, ನಾಳೆಯೂ ಇಲ್ಲ. ಈ ಕ್ಷಣವೇ ಸರಿಯಾದ ಕ್ಷಣ; ಕಳೆದು ಹೋದ ನಿಮಿಷವು ನಿಮ್ಮ ಹಿಡಿತದಲ್ಲಿಲ್ಲ; ಹಾಗೆಯೇ ಬರಲಿರುವ ನಿಮಿಷವೂ ನಿಮ್ಮದಲ್ಲ; ಈ ಅರಿವನ್ನು ತನ್ನ ಹೃದಯದಲ್ಲಿ ಕಂಡುಕೊಂಡಿರುವ ಜೀವಿಯು ಮಾತ್ರ ಶಿವನೊಂದಿಗೆ ಲೀನವಾಗುವುದು ಸಾಧ್ಯ. ಹೃದಯದಲ್ಲಿ ಈ ಸತ್ಯವನ್ನು ಅರಗಿಸಿಕೊಳ್ಳದೆ ಜೀವಿಯು ದೇಹವೇ ಮುಖ್ಯವಾದದ್ದೆಂದು ಬಗೆದು ಇಂದು ನಾಳೆಗಳ ಅನಿತ್ಯವಾದ ಲಕ್ಷ್ಯಗಳಲ್ಲಿ ಮುಳುಗಿಹೋಗುತ್ತಾನೆ. ಹೀಗೆ ಪ್ರಾಪಂಚಿಕ ಮೋಹಕ್ಕೆ ತಳಹದಿಯನ್ನು ಹಾಕಿಕೊಳ್ಳುತ್ತಾನೆ. ಅದರಿಂದಾಗಿ ಮತ್ತೆ ಮತ್ತೆ ದೇಹ ಧರಿಸಿ ಮತ್ತೆ ಮತ್ತೆ ಯಮನ ದರ್ಶನ ಮಾಡುತ್ತಲೇ ಇರುತ್ತಾನೆ; ಸಾಧಕನ ಹಕ್ಕು ಶಿವದರ್ಶನವೇ ಹೊರತು ಯಮದರ್ಶನವಲ್ಲ. ಅವನು ಅದನ್ನು ಬಯಸುವುದಿಲ್ಲ, ಅದನ್ನು ಆಲೋಚಿಸುವುದೂ ಇಲ್ಲ. ದೇಹ ಮತ್ತು ಜೀವಗಳ ಈ ಸಂಬಂಧವನ್ನು ಹೊಂದಿರುವವರು ಮಾತ್ರ ಮನುಷ್ಯರು. ಈ ತತ್ವವನ್ನು ಅರಿತವರು ತಮ್ಮ ಸಾಧನೆಯಲ್ಲಿ ಅಣು ಮಾತ್ರವೂ ಚಂಚಲವಾಗಲಾರರು. ಈ ದಿನಗಳಲ್ಲಿ ಮಾನವನು ಅನಿತ್ಯವಾದ ಪ್ರಾಪಂಚಿಕವಾದ ಸಂತೋಷಗಳನ್ನು ಕಾಣುವುದರಲ್ಲಿ ಅನುಭವಿಸುವುದರಲ್ಲಿ ತೃಪ್ತನು. ಅವನಿಗೆ ವಿಶ್ರಾಂತಿಯೇ ಇಲ್ಲ. ರಾತ್ರಿಗಳನ್ನು ನಿದ್ರೆಯಲ್ಲೂ ಹಗಲುಗಳನ್ನು ತಿನ್ನುವುದು ಮತ್ತು ಕುಡಿಯುವುದರಲ್ಲೂ ಕಳೆಯುತ್ತಲೇ ಬೆಳೆಯುತ್ತಾನೆ. ಹೀಗೇ ಬೆಳೆದು ಮುಪ್ಪು ಬಂದು ಮೃತ್ಯುವು ಅವನನ್ನು ಹಿಂಬಾಲಿಸುತ್ತದೆ. ಆಗ ಅವನಿಗೆ ಎಲ್ಲಿಗೆ ಹೋಗಬೇಕು, ಏನು ಮಾಡಬೇಕು ಎನ್ನುವುದೇ ತಿಳಿಯುವುದಿಲ್ಲ. ಅವನ ಇಂದ್ರಿಯಗಳೆಲ್ಲ ದುರ್ಬಲವಾಗಿರುತ್ತವೆ;

ಯಾರೂ ಯಾವುದೂ ಅವನನ್ನು ಕಾಪಾಡಲಾರದು; ಕೊನೆಗೆ ಮೃತ್ಯುವಿನ ದವಡೆಗೆ ಅಡವಾಗಿ ಸಿಕ್ಕಿ ಅವನು ಈ ಜನ್ಮವನ್ನು ಮುಗಿಸುತ್ತಾನೆ.

ಬೆಲೆಯನ್ನೇ ಕಟ್ಟಲಾಗದಷ್ಟು ಅಮೂಲ್ಯವಾದ ವಜ್ರದಂತಹ ಈ ಮಾನವ ಜೀವನ ವನ್ನು ಸಮಕಲು ಕಾಸಿನ ಮಟ್ಟಕ್ಕೆ ಅಗ್ಗವಾಗಿಸಿಬಿಟ್ಟಿರುವುದು ತುಂಬಾ ವಿಷಾದದ ವಿಷಯ. ಸಮಯವನ್ನು ಯಾವ ಪ್ರಯೋಜನವೂ ಇಲ್ಲದಂತೆ ಪೋಲು ಮಾಡಿ, ಭಗವದ್ಧ್ಯಾನದಲ್ಲಾಗಲಿ, ಅವನ ಸಾಕ್ಷಾತ್ಕಾರಕ್ಕೆ ಸಾಧನೆ ಮಾಡುತ್ತಲಾಗಲಿ ಕಳೆ ಯದೆ, ಆಮೇಲೆ ಪಶ್ಚಾತ್ತಾಪಪಟ್ಟರೆ ಏನು ಲಾಭ? ಮನೆಗೆ ಬೆಂಕಿ ಬಿದ್ದಿರುವಾಗ ಒಂದು ಬಾವಿ ತೋಡುವ ಯೋಜನೆ ಹಾಕಿದರೆ ಏನು ಉಪಯೋಗ? ಅದನ್ನು ಅಗೆಯುವುದು ಯಾವಾಗ? ನೀರು ಬರುವುದು ಯಾವಾಗ? ಬೆಂಕಿಯನ್ನು ಆರಿಸುವುದು ಯಾವಾಗ? ಅದು ಅಸಾಧ್ಯವಾದ ಕೆಲಸ; ಮೊದಲೇ ಬಾವಿ ಇದ್ದಿದ್ದರೆ, ಅಂತಹ ತುರ್ತು ಸಂದರ್ಭಗಳಲ್ಲಿ ಎಷ್ಟು ಸಹಾಯಕವಾಗುತ್ತಿತ್ತು. ಜೀವಿತದ ಕೊನೆಯ ಕ್ಷಣಗಳಲ್ಲಿ ಭಗವಂತನನ್ನು ಧ್ಯಾನಿಸಲು ತೊಡಗುವುದು ಬೆಂಕಿ ಹೊತ್ತಿಕೊಂಡ ಮೇಲೆ ಬಾವಿಯನ್ನು ತೋಡಲು ತೊಡಗಿದ ಹಾಗೆ. ಆದ್ದ ರಿಂದ ಈ ಕ್ಷಣದಿಂದ ಮುಂದಕ್ಕೆ ಭಗವಂತನ ಧ್ಯಾನದಲ್ಲಿ ತೊಡಗಿದ್ದೇ ಆದರೆ ಅಂತ್ಯವು ಸಮೀಪಿಸಿದಾಗ ಅದು ನೆರವಿಗೆ ಬರುತ್ತದೆ. ನಾಳೆ ಮಾಡಬೇಕಾದ ಸಾಧನೆಯನ್ನು ಇಂದೇ ಪ್ರಾರಂಭಿಸಿ, ಮುಂದಿನ ಕ್ಷಣದಲ್ಲಿ ಏನು ಕಾದಿದೆಯೆಂದು ಈಗ ಗೊತ್ತಿಲ್ಲ. ಆದ್ದರಿಂದ ಮಾಡಬೇಕಾದ ಸಾಧನೆಯಲ್ಲಿ ನಿರತನಾಗಲು ವಿಳಂಬ ಮಾಡಕೂಡದು. ಈ ಸಾಧನೆಗೆ ದೈಹಿಕ ದಾರ್ಢ್ಯವೂ ಅಗತ್ಯ. ಆದ್ದರಿಂದ ದೇಹ ವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಬೇಕು. ಅಗತ್ಯಕ್ಕಿಂತ ಹೆಚ್ಚು ಪೋಷಿಸಿದರೆ ಅದರಿಂದ ಹಾನಿಯೆಂಬುದನ್ನು ಮರೆಯದಿದ್ದರೆ ಸರಿ. ಅಗತ್ಯವಾದಷ್ಟು ಪ್ರಮಾಣಕ್ಕೆ ಬಹಳ ಜಾಗರೂಕತೆಯಿಂದ ಅದನ್ನು ನೋಡಿಕೊಳ್ಳಬೇಕು.

# ೨೧ ಭಕ್ತನು ಮುಕ್ತನಾಗಲು ದಾರಿ

ಮಾನವ ಜನ್ಮವು ಬಹು ದುರ್ಲಭವಾದದ್ದು. ಸುಲಭವಾಗಿ ಅದನ್ನು ಪಡೆದು ಬಿಡಲು ಸಾಧ್ಯವಿಲ್ಲ. ದೇಹವು ಒಂದು ಛತ್ರವಿದ್ದ ಹಾಗೆ; ಮನಸ್ಸು ಅದರ ಕಾವಲುಗಾರ; ಜೀವಿಯು ಯಾತ್ರಿಕ. ಇವರು ಯಾರೂ ಇನ್ನೊಬ್ಬರಿಗೆ ಸಂಬಂಧ ಪಟ್ಟವರಲ್ಲ. ಯಾತ್ರಿಕನು ಮೋಕ್ಷಪುರಿಗೆ, ಮೋಕ್ಷವೆಂಬ ನಗರಕ್ಕೆ ಯಾತ್ರೆ ಹೊರಟಿದ್ದಾನೆ. ಯಾವುದೇ ತೊಂದರೆಯಿಲ್ಲದ ಪ್ರಯಾಣಕ್ಕೆ ನಾಮಸ್ಮರಣೆಯಷ್ಟು ವಿಶ್ವಾಸಾರ್ಹವಾದ ನೆರವು ಬೇರೆ ಯಾವುದೂ ಇಲ್ಲ. ಅದೇ ಭಗವಂತನ ನಾಮ ವನ್ನು ನೆನೆಯುವುದು. ಒಮ್ಮೆ ಆ ನಾಮದ ಸವಿಯು ಅನುಭವಕ್ಕೆ ಬಂದಿತೆಂದರೆ

ವ್ಯಕ್ತಿಗೆ ಬಳಲಿಕೆಯಾಗಲಿ, ಕಳವಳವಾಗಲಿ, ಆಲಸ್ಯವಾಗಲಿ ಇರುವುದಿಲ್ಲ. ಅವನು ತನ್ನ ಯಾತ್ರೆಯನ್ನು ಸಂತೋಷದಿಂದ, ಉತ್ಸಾಹದಿಂದ ಆಳವಾದ ಶ್ರದ್ಧೆಯಿಂದ ಪೂರೈಸುತ್ತಾನೆ. ಆದರೂ ಈ ಸಾಧನೆಯನ್ನು ಮಾಡಲು ಸದ್ಭಾವ ಅಥವಾ ಧಾರ್ಮಿಕತೆ ತುಂಬಾ ಮುಖ್ಯ. ಪಾಪ ಭೀತಿಯಿಲ್ಲದೆ ಧರ್ಮಭಾವನೆ ಹುಟ್ಟುವುದಿಲ್ಲ, ಭಗವತ್ ಪ್ರೇಮವೂ ವಿಕಾಸಗೊಳ್ಳುವುದಿಲ್ಲ. ಈ ಭೀತಿಯೇ ಭಕ್ತಿಯನ್ನು ಉತ್ಪತ್ತಿ ಮಾಡಿ ಭಗವಂತನ ಆರಾಧನೆಯಲ್ಲಿ ಫಲಪ್ರದವಾಗುತ್ತದೆ.

ಅವಿವೇಕವೇ ಮಾನವನ ಅವನತಿಗೆ ಕಾರಣ. ಅದು ಕುರಿಯ ವರ್ತನೆಯ ಹಾಗೆ. ಒಂದು ಕುರಿಯು ಗುಂಡಿಯೊಳಕ್ಕೆ ಬಿದ್ದರೆ, ಎಲ್ಲ ಕುರಿಗಳೂ ಅದರೊಳಕ್ಕೆ ಬೀಳುತ್ತವೆ; ಈ ವರ್ತನೆಯು ವಿನಾಶಕರ. ಅದನ್ನು ಬಿಟ್ಟು, ಒಳಿತು ಕೆಡಕುಗಳ ಬಗೆಗೆ, ಮಾಡುವ ಕೆಲಸದ ಆಗುಹೋಗುಗಳ ಬಗೆಗೆ ಆಲೋಚನೆ ಮಾಡಿ ಮುನ್ನುಗ್ಗಬೇಕು. ಸಾವು ಯಾರನ್ನೂ ಬಿಡುವುದಿಲ್ಲ; ಅವನು ಏನೇ ಆಗಿರಲಿ, ಅದು ಎಲ್ಲರನ್ನೂ ಬೆದರಿಸುತ್ತದೆ. ಇಂದು ಬೇರೊಬ್ಬರ ಸರದಿಯಾಗಿರಬಹುದು, ನಾಳೆ ನಿಮ್ಮ ಸರದಿಯಾಗಬಹುದು. ತೋಟದಲ್ಲಿ ಅರಳಿರುವ ಹೂವುಗಳನ್ನು ನೋಡಿ; ತೋಟಗಾರನು ಬಂದು ಹೂವುಗಳನ್ನು ಬಿಡಿಸಲು ತೊಡಗಿದಾಗ, ಮೊಗ್ಗುಗಳು ತಮ್ಮ ಸರದಿ ನಾಳೆಗೆ ಬರುತ್ತದೆ, ಅವನ ಬೊಗಸೆಗೆ ಸೇರುವ ಅವಕಾಶ ಬರುತ್ತದೆ ಎಂದು ಸಂತೋಷಪಡುತ್ತವೆ. ಆ ಆಸೆಯಿಂದ ಅವುಗಳ ಮುಖ ಅರಳಿದಾಗ ಅವಕ್ಕೆ ಸಂತೋಷ ತುಂಬಿ ಬಂದಿರುತ್ತದೆ. ಅವು ದುಃಖಪಡುತ್ತವೇನು? ಅವುಗಳ ಮುಖ ಸೊರಗುತ್ತದೇನು? ಮುಖದ ಕಾಂತಿ ಕುಂದುತ್ತದೇನು? ಇಲ್ಲ. ಮಾರನೆಯ ದಿನ ತಮ್ಮ ಸರದಿ ಎಂದು ತಿಳಿದೊಡನೆ ಅಪಾರ ಉತ್ಸಾಹ ಮತ್ತು ಉದ್ವೇಗಗಳಿಂದ ಅವು ಸಿದ್ಧವಾಗುತ್ತವೆ. ಹಾಗೆಯೇ ಸಾಧನ ಮಾರ್ಗದಲ್ಲಿ ವ್ಯಕ್ತಿಯು ಉತ್ಸಾಹದಿಂದ, ಭಗವನ್ನಾಮವನ್ನು ಸ್ಮರಿಸುತ್ತಾ ತನ್ನ ಸರದಿಯು ನಾಳೆಯವರೆಗೆ ವಿಳಂಬವಾಯಿತಲ್ಲ ಎಂದು ವಿಷಾದಿಸದೆ ಸಿದ್ಧನಾಗಿರಬೇಕು. ದೇಹವು ಒಂದು ಗಾಜಿನ ನಳಿಗೆಯಿದ್ದ ಹಾಗೆ. ಅದರೊಳಗೆ ಮನಸ್ಸು ಸದಾ ಪರಿವರ್ತನಶೀಲವಾಗಿರುತ್ತದೆ, ಚಡಪಡಿಸುತ್ತಿರುತ್ತದೆ. ಅದರ ಚೇಷ್ಟೆಯನ್ನು ನೋಡಿ ಮೃತ್ಯುವು ನಗುತ್ತದೆ. ಜೀವವೆಂಬ ಪಕ್ಷಿಯು ಒಂಬತ್ತು ತೂತುಗಳಿರುವ ಮಡಕೆಯಲ್ಲಿದೆ. ಜೀವವೆಂಬ ಹಕ್ಕಿಯು ದೇಹವನ್ನು ಪಡೆದದ್ದೇ ಒಂದು ಆಶ್ಚರ್ಯ; ಅದು ಮಡಕೆಯೊಳಕ್ಕೆ ಹೇಗೆ ಬಂದಿತು, ಹೇಗೆ ಮೇಲಕ್ಕೆ ಹಾರಿ, ಹೊರಹೋಗುತ್ತದೆ ಎನ್ನುವುದೂ ಆಶ್ಚರ್ಯ. ಸುರರು, ಮುನಿಗಳು ಮತ್ತು ನವಖಂಡಗಳ ನವದ್ವೀಪಗಳ ನರರು ಎಲ್ಲರೂ ದೇಹದ ಹೊರೆಯನ್ನು ಹೊತ್ತುಕೊಳ್ಳುವ ಶಿಕ್ಷೆಯನ್ನು ಅನುಭವಿಸುತ್ತಲೇ ಇದ್ದಾರೆ. ಇವರಲ್ಲಿ ಮಿತ್ರರು ಯಾರು, ಶತ್ರುಗಳು ಯಾರು? ಅಹಂಕಾರವು ಅಳಿದ ನಂತರ ಎಲ್ಲರೂ ಮಿತ್ರರೇ; ಆಗ ಅವರು ಯಾರೂ ಶತ್ರುಗಳಾಗಿ ಉಳಿಯುವುದಿಲ್ಲ. ಈ ಪಾಠವನ್ನು ಎಲ್ಲರೂ ಸ್ಮರಿಸಬೇಕು.

ಮನುಷ್ಯನು ಕಿವಿಯ ಮೂಲಕ ನಲಿವನ್ನೂ ನೋವನ್ನೂ ಅನುಭವಿಸುತ್ತಿದ್ದಾನೆ. ಆದ್ದರಿಂದ ಕಠಿಣ ಪದಗಳ ಹರಿತವಾದ ಬಾಣಗಳನ್ನು ನಿವಾರಿಸಿ, ಮಧುರವೂ ಹಿತವೂ ಮೃದುವೂ ಆದ ಮಾತುಗಳನ್ನು ಬಳಸಬೇಕು. ಆ ಮಾರ್ದವತೆಗೆ ಸತ್ಯದ ಸಿಹಿಯನ್ನು ಸೇರಿಸಬೇಕು. ಪದವನ್ನು ಮೃದುಗೊಳಿಸಲೆಂದು ಸುಳ್ಳನ್ನು ಬೆರೆಸಿದರೆ ಅದು ಇನ್ನಷ್ಟು ನೋವಿಗೆ ದಾರಿಯಾಗುವುದು. ಸಾಧಕನಾದವನು ಯಾವಾಗಲೂ ತುಂಬ ಮೃದುವಾದ, ಸಿಹಿಯಾದ, ಸತ್ಯವಾದ ಮತ್ತು ಹಿತವಾದ ಮಾತುಗಳನ್ನೇ ಆಡಬೇಕು. ಆ ಸದ್ಗುಣಗಳಿಂದಲೇ ಅವರನ್ನು ಗುರುತು ಹಿಡಿಯಬಹುದು. ಸಾಧಕರಿಗೆ ಮನಸ್ಸೇ ಮಥುರೆ, ಹೃದಯವೇ ದ್ವಾರಕೆ ಮತ್ತು ದೇಹವೇ ಕಾಶಿ. ಹತ್ತನೆಯ ದ್ವಾರದಲ್ಲಿ ಪರಂಜ್ಯೋತಿಯನ್ನು ಅವರು ಸಾಕ್ಷಾತ್ಕರಿಸಿಕೊಳ್ಳುವರು. ಹೃದಯವು ಶುದ್ಧವಾಗಿಲ್ಲದೆ ಹೋದರೆ ಮಾತ್ರ ಪರಿಶ್ರಮವೆಲ್ಲವೂ ವ್ಯರ್ಥ. ಮೀನನ್ನು ನೋಡಿ! ಸದಾ ನೀರಿನಲ್ಲಿದ್ದರೂ ತನ್ನ ಕೆಟ್ಟ ವಾಸನೆಯನ್ನು ಸ್ವಲ್ಪ ವಾದರೂ ಅದು ಕಳೆದುಕೊಂಡಿದೆಯೇ? ಇಲ್ಲ. ಹೃದಯದಲ್ಲಿ ಅಹಂಕಾರದ ಭ್ರಮೆ ತುಂಬಿರುವವರೆಗೂ ಹೃದಯಶುದ್ಧೀಕರಣ ಸಾಧನೆಗಳಲ್ಲಿ ಎಷ್ಟೇ ಮಟ್ಟಿಗೆ ಮುಳುಗಿದರೂ ಮನುಷ್ಯನ ವಾಸನೆಯು ಅಳಿಯುವುದಿಲ್ಲ. ನಾನು, ನನ್ನದು ಎಂಬ ಭಾವನೆಯನ್ನು ಹೋಗಲಾಡಿಸಿಕೊಳ್ಳಲೆಂದು ಅವನು ಅಪೇಕ್ಷಿಸಿದ್ದೇ ಆದರೆ ಹರಿ ಯನ್ನು ಪೂಜಿಸಬೇಕು. ಇಚ್ಛೆಗಳಾಗಲಿ ಅನಿಚ್ಛೆಗಳಾಗಲಿ ಇಲ್ಲದ ಸಾಧಕನಾಗಬೇಕು. ಇಂತಹ ವಿಚಾರಗಳು ಹೃದಯದಲ್ಲಿ ಸಾಧು ಸ್ವಭಾವದೊಂದಿಗೆ ಕೂಡಿರಲಾರವು. ಒಂದೇ ಸ್ಥಳದಲ್ಲಿ ಒಂದೇ ಸಮಯದಲ್ಲಿ ಕತ್ತಲೆಯೂ ಬೆಳಕೂ ಒಟ್ಟಿಗೆ ಇರಲಾರವು. ಅರಿಷಡ್ವರ್ಗಗಳ ದಬ್ಬಾಳಿಕೆಗೆ ಸಿಕ್ಕಿದ ಹೃದಯವುಳ್ಳವನಿಗೆ ಅಹಂಕಾರವೇ ಮಂತ್ರಿ ಯಾಗಿರುತ್ತದೆ. ಅಂತಹ ಮಂತ್ರಿಯನ್ನು ಹೊಂದಿರುವವರು, ತಾವು ಎಷ್ಟೇ ದೊಡ್ಡ ಪಂಡಿತರು, ಸಾಧುಗಳು ಅಥವಾ ಸನ್ಯಾಸಿಗಳು ಎಂದು ಹೇಳಿಕೊಳ್ಳಲಿ, ಮೂರ್ಖರಿ ಗಿಂತ ಕೀಳಾಗಿರುತ್ತಾರೆ.

ಪರಿಮಳವನ್ನು ಹೊತ್ತ ಮಾತ್ರಕ್ಕೆ ಕತ್ತೆಯು ಆನೆಯಾಗಬಲ್ಲುದೆ? ಒಂದು ಹೊರೆ ಶ್ರೀಗಂಧದ ತುಂಡುಗಳನ್ನು ಹೊರುವಷ್ಟರಿಂದ ಕತ್ತೆಯು ಆನೆಯಾಗಿ ಬದಲಾಗ ಬಲ್ಲುದೇನು? ಅದಕ್ಕೆ ಭಾರ ತಿಳಿಯಬಹುದೇ ಹೊರತು ಪರಿಮಳವಲ್ಲ. ಆದರೆ ಆನೆಯು ಭಾರಕ್ಕೆ ಲಕ್ಷ್ಯಕೊಡುವುದಿಲ್ಲ, ಪರಿಮಳವನ್ನು ಸವಿಯುತ್ತದೆ. ಅಲ್ಲವೆ? ಹಾಗೆಯೇ ಸಾಧಕ, ಸನ್ಯಾಸಿ ಅಥವಾ ಭಕ್ತನು ಶುದ್ಧ ಸತ್ಯವನ್ನು, ಸತ್ಕಾರ್ಯಗಳ ಶುದ್ಧ ಸತ್ವವನ್ನು, ದೈವತ್ವವನ್ನು, ಶಾಸ್ತ್ರ, ವೇದ, ಉಪನಿಷತ್ತುಗಳ ಸಾರವನ್ನು ಗ್ರಹಿಸುತ್ತಾನೆ. ಹಾಗಲ್ಲದೆ, ಕೇವಲ ಪಾಂಡಿತ್ಯಕ್ಕಾಗಿ, ವಾದವಿವಾದಕ್ಕಾಗಿ ಚರ್ಚೆ ಮಾಡುತ್ತಾ ಹೋದರೆ, ಅವನಿಗೆ ತರ್ಕದ ಭಾರದ ಅರಿವಾಗಬಹುದೇ ಹೊರತು ಸತ್ಯದ ಪರಿಮಳವಲ್ಲ. ನೋಡುವವರು ಬೇಕಾದರೆ ಅವನನ್ನು ವೇದಶಾಸ್ತ್ರಗಳ ಸಾಕಾರಮೂರ್ತಿ ಎಂದು ಕೊಂಡಾಡಬಹುದು, ಆದರೆ ಅತ್ಯಗತ್ಯ ಅಂಶಗಳೇ ಕೊರತೆಯಾಗಿರುವಾಗ ಮೂರ್ತರೂಪವು ಹೇಗೆ ಸಾಧ್ಯ? ಸಾರವನ್ನು ಹುಡುಕುವ

ವರಿಗೆ ಹೊರೆಯು ಗಣನೆಗೆ ಬರುವುದಿಲ್ಲ. ಕೇವಲ ತರ್ಕವನ್ನು ಉಪಯೋಗಿಸಿದರೆ ಗಮನಾರ್ಹವಾದ ಏನನ್ನೂ ಗಳಿಸಲು ಸಾಧ್ಯವಿಲ್ಲ. ಭಗವಂತನನ್ನು ನಿರಂತರವಾಗಿ ಸ್ಮರಿಸಬೇಕಾದ ಪಕ್ಷದಲ್ಲಿ ಪ್ರೇಮವೇ ದೊಡ್ಡ ಉಪಕರಣ. ಆ ಉಪಕರಣವನ್ನು ಕ್ಷೇಮವಾಗಿ, ಬಲವಾಗಿ ಇಟ್ಟುಕೊಳ್ಳಬೇಕಾದರೆ ವಿವೇಚನೆ ಎಂಬ ಸಾಧನವನ್ನು ಉಪಯೋಗಿಸಬೇಕು.

ತಮ್ಮ ಅಪಾರ ಪಾಂಡಿತ್ಯವನ್ನು ಒಣ ಚರ್ಚೆಗಳಲ್ಲಿ ಕಳೆದು ತಾವು ಬಹಳ ದೊಡ್ಡವರೆಂದು ಭಾವಿಸುವ ಅನೇಕ ಜನರಿದ್ದಾರೆ. ಇದು ದೊಡ್ಡ ತಪ್ಪು. ಅವರು ನಿಜವಾಗಿಯೂ ವಿದ್ವಾಂಸರಾಗಿದ್ದರೆ ಒಣ ಚರ್ಚೆಗೆ ಅವಕಾಶವೇ ಇರುವುದಿಲ್ಲ. ಗೌರವಾನ್ವಿತ ಮಾರ್ಗವೆಂದು ಅವರು ಮೌನವನ್ನು ಧರಿಸುತ್ತಾರೆ. ಏಕೆಂದರೆ ಇವರು ವೇದಗಳು, ಶಾಸ್ತ್ರಗಳು ಮತ್ತು ಉಪನಿಷತ್ತುಗಳ ಸಾರವನ್ನು ಗ್ರಹಿಸಿರುತ್ತಾರೆ. ಅದರ ಸತ್ವವೂ ಅದು ಸಾರುವ ಭಗವತ್ತತ್ವವೂ ಒಂದೇ. ತಾನು ಯಾವ ರೂಪವನ್ನು ಕಲ್ಪಿಸಿಕೊಳ್ಳುವನೋ ಆ ರೂಪದಲ್ಲಿ ಭಗವಂತನು ಮೈದೋರುತ್ತಾನೆ. ಯಾವ ಭಾವಕ್ಕೆ ಬೇಕಾದರೂ ಹೊಂದಿಕೊಳ್ಳುವ ಕ್ರಿಯೆಯಲ್ಲಿ ಪ್ರಕಟವಾಗುತ್ತಾನೆ ಎಂದು ಅವರು ಬಲ್ಲರು.

ಇವೆರಡರಲ್ಲಿ ಮುಖ್ಯವಾದದ್ದು ಏಕಾಗ್ರತೆ, ಶಾಂತಿ, ವಿಕಾರರಾಹಿತ್ಯ ಅಂದರೆ, ಇಷ್ಟ ಅನಿಷ್ಟಗಳನ್ನು ಕಳೆದುಕೊಳ್ಳುವಿಕೆ ಇದೇ ಹೊರತು ವಾದವಿವಾದವಲ್ಲ. ಈ ಎಲ್ಲ ಸಾಧನೆಗಳು, ಈ ಜಪ, ಧ್ಯಾನ, ಭಜನೆ ಇವೆಲ್ಲ ಏತಕ್ಕಾಗಿ? ಇವೆಲ್ಲ ಏಕಾಗ್ರತೆಯನ್ನು ಗಳಿಸಿಕೊಳ್ಳುವುದಕ್ಕಾಗಿಯಲ್ಲವೆ? ಒಮ್ಮೆ ಅದನ್ನು ಗಳಿಸಿದ್ದಾಯಿತೆಂದರೆ, ಮುಂದೆ ಪರಿಶ್ರಮವು ಅಗತ್ಯವಾಗುವುದಿಲ್ಲ. ಅದರ ಮಹತ್ವವು ಅವನಿಗೆ ಅರಿವಾಗಿಬಿಡುತ್ತದೆ. ಆದ್ದರಿಂದ ಸಾಧಕರಾಗಲು ಉತ್ಸುಕರಾಗಿರುವವರು, ಮೋಕ್ಷವನ್ನು ಬಯಸುವ ವರು ವಾದ ಪ್ರತಿವಾದಗಳಿಗೆ ಬಲಿಯಾಗಬಾರದು. ದುರಾಲೋಚನೆಗಳಿಂದ ಆಕರ್ಷಿತರಾಗಬಾರದು. ತಮ್ಮ ದೋಷಗಳನ್ನು ಮನಗಾಣಬೇಕು ಮತ್ತೆ ಅವು ಸಂಭವಿಸದಂತೆ ನೋಡಿಕೊಳ್ಳಬೇಕು. ತಾವು ಗಳಿಸಿದ ಏಕಾಗ್ರತೆಯನ್ನು, ಲಕ್ಷ್ಯದ ಕಡೆಗೆ ದೃಷ್ಟಿಯನ್ನು ಕೀಲಿಸಿ, ಕಷ್ಟಗಳನ್ನು ಸೋಲುಗಳನ್ನು ತಡೆಗಳನ್ನು ಕ್ಷುಲ್ಲಕ ವೆಂದು ಪರಿಗಣಿಸಿ, ರಕ್ಷಿಸಿಕೊಳ್ಳಬೇಕು. ಉತ್ಸಾಹವನ್ನು ಸಂತೋಷವನ್ನು ಕೊಡುವ ವಸ್ತುವಿಷಯಗಳಲ್ಲಿ ಆಸಕ್ತನಾಗಬೇಕು, ಚಿಕ್ಕ ದೊಡ್ಡ ಎಲ್ಲ ವಸ್ತುಗಳಲ್ಲೂ ಸಂದೇಹ ವನ್ನು ಬೆಳೆಸಿಕೊಳ್ಳುತ್ತಾ ಅಮೂಲ್ಯವಾದ ಸಮಯವನ್ನು ಪೋಲು ಮಾಡಬಾರದು. ಬೇರೆ ಎಲ್ಲವೂ ಅಮುಖ್ಯವಾದವು, ಈ ಎರಡು ಬಹು ಮುಖ್ಯವಾದವು—ತನಗೆ ಎಲ್ಲವೂ ತಿಳಿದಿದೆ ಎಂಬ ಗರ್ವ ಮತ್ತು ಇದೆಯೋ ಇಲ್ಲವೋ ಎಂಬ ಸಂದೇಹ. ಈ ಎರಡೂ ಸಾಧಕನ ಅತಿ ದೊಡ್ಡ ಶತ್ರುಗಳು. ಅವರು ಯಾರಾದರೇನು, ವ್ಯಕ್ತಿಯು ತನ್ನ ಸತ್ಯ ಸಾಕ್ಷಾತ್ಕಾರದ ಕಡೆಗೆ ಸ್ಥಿರಮನಸ್ಕನಾಗಿ ನಿಲ್ಲಬೇಕು. ಅವನ ಮನಸ್ಸು ಶುದ್ಧವಾಗಿದ್ದರೆ ಎಲ್ಲವೂ ಶುದ್ಧವಾಗಿರುತ್ತದೆ. ಅದು ಸತ್ಯವಾದರೆ ಮಿಕ್ಕೆಲ್ಲವೂ ಸತ್ಯ.

ಪ್ರಕೃತಿಯು ಅಸಂಖ್ಯ ವರ್ಣಗಳಿಂದ ಕಾಂತಿಯುಕ್ತವಾಗಿದ್ದರೂ ನೀವು ನೀಲಿ ಕನ್ನಡಕವನ್ನು ಧರಿಸಿ ನೋಡಿದರೆ ಎಲ್ಲವೂ ನೀಲಿಯಾಗಿಯೇ ಕಾಣಿಸುತ್ತದಲ್ಲವೆ? ಜಗತ್ತು ವೈವಿಧ್ಯದಿಂದ ಕೂಡಿರುವಂತೆ ತೋರಿದರೆ, ಅದಕ್ಕೆ ನಿಮ್ಮಲ್ಲಿರುವ ದೋಷವೇ ಕಾರಣ. ಎಲ್ಲವೂ ಒಂದೇ ಪ್ರೇಮವಾಗಿ ತೋರಿದರೆ, ಅದಕ್ಕೂ ನಿಮ್ಮ ಪ್ರೇಮವೇ ಕಾರಣ. ಎರಡಕ್ಕೂ ನಿಮ್ಮಲ್ಲಿರುವ ಭಾವನೆಯೇ ಕಾರಣ. ತನ್ನಲ್ಲಿ ದೋಷವನ್ನು ತುಂಬಿಕೊಂಡು, ವ್ಯಕ್ತಿಯು ಇಡೀ ಜಗತ್ತು ದೋಷಮಯವಾಗಿರುವಂತೆ ಕಾಣುತ್ತಾನೆ. ತನ್ನಲ್ಲಿ ದೋಷಗಳಿರುವುದು ಕಾಣಿಸದೆ ಹೋದರೆ ಹೊರಗೆ ಎಷ್ಟು ಹುಡುಕಿದರೂ ಕಾಣಿಸುವುದಿಲ್ಲ. ಏಕೆಂದರೆ ದೋಷವೆಂದರೆ ಯಾವುದು ಎಂಬುದಾದರೂ ತಿಳಿದಿರಬೇಕಷ್ಟೆ.

ಈಗ ಒಂದು ಪ್ರಶ್ನೆ ಏಳಬಹುದು. ಭಗವಂತನಲ್ಲಿ ದೋಷಗಳಿವೆಯೇ? ಅವನೂ ದೋಷಗಳನ್ನು ಹುಡುಕುತ್ತಾನಲ್ಲ ಎಂದು. ಆದರೆ ಭಗವಂತನು ದೋಷಗಳನ್ನು ಹುಡುಕುತ್ತಾನೆ ಎಂದು ಹೇಗೆ ಹೇಳಬಹುದು? ಅವನು ಒಳಿತನ್ನು ಮಾತ್ರವೇ ಹುಡುಕುತ್ತಾನೆ, ದೋಷಗಳನ್ನೂ ಪಾಪಗಳನ್ನೂ ಅಲ್ಲ. ಅವು ವ್ಯಕ್ತಿಯ ಗುಣಗಳ ಮಟ್ಟವನ್ನು ಅವಲಂಬಿಸಿವೆ. ಭಗವಂತನು ಐಶ್ವರ್ಯ, ಕುಲ, ಗೋತ್ರ, ಸ್ಥಾನಮಾನ ಅಥವಾ ಲಿಂಗವನ್ನು ಪರೀಕ್ಷಿಸುವುದಿಲ್ಲ. ಅವನು ಧರ್ಮಪರತೆಯನ್ನು, ಸದ್ಭಾವವನ್ನು ಮಾತ್ರ ನೋಡುತ್ತಾನೆ. ಸದ್ಭಾವವಿರುವವರನ್ನು ತನ್ನ ಅನುಗ್ರಹಕ್ಕೆ ಅರ್ಹರೆಂದು ಪರಿಗಣಿಸುತ್ತಾನೆ, ಅವರು ಯಾರೇ ಆಗಿರಲಿ, ಏನೇ ಆಗಿರಲಿ.

ಆದ್ದರಿಂದ ಸದ್ಭಾವ, ಒಳ್ಳೆಯತನ ಮತ್ತು ಧರ್ಮಪರತೆಗಳನ್ನು ಬೆಳೆಸಿಕೊಳ್ಳಿರಿ. ಸಂತೋಷ ಮತ್ತು ಪ್ರೇಮಯುತರಾಗಿ ಜೀವಿಸಿರಿ, ವರ್ತಿಸಿರಿ. ಇವೆರಡು ಸಾಕು; ಮೋಕ್ಷವನ್ನು ತಪ್ಪದೆ ಪಡೆಯಬಹುದು.

# ೨೨ ಮಾನವ, ದಾನವ ಗುಣಭೇದಗಳು

ಮಾನವರು ಅಥವಾ ಜನರು ಪ್ರೇಮವನ್ನು ತುಂಬಿಕೊಂಡಿರುತ್ತಾರೆ. ಅವರ ಹೃದಯಗಳು ಕರುಣೆಯ ಚಿಲುಮೆಗಳು. ಅವರಲ್ಲಿ ಸತ್ಯವಾಕ್ಕು ಸಹಜವಾಗಿದೆ. ಶಾಂತಿಯು ಮಾನವ ಮನಸ್ಸಿನ ಸಹಜ ಲಕ್ಷಣ. ಅದು ಅವನ ಮನಸ್ಸಿನ ಮೂಲ ಲಕ್ಷಣ. ಶಾಂತಿಯನ್ನು ಹುಡುಕಿಕೊಂಡು ಎಲ್ಲೆಲ್ಲೋ ಅಲೆದಾಡಬೇಕಾಗಿಲ್ಲ. ಚಿನ್ನ ಬೆಳ್ಳಿ ಭೂಗರ್ಭದಲ್ಲಿ ಹುದುಗಿರುವ ಹಾಗೆ, ಮುತ್ತು ಹವಳಗಳು ಸಮುದ್ರ ತಳದಲ್ಲಿರುವ ಹಾಗೆ, ಶಾಂತಿ ಮತ್ತು ಸಂತೋಷಗಳು ಮನಸ್ಸಿನ ಚಟುವಟಿಕೆಗಳಲ್ಲಿ ಹುದುಗಿವೆ. ಈ ಅಡಗಿರುವ ನಿಧಿಯನ್ನು ಗಳಿಸುವ ಆಸೆಯಿರುವ ವ್ಯಕ್ತಿಯು ಮನಸ್ಸಿನಾಳಕ್ಕೆ ಧುಮುಕಿ, ಮಾನಸಿಕ ಚಟುವಟಿಕೆಗಳನ್ನು ಒಳಮುಖವಾಗಿಸಿದರೆ

ಅವನಲ್ಲಿ ಪ್ರೇಮವು ತುಂಬಿಬರುತ್ತದೆ. ಹಾಗೆ ಪ್ರೇಮವನ್ನು ತುಂಬಿಕೊಂಡಿರುವವರನ್ನು, ಆ ಪ್ರೇಮದ ಬೆಳಕಿನಲ್ಲಿ ಜೀವಿಸುತ್ತಿರುವವರನ್ನು ಮಾತ್ರವೇ ಮನುಷ್ಯರೆಂದು ಕರೆಯಬಹುದು. ಪ್ರೇಮವಿಲ್ಲದವರು ದಾನವರು, ರಾಕ್ಷಸರು, ಕೀಳು ಮಾನವರು. ಪ್ರೇಮದ ಪವಿತ್ರ ಗುಣವು ಪ್ರಕಟವಾಗದೆ ಇರುವುದಿಲ್ಲ. ಅದು ಯಾವಾಗಲೂ ಬದಲಾವಣೆಯಿಲ್ಲದೆ ಇದ್ದೇ ಇರುತ್ತದೆ. ಅದು ಒಂದೇ ಅಖಂಡವಾಗಿರುತ್ತದೆ. ಪ್ರೇಮದಿಂದ ಪರ್ಯಾಪ್ತವಾಗಿರುವವರು ದ್ವೇಷ, ಸ್ವಾರ್ಥ, ಅನ್ಯಾಯ, ದುರ್ಗುಣ, ಕೆಟ್ಟ ನಡವಳಿಕೆಗಳನ್ನು ತೋರಿಸಲು ಅಸಮರ್ಥರಾಗುತ್ತಾರೆ. ಪ್ರೇಮವಿಲ್ಲದವರಲ್ಲಿ ಮೇಲೆ ಹೇಳಿದ ದುರ್ಗುಣಗಳು ಇತರ ಎಲ್ಲಕ್ಕಿಂತ ಪ್ರಧಾನವಾಗಿ ಮೇಲೆ ಇರುತ್ತವೆ. ಪ್ರೇಮವನ್ನು ತುಳಿದು, ಅಲ್ಪವಾದ ಗುಣಗಳನ್ನೇ ಮಹತ್ವದವೆಂದು ಭಾವಿಸುವವರು ದಾನವರು; ಆ ಅಲ್ಪವಾದ ಗುಣಗಳನ್ನು ಒಡನೆಯೇ ಕೊಂದು ನಾಶಪಡಿಸಬೇಕಾದ ಹಾವುಗಳೆಂದು ಭಾವಿಸುವವರು, ಪ್ರೇಮವೊಂದೇ ಪೋಷಿಸಬೇಕಾದ ಗುಣ ಎಂದು ಪರಿಗಣಿಸುವವರು ಮಾನವರು. ದುರ್ಗುಣ ದುರ್ನಡತೆಗಳು ಮಾನವನ ಮಾನವೀಯತೆಯನ್ನು ವಿರೂಪಗೊಳಿಸಿ ಹಾಳುಮಾಡುತ್ತವೆ. ಪ್ರೇಮಾಮೃತವು ತುಂಬಿದ ಹೃದಯಗಳು ಮನುಷ್ಯನಲ್ಲಿರುವ ಅಸಲಿ ಮಾನವನನ್ನು ಸೂಚಿಸುತ್ತವೆ. ಪ್ರೇಮ ಎಂದರೆ, ಅಕಳಂಕ, ನಿಸ್ವಾರ್ಥ, ನಿರ್ಮಲ, ಅವಿರತ ಪ್ರೇಮ.

ಮಾನವನಿಗೂ ದಾನವನಿಗೂ ನಡುವೆ ಮಾ ಮತ್ತು ದಾ ಎಂಬ ಒಂದೇ ಅಕ್ಷರದ ವ್ಯತ್ಯಾಸ! ಮಾ ಮೃದುವಾಗಿದೆ, ಮಧುರವಾಗಿದೆ, ಅಮರತ್ವದ ಸಂಕೇತವಾಗಿದೆ; ದಾ ಎಂಬುದಾದರೋ ನಿರ್ದಯೆ, ವಂಚನೆ, ಸುಡುವಿಕೆಗಳ ಸಂಕೇತ. ಮಾಧುರ್ಯವಿಲ್ಲದವರು, ಅಮೃತತ್ವದ ಹಂಬಲವನ್ನು ದಮನ ಮಾಡಲು ಯತ್ನಿಸುವವರು ಮನುಷ್ಯರೇನು? ಅವರು ಮಾನವ ದೇಹಧಾರಿಗಳಾದರೂ ನಿಜದಲ್ಲಿ ದಾನವರು; ಹೊರ ರೂಪ ಮುಖ್ಯವಲ್ಲ, ನಡತೆ ಮುಖ್ಯ. ದಯೆಯಾಗಲಿ, ಧರ್ಮಪರತೆಯಾಗಲಿ ಇಲ್ಲದೆ, ದಾನವರಾಗಿ ವರ್ತಿಸುವ ಮನುಷ್ಯಾಕಾರದಲ್ಲಿರುವವರನ್ನು ಮಾನವರೆಂದು ಹೇಗೆ ಕರೆಯುವುದು? ಇಲ್ಲ, ಹಾಗೆಂದು ಕರೆಯುವುದು ಸಾಧ್ಯವೇ ಇಲ್ಲ. ನನ್ನ ಉಪನ್ಯಾಸದ ವಾಕ್ಯಗಳು ಜನರ ರೂಪಗಳನ್ನು ಆಧರಿಸಿಲ್ಲ; ಅವರ ಗುಣಗಳನ್ನು ಆಧರಿಸಿವೆ. ಜನರಲ್ಲಿ ದಾನವರೇ ಬಹು ಸಂಖ್ಯೆಯಲ್ಲಿದ್ದಾರೆ! ನೋಡಲು ಇಬ್ಬರೂ ಒಂದೇ ಸಮನಾಗಿ ಕಾಣಿಸುತ್ತಾರೆ, ಆದರೆ ಅವರ ಗುಣಗಳು ಅವರನ್ನು ಮಾನವರು ಮತ್ತು ದಾನವರು ಎಂದು ಬೇರೆ ಬೇರೆಯಾಗಿಸುತ್ತವೆ. ಮಾನವರು ಕರುಣೆ, ಧರ್ಮ, ಪ್ರೇಮ ಮತ್ತು ಸತ್ಯಗಳಿಂದ ತುಂಬಿದ ಕೆಲಸಗಳಲ್ಲಿ ನಿರತರಾಗಿರುತ್ತಾರೆ. ವ್ಯಕ್ತಿಯ ಅಮೃತತ್ವವನ್ನು ಅರಿಯುವ ಮತ್ತು ವ್ಯಕ್ತಪಡಿಸುವ ಸಾಧ್ಯತೆಗೆ ಸಾಕ್ಷಿಯಾಗುತ್ತಾರೆ. ಅವರ ಒಳ್ಳೆಯ ಸ್ವಭಾವವು ಅವರ ಮುಖಗಳಲ್ಲಿ ಆನಂದವಾಗಿ ಮಿನುಗುತ್ತದೆ. ಆದರೆ ಆ ಒಳ್ಳೆಯತನವಿಲ್ಲದೆ ಹೋದರೆ, ಅವರು ಸಂತೋಷದಿಂದ ಕೊಬ್ಬಿದ್ದರೂ ಅವರ ಮುಖವು ಮಾತ್ರ ದಾನವ ವಿನಾಶಕಾರಿ ಬೆಂಕಿಯನ್ನೇ ಸೂಚಿಸುತ್ತದೆ; ಅದರಲ್ಲಿ ಆನಂದದ ಮಾಧುರ್ಯವಿರುವುದಿಲ್ಲ.

# ೨೩ ಇಂದಿನ ವಾಕ್ಕು, ಅಂದಿನ ವಾಕ್ಕೇ

ತ್ರೇತಾಯುಗದಲ್ಲಿ ನಾರದನು ಶ್ರೀರಾಮಚಂದ್ರನನ್ನು ಉದ್ದೇಶಿಸಿ ಅವನ ದಾಸರ ಮತ್ತು ಸಾಧಕರ ಅಥವಾ ಆಧ್ಯಾತ್ಮಿಕ ಅನ್ವೇಷಕರ ಲಕ್ಷಣಗಳೇನೆಂದು ಕೇಳಿದನು. ಅದಕ್ಕೆ ರಾಮಚಂದ್ರನು ಹೀಗೆ ಉತ್ತರ ಕೊಟ್ಟನು:

"ಕೇಳು, ನಾರದ! ನನ್ನ ದಾಸರಾಗಿರುವವರಲ್ಲಿ ಪ್ರೇಮ ತುಂಬಿರುತ್ತದೆ; ಅವರು ಯಾವಾಗಲೂ ಧರ್ಮನಿರತರು; ಅವರು ಸತ್ಯವನ್ನೇ ಆಡುತ್ತಾರೆ. ಅವರ ಹೃದಯಗಳು ಕರುಣೆಯಿಂದ ಕರಗುತ್ತವೆ; ಅವರು ದೋಷರಹಿತರು; ಪಾಪಕೃತ್ಯಗಳನ್ನು ಅವರು ನಿವಾರಿಸುತ್ತಾರೆ; ಅವರ ಸ್ವಭಾವ ಸ್ಥಿರವಾದದ್ದು; ಸಂತೋಷವಾಗಿ ಅವರು ಎಲ್ಲವನ್ನೂ ತ್ಯಾಗ ಮಾಡುತ್ತಾರೆ; ಆಹಾರವನ್ನು ಮಿತವಾಗಿ ಸೇವಿಸುತ್ತಾರೆ; ಇತರರಿಗೆ ಒಳ್ಳೆಯದು ಮಾಡುವುದರಲ್ಲಿ ಅವರು ಸದಾ ನಿರತರು; ಅವರಲ್ಲಿ ಸ್ವಾರ್ಥವಿಲ್ಲ; ಅವರನ್ನು ಸಂದೇಹವು ಕಾಡುವುದಿಲ್ಲ; ಹೊಗಳಿಕೆಗೆ ಅವರು ಕಿವಿಗೊಡುವುದಿಲ್ಲ, ಇತರರಲ್ಲಿರುವ ಒಳ್ಳೆಯ ಸ್ವಭಾವವನ್ನು ಕೊಂಡಾಡಿದರೆ ಅವರಿಗೆ ಅದನ್ನು ಕೇಳಲು ತುಂಬಾ ಆಸಕ್ತಿ. ಅವರಿಗೆ ಸುಂದರವೂ ಪ್ರಬಲವೂ ಪವಿತ್ರವೂ ಆದ ನಡವಳಿಕೆಯಿರುತ್ತದೆ. ಆ ಗುಣಗಳನ್ನು ಸಂಪಾದಿಸಲು ಪ್ರಯತ್ನಿಸುವವರು, ಅಂತಹ ಶೀಲವನ್ನು ಹೊಂದಿರುವವರು ಸಾಧಕರು. ನನಗೆ ಪ್ರಿಯರಾದವರು ಯಾರೆಂದು ಈಗ ಹೇಳುತ್ತೇನೆ. ಯಾರು ಜಪ, ತಪ, ವ್ರತಗಳಲ್ಲಿ ನಿರತರಾಗಿದ್ದಾರೋ ಯಾರು ಸಂಯಮ ನಿಯಮ ಅಥವಾ ಶಿಸ್ತು ಹೊಂದಿರುತ್ತಾರೋ ಯಾರಲ್ಲಿ ಶ್ರದ್ಧೆ, ಸಹನೆ, ಸ್ನೇಹ, ದಯೆ ಮತ್ತು ಸಂತೋಷಗಳೂ ನನ್ನ ಬಗೆಗೆ ಅಮಿಶ್ರಿತವಾದ ಪ್ರೇಮವೂ ಇವೆಯೋ ಅವರು ನನಗೆ ಪರಮ ಪ್ರಿಯರು.

ಈಗ ನನ್ನ ನಿಜವಾದ ಭಕ್ತರ ಬಗೆಗೆ ಹೇಳುತ್ತೇನೆ. ಯಾರಲ್ಲಿ ವಿವೇಕ ವೈರಾಗ್ಯಗಳಿವೆಯೋ ವಿನಯ ವಿಜ್ಞಾನಗಳಿವೆಯೋ ವಿವೇಚನೆ ಮತ್ತು ವಿರಕ್ತಿಗಳಿವೆಯೋ ಅವರು ಸತ್ಯದ ಅರಿವನ್ನು ಉಳ್ಳವರಾಗಿರುತ್ತಾರೆ. ನನ್ನ ಲೀಲೆಗಳನ್ನು ಚಿಂತನ ಮಾಡುವುದರಲ್ಲೇ ಅವರು ನಿರತರಾಗಿರುತ್ತಾರೆ. ಎಲ್ಲ ಕಾಲಗಳಲ್ಲೂ ಎಲ್ಲ ಪರಿಸ್ಥಿತಿಗಳಲ್ಲೂ ಅವರು ನನ್ನ ನಾಮಸ್ಮರಣೆ ಮಾಡುತ್ತಾರೆ. ಯಾರ ತುಟಿಯಿಂದಲೇ ಆಗಲಿ ಭಗವಂತನ ಹೆಸರು ಬಂದಿತೆಂದರೆ ಆನಂದದಿಂದ ಕಣ್ಣೀರು ಹನಿಸುತ್ತಾರೆ, ಪ್ರೇಮವು ತುಂಬಿ ಬರುತ್ತದೆ. ಅವರು ನನ್ನ ನಿಜವಾದ ಭಕ್ತರು."

ಆದ್ದರಿಂದ ಯಾರು ಸಂಪೂರ್ಣವಾದ ನಿರ್ಮಲ ಭಕ್ತಿಯಿಂದ ಪೂಜಿಸುತ್ತಾರೋ ಅವನನ್ನು ಭಗವಂತನು ತಾಯಿಯು ತನ್ನ ಮಗುವನ್ನು ಕಾಪಾಡುವಂತೆ, ಹಸುವು

ತನ್ನ ಕರುವನ್ನು ಅಪಾಯದಿಂದ ರಕ್ಷಿಸುವಂತೆ, ರೆಪ್ಪೆಗಳು ಬಹು ಜಾಗರೂಕತೆಯಿಂದ ಕಣ್ಣುಗಳನ್ನು ಕಾಪಾಡುವಂತೆ, ಅನಾಯಾಸವಾಗಿ ಎಲ್ಲ ಕಾಲಗಳಲ್ಲೂ ಎಲ್ಲ ವಿಧಗಳಿಂದಲೂ ಕಾಪಾಡುತ್ತಾನೆ. ಮಗುವು ಬೆಳೆದು ದೊಡ್ಡವನಾದಾಗ ತಾಯಿಯು ಅವನ ಯೋಗಕ್ಷೇಮದ ಬಗೆಗೆ ಅಷ್ಟಾಗಿ ಗಮನ ಕೊಡದಿದ್ದರೂ ನಡೆಯುತ್ತದೆ. ಹಾಗೆಯೇ ಭಗವಂತನು ಜ್ಞಾನಿಯ ಕಡೆಗೆ ಹೆಚ್ಚು ಗಮನ ಕೊಡುವುದಿಲ್ಲ, ಸಗುಣ ಭಕ್ತನು ಭಗವಂತನ ಎಳೆಯ ಮಗುವಿದ್ದ ಹಾಗೆ. ಅದಕ್ಕೆ ಭಗವಂತನ ಶಕ್ತಿಯಲ್ಲದೆ ಬೇರೆ ಬಲವಿಲ್ಲ. ಜ್ಞಾನಿಗಾದರೆ ಅವನ ಬಲವೇ ಸಾಕು. ಆದ್ದರಿಂದ ವ್ಯಕ್ತಿಯು ತನ್ನ ಸ್ವಂತ ಬಲವನ್ನು ಅವಲಂಬಿಸುವ ಕಾಲವು ಬರುವವರೆಗೆ ಭಗವಂತನಿಗೆ ಎಳೆಯ ಮಗುವಾಗಿರಬೇಕು, ಸಗುಣ ಭಕ್ತನಾಗಿರಬೇಕು. ಸಗುಣ ಭಕ್ತನಾಗದೆ ಯಾರೂ ನಿರ್ಗುಣ ಭಕ್ತನಾಗಲು ಸಾಧ್ಯ ವಿಲ್ಲ. ಆದ್ದರಿಂದ ಭಕ್ತರು ತಾಯಮಡಿಲಲ್ಲಿ ಬೆಳೆಯುವ ಶಿಶುಗಳ ಹಾಗೆ ಬೆಳೆಯಬೇಕು; ಆಮೇಲೆ ಜ್ಞಾನಿಗಳಾಗಿ ತಮ್ಮ ಸ್ವಂತದ ಶಕ್ತಿಯನ್ನು ಅವಲಂಬಿಸಿ ಸ್ವತಂತ್ರರಾಗಬೇಕು. ಆದರೂ ಇಬ್ಬರಿಗೂ ಶಕ್ತಿಯ ಮೂಲ ಒಂದೇ, ಅದು ತಾಯಿ. ಭಕ್ತಿಮಾರ್ಗದ ಈ ರಹಸ್ಯವನ್ನು ಗ್ರಹಿಸಿ ಏಕಾಗ್ರ ಭಕ್ತಿಯನ್ನು ಬೆಳೆಸಿಕೊಂಡು ತಮ್ಮ ನಡವಳಿಕೆಯನ್ನು ಬಲಪಡಿಸಿಕೊಳ್ಳುವವರು ನಿಜವಾಗಿ ಅದೃಷ್ಟಶಾಲಿಗಳು. ಸಕಲವನ್ನೂ ತನಗಿಚ್ಛೆ ಬಂದಂತೆ ಮಾಡಿಸಿಕೊಳ್ಳುವ ಭಗವಂತನ ಮಡಿಲಿನ ಶಿಶುಗಳಾಗಿ ತಮ್ಮನ್ನು ತಾವು ಪರಿವರ್ತಿಸಿಕೊಳ್ಳುವ ಅವರು ನಿಜವಾಗಿ ಸುದೈವಿಗಳು.

ಆದ್ದರಿಂದ ಭಗವಂತನ ದಾಸರಾಗಲು ಭಕ್ತರು, ಪ್ರಿಯರು ಮತ್ತು ಅನನ್ಯ ಭಕ್ತರಾಗಲು ಹಂಬಲಿಸುವವರು ಅದಕ್ಕೆ ತಕ್ಕಂತಹ ಮಾರ್ಗವನ್ನೂ ನಾಮವನ್ನೂ ಸ್ವೀಕರಿಸಿ ಅದಕ್ಕೆ ಹೊಂದುವಂತೆ ನಡೆದುಕೊಳ್ಳಬೇಕು. ಭಕ್ತನು ಮೇಲೆ ಹೇಳಿದ ಭಕ್ತಿ ಲಕ್ಷಣಗಳನ್ನು ಬೆಳೆಸಿ ಕೊಳ್ಳಬೇಕು; ಪ್ರಿಯನು ಭಗವಂತನನ್ನು ಪ್ರೇಮಿಸಬೇಕು; ಅನನ್ಯ ಭಕ್ತನು ಸಂಪೂರ್ಣವಾಗಿ ಅವನಿಗೆ ಶರಣಾಗತನಾಗಬೇಕು. ಕೇವಲ ಓದುವುದರಿಂದ, ನಾಲಗೆಯಿಂದ ಉಚ್ಚರಿಸುತ್ತಿರುವುದರಿಂದ ಏನೂ ಪ್ರಯೋಜನವಿಲ್ಲ. ಆನಂದವು ನಡವಳಿಕೆಯ ಫಲಮಾತ್ರ. ಅದು ಜಾತಿಯನ್ನಾಗಲಿ, ಜನಾಂಗವನ್ನಾಗಲಿ, ಲಿಂಗವನ್ನಾಗಲಿ ಆಧರಿಸಿಲ್ಲ. ಶ್ರೀರಾಮನು ಶಬರಿಯ ಬಳಿಗೆ ಬಂದ ಆ ದಿನಗಳಲ್ಲೂ ಹೀಗೇ ಇತ್ತು. ಶಬರಿಯು ತಾನು ಮೊದಲು ಒಂದೊಂದೇ ಹಣ್ಣನ್ನು ಕಚ್ಚಿ ನೋಡಿ ನಿಜವಾಗಿ ಸಿಹಿಯಾಗಿರುವುದನ್ನು ಮಾತ್ರ ಆರಿಸಿ ರಾಮನಿಗಾಗಿ ಇಡುತ್ತಿದ್ದಳು. ಶ್ರೀರಾಮನು ಅದನ್ನು ಸಂತೋಷದಿಂದ ಸೇವಿಸುತ್ತಿದ್ದಾಗ ಶಬರಿಯು ಅವನನ್ನು ಕೇಳಿದಳು, "ಪ್ರಭು! ನಾನೊಬ್ಬ ಹೆಂಗಸು, ಜೊತೆಗೆ ಮಂದಬುದ್ಧಿಯವಳು. ಎಲ್ಲಕ್ಕಿಂತ ಮಿಗಿಲಾಗಿ ಕೀಳುಜಾತಿಯವಳು. ನಿನ್ನನ್ನು ನಾನು ಹೇಗೆ ತಾನೆ ಸ್ತುತಿಸಲಿ? ನಾನು ಏನು ಮಾಡಬೇಕೆಂದೇ ತಿಳಿಯುತ್ತಿಲ್ಲ." ಆಗ ಶ್ರೀರಾಮನು ಮುಗುಳ್ನಕ್ಕು ಹೇಳಿದನು, "ಶಬರಿ, ನನ್ನ ಧ್ಯೇಯ ಭಕ್ತಿಯ ನಂಟು ಒಂದೇ. ಜಾತಿ ಜನಾಂಗಗಳ ನಂಟು ನನಗಿಲ್ಲ. ಪದವಿಯನ್ನಾಗಲಿ, ಐಶ್ವರ್ಯ ಸೌಶೀಲ್ಯಗಳನ್ನಾ

ಗಲಿ ಹೊಂದಿದ್ದರೇನು ಬಂತು ಭಕ್ತಿಯಿಲ್ಲದೆ ಹೋದರೆ? ಅಂತಹ ಜನರು ಮಳೆಯಿಲ್ಲದ ಮೋಡಗಳು ಸುಮ್ಮನೆ ಆಕಾಶದಲ್ಲಿ ಅಲೆದಾಡುವಂತೆ ಗಾಳಿಯ ಬೀಸುವಿಕೆಗೆ ವಶವಾಗಿರುತ್ತಾರೆ. ಅವರ ಸ್ಥಾನಮಾನ, ಐಶ್ವರ್ಯ, ಅಧಿಕಾರ, ಕೀರ್ತಿಗಳು ಯಾವ ಲೆಕ್ಕಕ್ಕೂ ಬರುವುದಿಲ್ಲ. ಭಕ್ತರು ಒಂಬತ್ತು ಮಾರ್ಗಗಳಿಂದ ನನ್ನ ಬಳಿಗೆ ಬರುತ್ತಾರೆ; ಅವುಗಳಲ್ಲಿ ಯಾವುದೇ ಒಂದು ಅವರನ್ನು ನನ್ನಲ್ಲಿಗೆ ಕರೆತರುತ್ತದೆ." ಆಮೇಲೆ ಶಬರಿಯು ಪ್ರಾರ್ಥನೆ ಮಾಡಿದಳು, ಶ್ರೀರಾಮನು ಅದಕ್ಕೆ ಈ ರೀತಿ ಸ್ಪಂದಿಸಿದನು:

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ
ವಂದನಂ ಅರ್ಚನಂ ದಾಸ್ಯಂ ಸ್ನೇಹಂ ಆತ್ಮನಿವೇದನಂ ।

"ಭಕ್ತನು ಈ ಮಾರ್ಗಗಳಲ್ಲಿ ಯಾವುದೇ ಒಂದನ್ನು ಪ್ರಾಮಾಣಿಕವಾಗಿ ಆಚರಿಸಿದರೆ ಅವನು ಭಗವಂತನನ್ನು ಪಡೆಯಬಹುದು. ಈ ನವವಿಧ ಭಕ್ತಿಗೆ ನಾನು ಕಟ್ಟುಬಿದ್ದಿದ್ದೇನೆ. ಆದ್ದರಿಂದಲೇ ಯೋಗಿಗಳಿಗೂ ಪಡೆಯಲು ಕಷ್ಟವಾದ, ನನ್ನ ದರ್ಶನ, ಸ್ಪರ್ಶನ, ಸಂಭಾಷಣಗಳ ಈ ಅವಕಾಶವನ್ನು ಸುಲಭವಾಗಿ ನೀನು ಪಡೆದಿದ್ದೀಯೆ. ನೀನು ಇಂದು ಜೀವನದ ಉದ್ದೇಶವನ್ನು ಅರ್ಥಮಾಡಿಕೊಂಡಿರುವೆ ನೋಡು, ಇಂದಿನ ಮಾತುಗಳು ನೆನ್ನೆಯ ಕೃತಿಗಳು ಮಾತ್ರ."

# ೨೪ ಭಕ್ತಿಯು ಎರಡು ಬಗೆ

ನವವಿಧ ಭಕ್ತಿಯನ್ನು ಆಚರಿಸುವವರು ಎರಡು ಬಗೆಯಾಗಿದ್ದಾರೆ—ಕಷ್ಟಕರವಾದ ಮಾರ್ಗವನ್ನನುಸರಿಸುವವರು ಹಾಗೂ ಕ್ಷೇಮಕರವೂ ಸುಲಭವೂ ಆದ ದಾರಿಯನ್ನು ಹಿಡಿಯುವವರು. ಇವುಗಳನ್ನು ಕೆಲವೊಮ್ಮೆ ಭಕ್ತಿ ಹಾಗೂ ಪ್ರಪತ್ತಿ ಎಂದು ಕರೆಯುವುದುಂಟು. ಅಂದರೆ ಮರ್ಕಟ ಕಿಶೋರದ ಹಾಗೂ ಮಾರ್ಜಾಲ ಕಿಶೋರದ ವರ್ತನೆಯನ್ನು ಅನುಸರಿಸುವವರು.

ಭಕ್ತಿಯು ಅವಿಚ್ಛಿನ್ನವಾಗಿ, ಏಕಧಾರೆಯಾಗಿ ಇರಬೇಕು, ತೈಲವು ಒಂದು ಪಾತ್ರೆಯಿಂದ ಇನ್ನೊಂದಕ್ಕೆ ಸುರಿಯುವ ಹಾಗೆ. ಭಕ್ತಿಯ ಎರಡೂ ಬಗೆಗಳು ಮೂಲತಃ ಒಂದೇ ಆದರೂ ಆಚರಣೆಗಳು ಬೇರೆ ಬೇರೆ. ಪ್ರೇಮವಿಲ್ಲದೆ ಜಗತ್ತಿನಲ್ಲಿ ಏನನ್ನೂ ಗಳಿಸಲು ಸಾಧ್ಯವಿಲ್ಲ. ಪ್ರೇಮವಿದ್ದಾಗಲೇ ಅನುರಾಗ ಅಥವಾ ಆಸಕ್ತಿಯು ರಕ್ಷಿಸುವ ಅಥವಾ ಪಾಲಿಸುವ ಬಯಕೆಯನ್ನು ಉತ್ಪತ್ತಿ ಮಾಡುತ್ತದೆ. ಮೇಲೆ ಹೇಳಿದ ಎರಡೂ ಬಗೆಗಳಲ್ಲಿ ಪ್ರೇಮವು ಒಂದೇ ಸಮನಾಗಿದೆ, ಸಂದೇಹವಿಲ್ಲ. ಆದರೆ ವಾಸ್ತವ ಅಭಿವ್ಯಕ್ತಿಯಲ್ಲಿ ವ್ಯತ್ಯಾಸವಿದೆ. ಮರ್ಕಟ ಕಿಶೋರ ಮಾರ್ಗದಲ್ಲಿ ಮರಿಯು

ತನ್ನನ್ನು ರಕ್ಷಿಸಿಕೊಳ್ಳಲು ತನ್ನ ಶಕ್ತಿಯನ್ನೇ ಅವಲಂಬಿಸಬೇಕು. ತಾಯಿ ಕೋತಿಯು ಎಲ್ಲಿಗೇ ಬೇಕಾದರೂ ನೆಗೆಯಲಿ, ಅದು ಭದ್ರವಾಗಿ ತಾಯಿಯ ಹೊಟ್ಟೆಯನ್ನು ಅವಚಿ ಹಿಡಿದುಕೊಂಡಿರಬೇಕು, ಹಿಡಿತವನ್ನು ಸಡಿಲಗೊಳಿಸಬಾರದು, ಜೋರಾಗಿ ಎಳೆದರೂ ಹಿಡಿತ ಬಿಡಬಾರದು. ಹಾಗೆಯೇ ಭಕ್ತನೂ ಭಗವಂತನ ಪರೀಕ್ಷೆಗಳನ್ನು ಎದುರಿಸಬೇಕಾಗುತ್ತದೆ. ಎಲ್ಲ ಸಮಯಗಳಲ್ಲೂ ಎಲ್ಲ ಪರಿಸ್ಥಿತಿಗಳಲ್ಲೂ ಭಗವಂತನ ನಾಮವನ್ನೇ ಬಲವಾಗಿ ಹಿಡಿದು, ಅಣುಮಾತ್ರವೂ ಅನಿಚ್ಛೆ ಅಥವಾ ಬೇಸರದ ಕುರುಹು ಕೂಡ ಇಲ್ಲದಂತೆ, ಬಳಲಿಕೆಯೆಂಬುದಿಲ್ಲದಂತೆ, ಜಗತ್ತಿನ ನಿಂದೆ, ಮೂದಲಿಕೆಗಳನ್ನು ಸಹಿಸಿ, ಲಜ್ಜೆ ಸೋಲುಗಳ ಭಾವನೆಗಳನ್ನು ಗೆದ್ದು ಸ್ಥಿರಚಿತ್ತವಾಗಿ ರಬೇಕಾಗುತ್ತದೆ. ಈ ಮಾದರಿಯ ಭಕ್ತಿಗೆ ಭಕ್ತಾಗ್ರಗಣ್ಯ ಪ್ರಹ್ಲಾದನು ಉದಾಹರಣೆ.

ಪ್ರಪತ್ತಿ ಮಾರ್ಗವು ಈ ಬಗೆಯದಲ್ಲ. ಅದು ಬೆಕ್ಕಿನ ಮರಿ ಅಥವಾ ಮಾರ್ಜಾಲ ಕಿಶೋರದ ಹಾಗೆ, ಸರ್ವಭಾರ ಸಮರ್ಪಿತ ಮನೋಭಾವ. ಬೆಕ್ಕಿನ ಮರಿಯು ಒಂದು ಕಡೆ ಕುಳಿತು ಸುಮ್ಮನೆ ಮಿಯಾಂವ್ ಗುಟ್ಟುತ್ತಿರುತ್ತದೆ. ಅದರ ಜವಾಬ್ದಾರಿ ಎಲ್ಲವನ್ನೂ ತಾಯಿಯ ಮೇಲೆ ಹಾಕಿ ಬಿಡುತ್ತದೆ. ಹಾಗೆಯೇ ಭಕ್ತನು ಸಂಪೂರ್ಣ ವಿಶ್ವಾಸವನ್ನು ಭಗವಂತನ ಮೇಲಿರಿಸುತ್ತಾನೆ. ತಾಯಿ ಬೆಕ್ಕು ಅದನ್ನು ಬಾಯಲ್ಲಿ ಹಿಡಿದುಕೊಂಡು ಉತ್ತಮವಾದ ಸ್ಥಳಕ್ಕೆ, ಎಂಥ ಕಿರಿದಾದ ಸಂದಿಗಳಲ್ಲೂ ಕರೆ ದೊಯ್ಯುತ್ತದೆ. ಹಾಗೆಯೇ ಭಕ್ತನು ತನ್ನೆಲ್ಲ ಜವಾಬ್ದಾರಿಯನ್ನು ಭಗವಂತನ ಮೇಲಿರಿಸಿ ಅವನ ಇಚ್ಛೆಗೆ ಸಂಪೂರ್ಣವಾಗಿ ಶರಣಾಗತನಾಗುತ್ತಾನೆ. ಈ ಭಕ್ತಿ ಮಾರ್ಗಕ್ಕೆ ಲಕ್ಷ್ಮಣನು ಉದಾಹರಣೆ.

ಪ್ರಪತ್ತಿ ಸಾಧನೆಯು ಭಕ್ತಿ ಸಾಧನೆಗಿಂತ ಬಹು ಮೇಲು ಮಟ್ಟದ್ದು. ಪ್ರಪತ್ತಿಯ ಲಕ್ಷಣವು ಸಂಪೂರ್ಣವಾಗಿ ಎಲ್ಲ ಅಂಶಗಳಿಂದಲೂ ಶರಣಾಗತಿ. ಶ್ರೀರಾಮನ ಸೇವೆ ಮಾಡಲು ಲಕ್ಷ್ಮಣನು ಹೆಂಡತಿ, ತಾಯಿ, ಐಸಿರಿ, ಅರಮನೆ ಎಲ್ಲವನ್ನೂ ಕೊನೆಗೆ ನಿದ್ರೆ ಮತ್ತು ಆಹಾರಗಳನ್ನೂ ತ್ಯಾಗ ಮಾಡಿದನು. ಇದು ಒಂದು ದಿನಕ್ಕಲ್ಲ, ತಿಂಗಳಿಗಲ್ಲ, ವರ್ಷಕ್ಕಲ್ಲ, ಪೂರ್ತಿ ಹದಿನಾಲ್ಕು ವರ್ಷಗಳವರೆಗೆ ಶ್ರೀರಾಮನೇ ತನ್ನ ಸಂತೋಷ ದುಃಖ ಸರ್ವಸ್ವವೂ ಎಂದು ಅವನು ಭಾವಿಸಿದನು. ತನಗೆ ಅಗತ್ಯವಾದ ಸಕಲವನ್ನೂ ರಾಮನು ನೀಡುತ್ತಾನೆ. ತನ್ನ ಜೀವಿತದ ಉದ್ದೇಶ ಕೇವಲ ಅವನನ್ನು ಹಿಂಬಾಲಿಸುವುದು, ಅವನ ಸೇವೆ ಮಾಡುವುದು, ತನ್ನ ಇಚ್ಛೆಯನ್ನು ಸಂಪೂರ್ಣವಾಗಿ ಅವನಿಗೆ ಅರ್ಪಿಸುವುದು ಎಂದು ಭಾವಿಸಿ ಹಾಗೇ ನಡೆದುಕೊಂಡನು. ಆದ್ದರಿಂದ ಎಲ್ಲ ಭಾರವನ್ನೂ ಭಗವಂತನ ಮೇಲೆ ಇರಿಸಿ ಸದಾ ಅವನನ್ನೇ ಅನುಸರಿಸುತ್ತಿದ್ದರೆ ಅವನು ಸಮಸ್ತವನ್ನೂ ಅನುಗ್ರಹಿಸುತ್ತಾನೆ. ಇದೇ ಭಕ್ತಿಯ ಪ್ರಪತ್ತಿ ಮಾರ್ಗದ ಸ್ವರೂಪ.

# ೨೫ ವಾನಪ್ರಸ್ಥ

ಗೃಹಸ್ಥನಾಗಿ ಜೀವನದ ನೋವು ನಲಿವುಗಳನ್ನು ಅನುಭವಿಸಿ ಅವುಗಳ ನಿಜವಾದ ಸ್ಥಾನವೇನೆಂಬುದನ್ನು ಅರಿತು, ತನ್ನ ೪೫–೫೦ನೇ ವಯಸ್ಸಿನಲ್ಲಿ ಎಲ್ಲವನ್ನೂ ತೊರೆದು ಅರಣ್ಯಕ್ಕೆ ಹೋಗಬೇಕು. ತಾನು ಕಟ್ಟಿದ ಮನೆ, ತಾನು ವಾಸವಾಗಿದ್ದ ಸ್ಥಳ ಎಲ್ಲವನ್ನೂ ತೊರೆಯಬೇಕು. ಅವನ ಪತ್ನಿಯೇನಾದರೂ ಬದುಕಿದ್ದರೆ, ಅವಳ ಅನುಮತಿಯನ್ನು ಪಡೆದುಕೊಂಡು ಅವಳ ಯೋಗಕ್ಷೇಮದ ಹೊಣೆಯನ್ನು ಮಗನಿಗೋ ಇಲ್ಲವೆ ಆಕೆಯ ತಂದೆ ತಾಯಿಯರಿಗೋ ವಹಿಸಬೇಕು. ಇದಾವುದೂ ಆಗದಿದ್ದ ಪಕ್ಷದಲ್ಲಿ ಆಕೆಯನ್ನು ತನ್ನ ಜೊತೆಯಲ್ಲಿ ಕರೆದೊಯ್ಯಬೇಕು ಮತ್ತು ಅಲ್ಲಿಂದ ಮುಂದೆ ಪೂರ್ಣ ಬ್ರಹ್ಮಚರ್ಯವನ್ನು ಪಾಲಿಸುತ್ತಾ ಆಕೆಯ ಸಹೋದರ ನಂತೆ ವರ್ತಿಸಬೇಕು. ಆಹಾರದಲ್ಲೂ ತುಂಬಾ ವ್ಯತ್ಯಾಸವಾಗುತ್ತದೆ. ಕಾಡಿನಲ್ಲಿ ದೊರಕುವ ಗೆಡ್ಡೆಗೆಣಸು ಹಣ್ಣುಗಳನ್ನೂ ತಿಂದು ಹಾಲನ್ನು ಮಾತ್ರವೇ ಕುಡಿಯ ಬೇಕು. ಆಹಾರವನ್ನು ಪೂರ್ತಿಯಾಗಿ ಬೇಯಿಸಬಾರದು, ಕೇವಲ ಮೂರನೆ ಒಂದರಷ್ಟು ಮಾತ್ರ ಬೇಯಿಸಬೇಕು. ಹೆಚ್ಚು ಪ್ರಮಾಣದಲ್ಲಿ ಅಕ್ಕಿಯನ್ನು ಉಪಯೋ ಗಿಸಬಾರದು. ಈ ರೀತಿಯಾಗಿ ಆಹಾರ ವ್ಯವಸ್ಥೆ ಮಾಡಿಕೊಳ್ಳಲು ಸಾಧ್ಯವಾಗದೆ ಹೋದರೆ, ಸಮೀಪದ ಹಳ್ಳಿಗೆ ಹೋಗಿ ಭಿಕ್ಷೆ ಬೇಡಬೇಕು. ಆದರೆ ಭಿಕ್ಷೆ ಬೇಡಿ ದೊರೆತುದನ್ನು ಕಾಡಿಗೆ ತಂದು ತಾನು ವಾಸವಾಗಿರುವೆಡೆಯಲ್ಲೇ ತಿನ್ನಬೇಕು. ತನ್ನನ್ನು ಅವಲಂಬಿಸಿರುವವರಿಗೂ ತಾನು ಸೇವಿಸುವ ಆಹಾರವನ್ನೇ ನೀಡಬೇಕು. ಏಕೆಂದರೆ ಅವರು ತಮಗೆ ಇಷ್ಟವಾದ ಆಹಾರವನ್ನು ತಯಾರಿಸಿಕೊಳ್ಳಲಾರರು ಅಥವಾ ಅದು ದೊರಕುವಂತೆ ಮಾಡಿಕೊಳ್ಳಲಾರರು. ಅವರಿಗೆ ಅದು ರುಚಿಸದೆ ಹೋದರೆ ಕೇವಲ ಹಾಲು ಹಣ್ಣುಗಳಿಂದಲೇ ತೃಪ್ತಿಪಡಬೇಕು. ಏಕೆಂದರೆ ಅವನು ಇತರರನ್ನು ತೃಪ್ತಿಪಡಿಸುವುದಕ್ಕಾಗಿ ತನ್ನ ದೈನಂದಿನ ಕ್ರಮವನ್ನು ಬದಲಾಯಿಸ ಕೂಡದು. ಅದೆಷ್ಟೇ ಕಷ್ಟವಾದರೂ ಈ ಸಾಧನೆಯನ್ನು ಬದಲಾಯಿಸಬಾರದು ಅಥವಾ ಕೈಬಿಡಬಾರದು. ಇದನ್ನು ಚೆನ್ನಾಗಿ ಗಮನಿಸಬೇಕು. ಅವನು ಯಾವುದೇ ಪೂಜೆ ಮಾಡಬೇಕಿಲ್ಲ, ದಾನ ಧರ್ಮ ನೀಡಬೇಕಾಗಿಲ್ಲ. ಅಂತಹ ಯಾವುದೇ ಕರ್ತವ್ಯವನ್ನು ನಿರ್ವಹಿಸಬೇಕಾಗಿಲ್ಲ. ಒಂದು ವೇಳೆ ಅವನು ಆಹಾರವನ್ನೋ ಬೇರೆ ಯಾವುದಾದರೂ ವಸ್ತುವನ್ನೋ ಇತರರಿಗೆ ಕೊಟ್ಟರೂ ಅದನ್ನು ದಾನ ಎಂದು ಪರಿಗಣಿಸಬಾರದು. ಅವನು ಇತರರಿಂದ ದಾನವನ್ನು ಸ್ವೀಕರಿಸುವಂತೆಯೂ ಇಲ್ಲ. ಎಲ್ಲರ ಬಗೆಗೂ ಅವನು ಸಮಾನವಾದ ಪ್ರೇಮವನ್ನು ಹೊಂದಿರಬೇಕು. ವರ್ಷಕ್ಕೊಮ್ಮೆ ಹಳೆಯ ಬಟ್ಟೆಗಳನ್ನು ತ್ಯಜಿಸಿ ಆಶ್ವಯುಜ ಮಾಸದಲ್ಲಿ ಹೊಸ ಬಟ್ಟೆಗಳನ್ನು ಧರಿಸಬೇಕು. ವಾನಪ್ರಸ್ಥನು ಆಚರಿಸ ಬೇಕಾದ ವ್ರತಗಳಲ್ಲಿ ಅತ್ಯಂತ ಮುಖ್ಯವಾದದ್ದು ಚಾಂದ್ರಾಯಣ ವ್ರತ. ತಿಂಗಳಲ್ಲಿ ಮೊದಲು ಹದಿನೈದು ದಿನ ಒಂದೊಂದು ತುತ್ತು ಕಡಿಮೆ ಮಾಡಿ ತಿನ್ನುತ್ತಾ ಹೋಗಬೇಕು. ಆಮೇಲಿನ

ಹದಿನೈದು ದಿನ ಒಂದೊಂದು ತುತ್ತು ಹೆಚ್ಚು ಮಾಡಬೇಕು. ಅಮಾವಾಸ್ಯೆ ಮತ್ತು ಹುಣ್ಣಿಮೆಗಳಂದು ಕೇವಲ ಗಂಜಿಯನ್ನು ಸೇವಿಸಬೇಕು. ಮಳೆಗಾಲದಲ್ಲಿ ಅವನು ಸುರಿಮಳೆಯಲ್ಲಿ ನಿಂತು ತಪಸ್ಸು ಮಾಡಬೇಕು; ಚಳಿಗಾಲದಲ್ಲಿ ಒದ್ದೆ ಬಟ್ಟೆಯಲ್ಲಿ ಕುಳಿತು ತಪಸ್ಸು ಮಾಡಬೇಕು. ಹೀಗೆ ನಿಯಮಬದ್ಧವಾಗಿ ತಪಸ್ಸು ಮಾಡುವಾಗ ದಿನಕ್ಕೆ ಮೂರು ಸಾರಿ ಸ್ನಾನ ಮಾಡಬೇಕು, ವಿವಿಧ ಉಪನಿಷದ್ವಾಕ್ಯಗಳನ್ನು ಅಧ್ಯಯನ ಮಾಡುತ್ತಾ ಅವುಗಳ ಅರ್ಥವನ್ನು ಅರಿತು, ಅನುಭವಕ್ಕೆ ತಂದುಕೊಳ್ಳ ಬೇಕು. ಇಂತಹ ವಾನಪ್ರಸ್ಥನು ಕಾಯಿಲೆ ಮಲಗಿದರೆ ಆಹಾರವನ್ನು ನಿಲ್ಲಿಸಿ, ಬರಿ ಗಾಳಿ ಮತ್ತು ನೀರುಗಳನ್ನಷ್ಟೆ ಸೇವಿಸಬೇಕು. ದೇಹ ತ್ಯಾಗ ಮಾಡುವವರೆಗೂ ಈಶಾನ್ಯ ದಿಕ್ಕಿಗೆ ನಡೆಯುತ್ತಲೇ ಹೋಗಬೇಕು. ಹಾಗಲ್ಲದೆ, ದೈಹಿಕ ವ್ಯಾಧಿ ಯಾವುದೂ ಇಲ್ಲದೆ ಅವನು ಆರೋಗ್ಯವಾಗಿದ್ದರೆ, ಮೇಲೆ ಹೇಳಿದ ಸಾಧನೆಗಳನ್ನು ನಡೆಸುತ್ತಿದ್ದರೆ ಅವನಿಗೆ ಜ್ಞಾನೋದಯವಾಗುತ್ತದೆ. ಈ ಜ್ಞಾನದ ಮೂಲಕವಾಗಿ ಅವನು ಮೋಕ್ಷವನ್ನು ಪಡೆಯುತ್ತಾನೆ.

ಈ ಸಾಧನೆಯಿಂದ ಹೇಗೆ ಜ್ಞಾನೋದಯವಾಗುತ್ತದೆ ಎಂದು ಕೆಲವರು ವಾದ ಮಾಡಬಹುದು. ಇವೆಲ್ಲ ಕೇವಲ ದೇಹದ ಸೀಮಿತಗಳಲ್ಲವೆ ಎಂದು ಅವರು ಕೇಳಬಹುದು. ತತ್ವವನ್ನು ಅರ್ಥಮಾಡಿಕೊಂಡಾಗ ಮಾತ್ರವೇ ಜ್ಞಾನವು ಉದಿಸು ವುದು. ಆತ್ಮಸಾಕ್ಷಾತ್ಕಾರದ ಭರವಸೆ ಕೊಡುವ ಯಾವುದೇ ತತ್ವವು ಇಲ್ಲದ ಒಂದು ವಸ್ತುವನ್ನು ಜ್ಞಾನ ಎಂದು ಹೇಗೆ ತಾನೆ ಕರೆಯಬಹುದು ಎಂದು ಅವರು ವಾದಿಸುತ್ತಾರೆ. ಆದರೆ ಒಂದು ದೊಡ್ಡ ತಪ್ಪು ಭಾವನೆ ಅದಕ್ಕೆ ಆಧಾರವಾಗಿದೆ. ಈ ಎಲ್ಲ ದೈಹಿಕ ಸಾಧನೆಗಳಿಂದ ವಾಸನೆಗಳು ನಾಶವಾಗುತ್ತವೆ, ಏಕಾಗ್ರತೆಯು ಸ್ಥಾಪಿತವಾಗುತ್ತದೆ. ಉಪನಿಷದ್ವಾಕ್ಯಗಳು ಈ ಏಕಾಗ್ರತೆಯನ್ನು ಬೆಳೆಸುತ್ತವೆ, ಬಲ ಪಡಿಸುತ್ತವೆ. ಉಪನಿಷತ್ತುಗಳೇ ಜ್ಞಾನವಲ್ಲವೇ? ಆ ಜ್ಞಾನಸ್ವರೂಪವನ್ನು ಸಂಗಾತಿ ಯಾಗಿ ಇರಿಸಿಕೊಂಡು, ತನ್ನ ಅನುಭವದಲ್ಲೇ ಅದನ್ನು ಸಾಕ್ಷಾತ್ಕರಿಸಿಕೊಂಡು, ಬೇರೆಲ್ಲೋ ಜ್ಞಾನವನ್ನು ಅರಸುವುದರ ಅಗತ್ಯವೇನಿದೆ? ಜ್ಞಾನವನ್ನು ಹೃದಯದಲ್ಲಿ ಸ್ಥಿರವಾಗಿ ಸ್ಥಾಪಿಸಲು ಏಕಾಗ್ರತೆ ಆವಶ್ಯಕ. ಮೇಲೆ ಹೇಳಿದ ತಪಸ್ಸು ಮೊದಲಾದ ದೈಹಿಕ ಸಾಧನೆಗಳಿಂದ ಸುಲಭವಾಗಿ ಪಡೆಯಬಹುದು. ಹೊರಗಿನ ನಿಯಂತ್ರಣವು ಅನೇಕ ವಿಧಗಳಿಂದ ಒಳಗಿನ ನಿಯಂತ್ರಣಕ್ಕೆ ಸಹಾಯ ಮಾಡುತ್ತದೆ. ಹಾಗೆ ಹೋಲಿಸಿ ನೋಡಿದರೆ ಅಂತರಂಗದ ನಿಯಂತ್ರಣಕ್ಕಿಂತ ಬಹಿರಂಗದ ನಿಯಂತ್ರಣ ಕಷ್ಟಕರವಾದದ್ದು. ಸ್ಟೀರಿಂಗ್ ಚಕ್ರವನ್ನು ಕೈಯಲ್ಲಿ ಹಿಡಿದು ಕಾರು ನಡೆಸುವವನು ಯಾವ ದಿಕ್ಕಿಗೆ ಅದನ್ನು ತಿರುಗಿಸಿದರೂ ಅದು ಅವನ ಕೈಯಲ್ಲಿ ಇಲ್ಲದ ಕಾರಿನ ಚಕ್ರಗಳು ಅದೇ ದಿಕ್ಕಿಗೆ ತಿರುಗುವಂತೆ ಮಾಡುತ್ತದೆ. ಸ್ಟೀರಿಂಗ್ ಚಕ್ರವು ಒಂದು ದಿಕ್ಕಿಗೆ ತಿರುಗುತ್ತಾ ಕಾರಿನ ಚಕ್ರಗಳು ಬೇರೆ ದಿಕ್ಕಿಗೆ ತಿರುಗಲು ಸಾಧ್ಯವಿಲ್ಲ. ಅಂತರ್ಮುಖವಾದ ಚಕ್ರಗಳು ಬಹಿರ್ಮುಖ ಸ್ಟೀರಿಂಗ್ ಚಕ್ರವನ್ನು ಅವಲಂಬಿಸಿ ರುತ್ತವೆ.

ಅದು ಸಹಜವಾದ ಆಧಾರ. ಕೆಲವೊಮ್ಮೆ ಸ್ಟೀರಿಂಗ್ ಒಂದು ದಿಕ್ಕಿಗೆ ತಿರುಗುತ್ತಿರಲು ಚಕ್ರಗಳು ಕಾರನ್ನು ಬೇರೆ ಕಡೆಗೆ ಎಳೆದುಕೊಂಡು ಹೋಗುವುದುಂಟು. ಸಹಜ ಲಕ್ಷಣವನ್ನು ತೊರೆಯುವುದೇ ಇದಕ್ಕೆ ಕಾರಣ. ಒಳಗಿನ ಚಕ್ರಗಳಲ್ಲಿ ನಿಜವಾದ ಸತ್ವವಾದ ಗಾಳಿಯಿಲ್ಲದೆ ಹೋದರೆ, ಅವು ಸ್ಟೀರಿಂಗ್ ಚಕ್ರದೊಂದಿಗೆ ತಮಗೆ ಯಾವ ಸಂಬಂಧವೂ ಇಲ್ಲದಂತೆ ವರ್ತಿಸಬಹುದು.

ಆದರೆ ಅವು ಸ್ಟೀರಿಂಗ್ ಚಕ್ರದ ಮಿತಿಗಳಿಂದಾಚೆಗೆ ಹೋಗಲಾರವು. ಕೈಯಲ್ಲಿರುವ ಸ್ಟೀರಿಂಗ್ ಚಕ್ರವು ಕೆಳಗಿರುವ ಚಕ್ರಗಳೊಂದಿಗೆ ಸಂಬಂಧಪಟ್ಟಿದೆ. ಅಂಥ ಸಂಬಂಧ ವಿರದಿದ್ದರೆ ಪ್ರಯಾಣವೇ ಅಸಾಧ್ಯವಾಗುತ್ತಿತ್ತು. ಸಂಬಂಧ ಅನಿವಾರ್ಯ. ಆದ್ದ ರಿಂದ ಹೊರಪ್ರವೃತ್ತಿಗಳೊಂದಿಗೆ ಹೋರಾಡಿ ಅವುಗಳನ್ನು ಗೆದ್ದಿರುವವನಿಗೆ ಆಂತ ರಿಕ ಪ್ರವೃತ್ತಿಗಳು ಸುಲಭವಾಗಿ ಹತೋಟಿಗೆ ಸಿಕ್ಕುತ್ತವೆ. ಹೊರಪ್ರವೃತ್ತಿಗಳಿಗೆ ನಾಮ ಮತ್ತು ರೂಪಗಳಿವೆ, ಅನುಭವದ ವಿಷಯಗಳಾಗಿ ಆಕರ್ಷಿತವಾಗುತ್ತವೆ. ಆದ್ದ ರಿಂದ ಅವುಗಳನ್ನು ಗೆಲ್ಲುವುದು ಸ್ವಲ್ಪ ಕಷ್ಟದ ವಿಷಯ. ಆಂತರಿಕ ಪ್ರವೃತ್ತಿಗಳಿಗೆ ಹೆಸರಿರಬಹುದು, ಆದರೆ ರೂಪವಿಲ್ಲ. ಅವು ಕೂಡ ಆನಂದವಾಗಿ ಅನುಭವಕ್ಕೆ ಬರಬಹುದು. ಆದ್ದರಿಂದ ಅವುಗಳನ್ನು ಸುಲಭವಾಗಿ ಗೆಲ್ಲಬಹುದು; ಹೆಚ್ಚು ಸುಲಭವಾಗಿ ಅವನ್ನು ಪಳಗಿಸಬಹುದು. ತೊಂದರೆ ಏನಿದ್ದರೂ ಬಾಹ್ಯ ನಡವಳಿಕೆ ಮತ್ತು ವರ್ತನೆಯ ಕಡೆಗೆ. ಇವು ರುಚಿ, ರೂಪ ಮತ್ತು ಭಾರಗಳೊಂದಿಗೆ ಸಂಬಂಧಿಸಿವೆ. ಆಂತರಿಕ ಪ್ರವೃತ್ತಿಗಳಿಗಾದರೆ ರೂಪವಿಲ್ಲ, ರುಚಿಯಿಲ್ಲ ಮತ್ತು ಭಾರವಿಲ್ಲ. ಶುದ್ಧವಾದ ನೀರಿಗೆ ರೂಪವಾಗಲಿ ರುಚಿಯಾಗಲಿ ಇಲ್ಲ. ಅಶುದ್ಧವಾದ ನೀರು ಈ ಎಲ್ಲ ಅಂಶಗಳಲ್ಲೂ ಭಿನ್ನವಾದದ್ದು. ಆದ್ದರಿಂದ ಅಶುದ್ಧವಾದ ನೀರನ್ನು ಶುದ್ಧೀಕರಿಸುವುದು ನಿಜವಾದ ಕಷ್ಟ; ಆದರೆ ಶುದ್ಧ ಜಲಕ್ಕೆ ಅಗತ್ಯವಾದ ಯಾವ ರೂಪವನ್ನು ಬೇಕಾದರೂ ಬಹು ಸುಲಭವಾಗಿ ಕೊಡಬಹುದು.

ಅದೇ ರೀತಿಯಲ್ಲಿ ಮಾನಸಿಕ ನಡವಳಿಕೆಯನ್ನು ಶುದ್ಧಗೊಳಿಸುವುದೇ ನಿಜವಾಗಿ ಕಷ್ಟ. ಅದು ಜಗತ್ತಿನ ಭ್ರಮೆಗಳಿಂದ ಹಾಳಾಗಿರುತ್ತದೆ. ಅಂತಹ ಭ್ರಮೆಗಳಿಂದ ಮುಕ್ತವಾದ ಮಾನಸಿಕ ವರ್ತನೆಯನ್ನು ಸರಿಪಡಿಸಬೇಕಾದ ಅಗತ್ಯವೇ ಬರುವು ದಿಲ್ಲ. ಭ್ರಮರಹಿತ ವರ್ತನೆ ಅಗತ್ಯವಾಗಿ ಶುದ್ಧವಾಗಿರುತ್ತದೆ. ಅದರಲ್ಲಿ ದೋಷ ಮತ್ತು ಸಂದೇಹದ ಯಾವ ಕುರುಹೂ ಉಳಿದಿರುವುದಿಲ್ಲ. ಅದನ್ನು ಸರಿಪಡಿಸುವು ದೇಕೆ? ಆದ್ದರಿಂದ ಮೊದಲು ಬಾಹ್ಯ ಭ್ರಮೆಯನ್ನು ಎಷ್ಟು ಸಾಧ್ಯವೋ ಅಷ್ಟು ಮಟ್ಟಿಗೆ ನಿಯಂತ್ರಿಸಿ, ಗೆದ್ದುಬಿಟ್ಟರೆ ಆಂತರಿಕ ಪ್ರವೃತ್ತಿಗಳು ಮತ್ತು ಭ್ರಮೆಗಳು ಆತ್ಮಾನಂದದ ದಾರಿಯಲ್ಲಿ ಸುಲಭವಾಗಿ ಸರಾಗವಾಗಿ ಚಲಿಸತೊಡಗುತ್ತವೆ. ಯೋಗ ಮತ್ತು ತಪಸ್ಸು ಎನ್ನುವುದು ಬಾಹ್ಯ ಪ್ರವೃತ್ತಿಗಳು ಮತ್ತು ಭ್ರಮೆಗಳ ನಿಯಂತ್ರಣ ಹಾಗೂ ಗೆಲುವುಗಳಿಗೆ ಕೊಟ್ಟ ಇನ್ನೊಂದು ಹೆಸರು ಮಾತ್ರ. ವಾನಪ್ರಸ್ಥನಿಗೆ ವಿಧಿಸಿರುವ ನಿಯಮಗಳು ಈ ಯೋಗ ಅಥವಾ ತಪಸ್ಸಿನಲ್ಲಿ

ಗೆಲುವು ಪಡೆಯಲು ಹೇಳಿರುವ ಮಾರ್ಗಗಳು. ವಾನಪ್ರಸ್ಥ ಹಂತದಲ್ಲಿ ಮನುಷ್ಯನು ಹಲವು ಬಗೆಯಾಗಿರುವ ಭ್ರಮೆಗಳೆಲ್ಲವನ್ನೂ ದಮನ ಮಾಡಿ ಗೆದ್ದುದೇ ಆದರೆ ಪ್ರಯಾಣವು ಮೋಕ್ಷದಲ್ಲಿ ಕೊನೆಗೊಳ್ಳುತ್ತದೆ. ಆದರೆ ಮೋಕ್ಷವನ್ನು ಪಡೆಯಲು ಇದೊಂದೇ ದಾರಿಯೆಂದು ನಾನು ಹೇಳುವುದು ಸಾಧ್ಯವಿಲ್ಲ. ಭಗವತ್ಕೃಪೆಯನ್ನು ಯಾವ ಮಾರ್ಗದಿಂದ ಗಳಿಸಬಹುದೋ ಆ ಮಾರ್ಗವನ್ನು ಆಯ್ಕೆ ಮಾಡಿ ಕೊಳ್ಳಬೇಕು. ವಾನಪ್ರಸ್ಥದ ಈ ನಿಯಮ ನಿಬಂಧನೆಗಳನ್ನು ಆಚರಿಸುವುದ ರಿಂದ ಮೋಕ್ಷವನ್ನು ಪಡೆಯಬಹುದು. ಅದು ವ್ಯಕ್ತಿಯನ್ನು ಭ್ರಮೆಯಿಂದಲೂ ಮುಕ್ತನನ್ನಾಗಿ ಮಾಡುತ್ತದೆ, ಏಕಾಗ್ರತೆಯನ್ನೂ ನೀಡುತ್ತದೆ.

## ೨೬ ಮುಕ್ತಿಯು ನಾಲ್ಕು ಬಗೆ

ಪ್ರಜ್ಞೆಯ ಸ್ಥಿರತೆ, ಭಾವನೆಯ ಪರಿಶುದ್ಧಿ, ಎಲ್ಲಾ ಬಗೆಯ ಬಹಿರಂಗ ಆಲೋಚನೆಗಳ ಬಿಡುಗಡೆ ಇವುಗಳಿಂದ ಮಾಡುವ ಪೂಜೆಯು ಭಾವ ಸಮಾಧಿಯಾಗುತ್ತದೆ. ಈ ಭಾವ ಸಮಾಧಿಯ ಫಲವಾಗಿ ಭಗವಂತನು ಭಕ್ತನ ಒಳಗಣ್ಣಿನೆದುರು ಅವನು ಪೂಜೆಗೆ ಆರಿಸಿಕೊಂಡ ರೂಪದಲ್ಲಿ ಮೈದೋರುತ್ತಾನೆ. ದೃಷ್ಟಿಯು ಕಲ್ಪನೆಯ ವಿಷಯವಲ್ಲ; ಅದೊಂದು 'ಮುಖ' ಅನುಭವ. ಸ್ಥಳದ ವ್ಯತ್ಯಾಸವಿಲ್ಲದೆ ಅವನು ಭಗವಂತನ ಸನ್ನಿಧಿಯನ್ನು ಪಡೆಯಬಹುದು, ತಾನಿರುವಲ್ಲಿಯೇ. ಇದನ್ನು ಸಾಲೋಕ್ಯ ಮುಕ್ತಿ ಎಂದು ಕರೆಯಲಾಗುತ್ತದೆ. ಸಾಲೋಕ್ಯ ಮುಕ್ತಿಯಲ್ಲಿನಂತೆ ಸದಾ ಭಗವಂತನೊಂದಿಗೆ ಇರುವುದರ ಜೊತೆಗೆ ಭಕ್ತರು ತಾವು ನೋಡುವುದೆಲ್ಲವನ್ನೂ ಭಗವಂತನ ಮಹಿಮೆಯಾಗಿ ಅರಿತುಕೊಳ್ಳುತ್ತಾರೆ. ಈ ಅನುಭವವನ್ನು ಸಾಮೀಪ್ಯ ಮುಕ್ತಿಯೆಂದು ಹೆಸರಿಸಲಾಗುತ್ತದೆ. ಸದಾ ಭಗವಂತನೊಂದಿಗೇ ಇದ್ದು, ಎಲ್ಲೆಲ್ಲೂ ಸದಾ ಭಗವನ್ಮಹಿಮೆಯನ್ನೇ ಕಾಣುತ್ತಿರುತ್ತಾ ಭಗವತ್ ಪ್ರಜ್ಞೆ ತುಂಬಿರುವ ಸ್ಥಿತಿ ಯನ್ನು ಸಾರೂಪ್ಯ ಮುಕ್ತಿ ಎಂದು ಕರೆಯುತ್ತಾರೆ. ಇದೇ ಭಕ್ತಿಶಾಸ್ತ್ರದ ಅಂತಿಮ ಫಲ. ಆದರೆ ಈ ಹಂತದಲ್ಲೂ ಭಿನ್ನತಾ ಭಾವನೆಯ ಕುರುಹು ಉಳಿದಿರುತ್ತದೆ. ಆದ್ದ ರಿಂದ ಅದ್ವೈತ ಸಿದ್ಧಾಂತವು ಇದನ್ನು ಅತ್ಯುನ್ನತ ಸ್ಥಿತಿಯೆಂದು ಒಪ್ಪಿಕೊಳ್ಳುವುದಿಲ್ಲ. ಭಕ್ತನು ಸಾರೂಪ್ಯವನ್ನು ಅಂದರೆ, ಭಗವಂತನದೇ ರೂಪವನ್ನು ಹೊಂದಿದ್ದಾನೆಂದ ಮಾತ್ರಕ್ಕೆ ಭಗವಂತನಿಗಿರುವ ಸೃಷ್ಟಿ ಸ್ಥಿತಿ ಲಯ ಶಕ್ತಿಗಳು ಅವನಲ್ಲಿವೆ ಎಂದು ನಾವು ಭಾವಿಸಲು ಸಾಧ್ಯವಿಲ್ಲ. ವ್ಯತ್ಯಾಸದ ಎಲ್ಲಾ ಕುರುಹುಗಳೂ ಮಾಯವಾದಾಗ, ಐಕ್ಯತೆಯು ಸಾಧಿತವಾದಾಗ ಮಟ್ಟಿಗೆ ಅತ್ಯುನ್ನತ ಹಂತವನ್ನು ತಲುಪಿದಂತಾಗುತ್ತದೆ. ಇದೇ ಸಾಯುಜ್ಯ. ಒಂದೊಂದರ ಸಾಧನೆಯೂ ಗೆದ್ದುಕೊಂಡ ದೈವಕೃಪೆಯದು; ಅದನ್ನು ಬರಿದೆ ಶ್ರಮದ ಫಲವೆಂದು ಹೇಳಲು ಬರುವುದಿಲ್ಲ. ಭಕ್ತನು ಈ ವಿಲೀನ ಅಥವಾ ಐಕ್ಯಕ್ಕಾಗಿ ಹಂಬಲಿಸುತ್ತಾನೆ. ಅವನು ತನಗೆ ಇಚ್ಛೆಬಂದಂತೆ

ಭಗವಂತನನ್ನು ಆರಾಧಿಸುತ್ತಾನೆ, ತಾನು ಭಗವಂತನ ವಿಶಿಷ್ಟ ರೂಪದ ಆನಂದವನ್ನು ಅನುಭವಿಸಲು ಬಯಸುತ್ತಾನೆ. ಆದರೆ ಭಗವಂತನು ಅವನಿಗೆ ಸಾಲೋಕ್ಯ, ಸಾಮೀಪ್ಯ ಮತ್ತು ಸಾರೂಪ್ಯಗಳನ್ನು ಮಾತ್ರವಲ್ಲದೆ ಸಾಯುಜ್ಯವನ್ನೂ ಅನುಗ್ರಹಿಸುತ್ತಾನೆ! ಭಕ್ತಿ ಮಾರ್ಗವು ಬ್ರಹ್ಮಜ್ಞಾನದ ಗಳಿಕೆಗೂ ದಾರಿಯಾಗುತ್ತದೆ. ಭಕ್ತನು ಅದನ್ನು ಬಯಸದೆ ಹೋದರೂ ಭಗವಂತನೇ ಅದನ್ನು ಅವನಿಗೆ ಅನುಗ್ರಹಿಸುತ್ತಾನೆ. ಸಾಯುಜ್ಯ ಮುಕ್ತಿಯನ್ನು ಏಕಾಂತ ಮುಕ್ತಿ ಎಂದೂ ಉಲ್ಲೇಖಿಸಲಾಗುತ್ತದೆ.

# ೨೭ ಸತ್ ಸಂಕಲ್ಪವು ಸಾನ್ನಿಧ್ಯಕ್ಕೆ ದಾರಿ

ಮಾಯಾವೃತರಾದ ಜೀವಿಗಳಿಗೆ ಎರಡು ಮಾಯಾದ್ವಾರಗಳಿವೆ—ಒಂದು ಲೈಂಗಿಕ ಆಸಕ್ತಿ, ಇನ್ನೊಂದು ನಾಲಗೆಯ ಆಸಕ್ತಿ. ಪ್ರತಿಯೊಬ್ಬ ಮನುಷ್ಯನೂ ಈ ಎರಡನ್ನೂ ಗೆಲ್ಲಬೇಕು; ಅವು ಇರುವವರೆಗೂ ದುಃಖವನ್ನೇ ಉಂಟುಮಾಡುತ್ತವೆ, ಪ್ರಾಪಂಚಿಕ ಕಾಮನೆಗಳೆಲ್ಲವೂ ಈ ಎರಡರ ಮೂಲಕವೇ ಗ್ರಹಿಕೆಗೆ ಬರುತ್ತವೆ. ಆದ್ದರಿಂದ ಈ ಎರಡು ಬಗೆಯ ಆಸಕ್ತಿಗಳನ್ನು ಗೆದ್ದು ಅವುಗಳ ಮೇಲೆ ಪ್ರಭುತ್ವ ಸಂಪಾದಿಸಿರುವವರು ಮಾತ್ರವೇ ಪ್ರಾಪಂಚಿಕತೆಯನ್ನು ಯಶಸ್ವಿಯಾಗಿ ದಾಟಿದ್ದಾರೆ ಎಂದು ಹೇಳಬಹುದು. ಇದೇ ಎಲ್ಲಾ ಪಾಪಗಳಿಗೆ ಮೂಲಕಾರಣ; ಪಾಪವಾದರೋ ಮಾಯೆಯನ್ನು ಫಲವತ್ತಾಗಿ ಬೆಳೆಸುವ ಗೊಬ್ಬರ. ನಿಜವಾಗಿ ಹೇಳಬೇಕೆಂದರೆ, ಈ ಮಾಯಾ ಪ್ರಪಂಚ ಅಥವಾ ಜಗತ್ತು ದೇಹವನ್ನು ಪೋಷಿಸುವ ಉದ್ದೇಶವೊಂದನ್ನು ನೆರವೇರಿಸಬೇಕು ಅಷ್ಟೆ. ಮೋಕ್ಷವನ್ನು ಬಯಸುವವರು ಇಂದ್ರಿಯಗಳನ್ನು ನಿಗ್ರಹಿಸಬೇಕು. "ದೇಹವನ್ನು ರಕ್ಷಿಸಲು ಆಹಾರ, ಚಳಿಯಿಂದ ರಕ್ಷಿಸಲು ಬಟ್ಟೆ," ಎನ್ನುತ್ತದೆ ಉತ್ತರ ಗೀತೆ. ಮನುಷ್ಯನು ಲೌಕಿಕ ವ್ಯವಹಾರಗಳಲ್ಲೇ ಮುಳುಗಿ ಹೋದರೆ, ತಾನು ಬಂದಿರುವ ಉದ್ದೇಶವನ್ನೂ, ತನ್ನ ಕಾರ್ಯಚಟುವಟಿಕೆಗಳ ಲಕ್ಷ್ಯವನ್ನೂ ಪವಿತ್ರವಾದ ಪರಿಶ್ರಮ ಯಾವುದೆಂಬುದನ್ನೂ ಮರೆತುಬಿಡುತ್ತಾನೆ. ಅದಕ್ಕೆ ಬದಲು, ವ್ಯಕ್ತಿಯು ಯಾವುದೇ ಚಟುವಟಿಕೆಯಲ್ಲಿ ತೊಡಗಿರಲಿ, ಉಸಿರಾಡುವಷ್ಟೇ ಸರಾಗವಾಗಿ ಈ ರೀತಿ ಮನನ ಮಾಡುತ್ತಿರಬೇಕು, ತಿಳಿದುಕೊಂಡಿರಬೇಕು: "ನಾನು ಭಗವಂತನಿಗೆ ಸೇವೆ ಮಾಡುವುದಕ್ಕಾಗಿಯೂ ನನ್ನ ನಿಜವಾದ ಆತ್ಮವನ್ನು ಅರ್ಥ ಮಾಡಿಕೊಳ್ಳುವುದಕ್ಕಾಗಿಯೂ ಹುಟ್ಟಿದ್ದೇನೆ." ಉಡುಪು ಧರಿಸುವುದು, ತಿನ್ನುವುದು, ನಡೆಯುವುದು, ಓದುವುದು, ಸೇವೆ ಮಾಡುವುದು, ಚಲಿಸುವುದು ಇವೆಲ್ಲವನ್ನೂ ಅವು ಭಗವಂತನ ಸನ್ನಿಧಿಗೆ ಒಯ್ಯುತ್ತವೆ ಎಂಬ ನಂಬಿಕೆಯಿಂದ ಮಾಡಬೇಕು. ಪ್ರತಿಯೊಂದು ಕೆಲಸವನ್ನೂ ಭಗವಂತನಿಗೆ ಅರ್ಪಿಸುವ ಭಾವನೆಯಿಂದ ಮಾಡಬೇಕು.

ರೈತನು ನೆಲವನ್ನು ಸಮತಟ್ಟು ಮಾಡಿ, ಕಲ್ಲುಮುಳ್ಳುಗಳನ್ನು ತೆಗೆದು, ಉತ್ತು, ಸಿದ್ಧಪಡಿಸಿ, ಗೊಬ್ಬರ ಕೊಟ್ಟು ಮಣ್ಣನ್ನು ಬಲಪಡಿಸಿ, ನೀರು ಹಾಯಿಸಿ ಫಲವತ್ತು ಮಾಡುತ್ತಾನೆ. ಬೀಜ ಬಿತ್ತಿ, ನಾಟಿ ಮಾಡಿ, ಕಳೆ ತೆಗೆದು, ಔಷಧಿ ಸಿಂಪಡಿಸಿ ಕಾಯುತ್ತಾನೆ, ಆಮೇಲೆ ಫಸಲನ್ನು ಪಡೆಯುತ್ತಾನೆ. ಒಡಿದು, ತೂರಿ, ಧಾನ್ಯವನ್ನು ತುಂಬಿಟ್ಟುಕೊಳ್ಳುತ್ತಾನೆ. ಇವೆಲ್ಲ ಪ್ರಕ್ರಿಯೆಗಳೂ ಹೊಟ್ಟೆಯ ಸಲುವಾಗಿ. ಹಾಗೆಯೇ ನಾವು ಎಲ್ಲ ಹಸಿವೆ, ಬಾಯಾರಿಕೆ, ನಲಿವು ನೋವು, ದುಃಖ ನಷ್ಟ, ಯಾತನೆ ಕೋಪ, ಆಹಾರ ರುಚಿ—ಇವೆಲ್ಲವೂ ನಾವು ಭಗವಂತನ ಸನ್ನಿಧಿಗೆ ಹೋಗಲು ನೆರವಾಗುವ ಭಾವನೆಗಳೆಂದು ಭಾವಿಸಬೇಕು. ಈ ಮನೋಭಾವವನ್ನು ತಳೆದಾಗ, ಕಾರ್ಯಚಟುವಟಿಕೆಗಳನ್ನು ಪಾಪವು ಮಲಿನಗೊಳಿಸುವುದಿಲ್ಲ. ಹಾಗೆಯೇ ಅಭಿರುಚಿಗಳೂ ಮಾಯವಾಗುತ್ತವೆ, ನಾಮ ಅಥವಾ ರೂಪದ ತೊಡುಗೆಯಿಲ್ಲದೆ.

## ೨೮ ಪುಣ್ಯಕಾರ್ಯಗಳೇ ಪುರುಷಾರ್ಥವು

ವ್ಯಕ್ತಿಗೆ ಕಾಯಿಲೆಯಾದರೆ ಅಥವಾ ಅವನ ಮನಸ್ಸು ಬೇರೆ ಯಾವುದೋ ಒಂದರಲ್ಲಿ ಮುಳುಗಿಹೋಗಿದ್ದರೆ ಆಹಾರದ ಅಥವಾ ತಿಂದ ಯಾವುದೇ ವಸ್ತುವಿನ ರುಚಿಯು ಅವನ ಗ್ರಹಿಕೆಗೆ ಬರುವುದಿಲ್ಲ. ಹಾಗೆಯೇ ಅವನು ನಾಮಸ್ಮರಣೆಯಲ್ಲಿ, ಭಜನೆ ಜಪ ಅಥವಾ ಧ್ಯಾನದಲ್ಲಿ ಮುಳುಗಿದ್ದರೂ ಹೃದಯವು ತಮಸ್ಸಿನಿಂದ ತುಂಬಿ ಹೋಗಿದ್ದರೆ ಅಥವಾ ಅದು ಚಂಚಲವಾಗಿದ್ದರೆ ಯಾವ ಸಂತೋಷವನ್ನೂ ಅನುಭವಿಸಲು ಸಾಧ್ಯವಿಲ್ಲ. ಅಂತಹ ಪರಿಸ್ಥಿತಿಗಳಲ್ಲಿ ಸಂತೋಷವು ಹೊರಹೊಮ್ಮುವುದಿಲ್ಲ. ಎಲ್ಲಿಯವರೆಗೆ ನಾಲಗೆಯ ಮೇಲೆ ಸಕ್ಕರೆಯಿರುತ್ತದೋ ಅಲ್ಲಿಯವರೆಗೆ ನಾಲಗೆಯು ಸಿಹಿಯಾಗಿರುತ್ತದೆ, ಹೃದಯದ ನಡವೆ ಭಕ್ತಿಯೆಂಬ ದೀಪಸ್ತಂಭ ಇದ್ದರೆ, ದೀಪವು ಉರಿಯುತ್ತಿರುವವರೆಗೆ ಕತ್ತಲೆಯಿರುವುದಿಲ್ಲ; ಹೃದಯವು ಆನಂದದಿಂದ ಬೆಳಗುತ್ತದೆ. ನಾಲಗೆಯ ಮೇಲಿಟ್ಟ ಒಂದು ತುಂಡು ಕಹಿ ವಸ್ತುವು ಇಡೀ ನಾಲಗೆಯನ್ನು ಕಹಿಗೊಳಿಸುತ್ತದೆ. ಲೋಭ ಕ್ರೋಧ ಮೊದಲಾದ ಅವಗುಣಗಳು ಹೃದಯವನ್ನು ಹೊಕ್ಕರೆ ಅಲ್ಲಿನ ಕಾಂತಿಯು ಮಾಯವಾಗಿ ಕತ್ತಲೆಯು ಆವರಿಸುತ್ತದೆ; ಮಾನವನು ಅಸಂಖ್ಯಾತ ದುಃಖಗಳು ಮತ್ತು ನಷ್ಟಗಳಿಗೆ ಗುರಿಯಾಗುತ್ತಾನೆ. ಆದ್ದರಿಂದ ಭಗವಂತನ ಪವಿತ್ರ ಸಾನ್ನಿಧ್ಯವನ್ನು ಪಡೆಯಬೇಕೆಂದು ಆಶಿಸುವವರು ನಿರ್ದಿಷ್ಟ ಅಭ್ಯಾಸಗಳನ್ನೂ ಸಾಧನೆಗಳನ್ನೂ ಗುಣಗಳನ್ನೂ ಮೊದಲು ಪಡೆದುಕೊಳ್ಳಬೇಕು. ಎಂದಿನ ರೂಢಿಗತವಾದ ಜೀವನ ವಿಧಾನವು ಭಗವಂತನಲ್ಲಿಗೆ ಒಯ್ಯುವುದಿಲ್ಲ. ಸಾಧನೆಯಿಂದ ಅದನ್ನು ಸ್ವಲ್ಪ ಬದಲಾಯಿಸಿಕೊಳ್ಳಬೇಕು. ಕೊಕ್ಕರೆಯನ್ನು ನೋಡಿ, ಅದು ನೀರಿನ ಮೇಲೆ ವೇಗವಾಗಿ ನಡೆಯುತ್ತದೆ. ಆದರೆ ಹಾಗೆ ನಡೆಯುವಾಗ ಅದು ಮೀನನ್ನು ಹಿಡಿಯಲಾರದು. ಅದು ವೇಗವನ್ನು ತಡೆದು

ಶಾಂತವಾಗಿ ಚಲನೆಯಿಲ್ಲದೆ ಒಂದು ಕಡೆ ನಿಲ್ಲಬೇಕು. ಹಾಗೆಯೇ ವ್ಯಕ್ತಿಯು ಲೋಭ, ಕ್ರೋಧ ಮೊದಲಾದ ಗುಣಗಳಿಂದ ಸತ್ಯ, ಧರ್ಮ, ಶಾಂತಿ ಎಂಬ ಮೀನನ್ನು ಹಿಡಿಯಲು ಸಾಧ್ಯವಾಗುವುದಿಲ್ಲ. ಅವನು ಯಾವ ಸಾಧನೆಯನ್ನು ಮಾಡಲಿ, ಬಿಡಲಿ, ತೆರಪಿಲ್ಲದೆ ಒಂದೇ ಸಮನೆ ನಾಮಸ್ಮರಣೆ ಮಾಡುತ್ತಿರಬೇಕು. ಆಗ ಮಾತ್ರವೇ ಅವನು ಸಹಜ ಅವಗುಣಗಳಾದ ಲೋಭ, ಕ್ರೋಧ ಮೊದಲಾದ ವನ್ನು ಗೆದ್ದು ಪ್ರಭುತ್ವ ಸಂಪಾದಿಸಬಹುದು. ಶಾಸ್ತ್ರಗಳೆಲ್ಲವೂ ಇದೊಂದು ಪಾಠವನ್ನು ಕಲಿಸುತ್ತವೆ: ಭಗವಂತನೇ ವಿಶ್ವಾತ್ಮಕ ಲಕ್ಷ್ಯ, ಆದ್ದರಿಂದ ಈ ಜೀವನ ಪ್ರಯಾಣವು ಅವನನ್ನೇ ಗುರಿಯಾಗಿ ಹೊಂದಿರಬೇಕು, ಅವನನ್ನು ಸದಾ ಕಣ್ಣೆದುರಿಗೆ ಇಟ್ಟು ಕೊಂಡು, ನಿಮ್ಮನ್ನು ಹಾದಿ ತಪ್ಪಿಸುವ ಮನಸ್ಸನ್ನು ಹತೋಟಿಯಲ್ಲಿ ಇಟ್ಟುಕೊಳ್ಳ ಬೇಕು. ಮಾತಿನ ಮೇಲೆ ಹತೋಟಿಯನ್ನೂ, ಭಗವಂತನನ್ನು ಕುರಿತ ನಿರಂತರ ಚಿಂತನೆಯನ್ನೂ ಅಭ್ಯಾಸ ಮಾಡಿದವನಲ್ಲಿ ಸದ್ಗುಣಗಳೆಲ್ಲವೂ ತಾವಾಗಿಯೇ ಬಂದು ಸುತ್ತಿಕೊಳ್ಳುತ್ತವೆ. ನೋಡಿ! ದ್ವಾಪರ ಯುಗದಲ್ಲಿ ಕೌರವರು ಪೂರ್ವಪುಣ್ಯದ ಫಲವನ್ನು ಅನುಭವಿಸುತ್ತಲೇ ಪಾಪಕರ್ಮಗಳಲ್ಲಿ ತೊಡಗಿದ್ದರು; ಪಾಂಡವರಾ ದರೋ ಹಿಂದಿನ ಜನ್ಮಗಳ ಪಾಪ ಕರ್ಮಗಳ ಫಲವನ್ನು ಅನುಭವಿಸುತ್ತಲೇ ಕೇವಲ ಪುಣ್ಯ ಕಾರ್ಯಗಳನ್ನು ಯೋಚಿಸುತ್ತಿದ್ದರು ಮತ್ತು ಮಾಡುತ್ತಿದ್ದರು! ಇದು ಜ್ಞಾನಿಗಳಿಗೂ ಅಜ್ಞಾನಿಗಳಿಗೂ ಇರುವ ವ್ಯತ್ಯಾಸ. ಕೌರವರು ಹಸಿವೆ ಮತ್ತು ಲೈಂಗಿಕತೆಗಳ ಗುಲಾಮರಾಗಿದ್ದರು; ಪಾಂಡವರು ಪ್ರತಿಯೊಂದು ಕೆಲಸವನ್ನೂ ಭಗವಂತನಿಗಾಗಿ ಮಾಡಿದರು; ಸತ್ಯ ಮತ್ತು ಧರ್ಮಗಳನ್ನು ತಮ್ಮ ಸಾರಥಿಯನ್ನಾಗಿ ಇಟ್ಟುಕೊಂಡಿದ್ದರು. ದುಃಖದಲ್ಲಿ ಮುಳುಗಿರುವವರಿಗೆ ಉತ್ಸವದಲ್ಲಾಗಲಿ ಜಗಳದ ಲ್ಲಾಗಲಿ ಆಸಕ್ತಿಯಿರುವುದಿಲ್ಲ. ಹಾಗೆಯೇ ಭಗವಚ್ಚಿಂತನೆಯಲ್ಲಿ ಮುಳುಗಿರುವ ನಿಜ ವಾದ ಸಾಧಕನಿಗೆ ಪ್ರಾಪಂಚಿಕ ಭೋಗವಸ್ತುಗಳಲ್ಲಿ ರುಚಿಯಿರುವುದಿಲ್ಲ, ಅದನ್ನು ಅವನು ಯೋಚಿಸಲೂ ಆರ.

# ೨೯ ಸಚ್ಚಾರಿತ್ರವೇ ಮಾನವ ಬದುಕಿನ ರತ್ನ

ಈ ದೇಹವಿರುವಾಗಲೇ ಮೃತ್ಯುವು ತನ್ನ ಪಾಲನ್ನು ಒಯ್ಯುವ ಮೊದಲೇ ನಿತ್ಯ ಸತ್ಯವನ್ನೂ, ಅದಕ್ಕೂ ಮಾನವನಿಗೂ ಇರುವ ಸಂಬಂಧವನ್ನೂ ವ್ಯಕ್ತಿಯು ಅರ್ಥಮಾಡಿಕೊಳ್ಳಬೇಕು. ಕಠೋಪನಿಷತ್ತು ಕರೆ ಕೊಡುತ್ತದೆ, "ಉತ್ತಿಷ್ಠತ ಜಾಗ್ರತ! ಪ್ರಾಪ್ಯವರಾನ್ನಿ ಬೋಧತ! (ಏಳಿ, ಎಚ್ಚರಗೊಳ್ಳಿ, ಮಹಾತ್ಮರಿಂದ ದೀಕ್ಷೆ ಪಡೆಯಿರಿ)." ಏನನ್ನು ಸ್ವೀಕರಿಸಬೇಕು, ಏನನ್ನು ನಿರಾಕರಿಸಬೇಕು ಎಂಬುದನ್ನು ತಿಳಿಯದೆ ಸಂದೇ ಹದಲ್ಲಿ ತೊಳಲುತ್ತಿರುವವರು, ಭ್ರಮೆಯಿಂದ ಕುರುಡಾಗಿರುವವರು, ಕತ್ತಲೆಗೂ ಬೆಳಕಿಗೂ ಮರಣಕ್ಕೂ ಅಮರತ್ವಕ್ಕೂ ನಡುವೆ ವ್ಯತ್ಯಾಸವನ್ನು ಕಲ್ಪಿಸಲಾರದವರು

ಅಂಥವರೆಲ್ಲರೂ ನಿತ್ಯಸತ್ಯವನ್ನೂ ಸಮಸ್ತ ಸೃಷ್ಟಿಯ ಸ್ವಯಂಪ್ರಕಾಶವಾದ ಮೂಲಾಧಾರವನ್ನೂ ಅರಿಯಲು ದಾರಿ ತೋರಿಸಿಕೊಡಬಲ್ಲ ಮಹಾಪುರುಷರ ಬಳಿಗೆ ಹೋಗಬೇಕು. ಆಗ ಈ ಪ್ರಪಂಚವೂ ಸ್ವರ್ಗವೂ ಒಂದೇ ದಿವ್ಯಕಾಂತಿಯಲ್ಲಿ ಲೀನವಾಗುವುವು. ಈ ಅರಿವಿಗಾಗಿ ಮನುಷ್ಯನು ಆಳವಾದ ಹಂಬಲವನ್ನು ಹೊಂದಿರಬೇಕು, ಬಹು ಕಷ್ಟದ ಸಾಧನೆ ಮಾಡಬೇಕು. ಈ ಮಾನವ ಜನ್ಮವೇ ಅಸಂಖ್ಯಾತ ಸತ್ಕಾರ್ಯಗಳ ಫಲ. ಅದನ್ನು ತಿರಸ್ಕರಿಸಬಾರದು; ದೊರೆತಿರುವ ಅವಕಾಶವನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳಬೇಕು. ಕೇನೋಪನಿಷತ್ತು ಹೇಳುವಂತೆ, "ನ ಚೇದಿಹಾವೇದಿನ್ಮಹತೀ ವಿನಷ್ಟಿಃ." ಕೈಯಲ್ಲಿರುವ ರತ್ನವನ್ನು ಎಸೆದುಬಿಡಬಾರದು; ಈ ಜನ್ಮದಲ್ಲೇ ತನ್ನನ್ನು ಕಾಪಾಡಿಕೊಳ್ಳುವ ಅನೇಕ ಅವಕಾಶಗಳಿರುವಾಗ ಈ ಬಿಡುಗಡೆಯ ಮಾರ್ಗಗಳ ಬಗೆಗೆ ಆಲೋಚನೆಯನ್ನೇ ಮಾಡದಿರುವುದು ದೊಡ್ಡ ನಷ್ಟವಲ್ಲವೆ? ಆದ್ದರಿಂದ ವಿವೇಚನೆಯಿರುವ ವ್ಯಕ್ತಿಯು ಮೂಲಭೂತವಾದ ತತ್ವಗಳನ್ನು ಅರ್ಥಮಾಡಿಕೊಳ್ಳಲು, ಆಧ್ಯಾತ್ಮಿಕ ಪಥದಲ್ಲಿ ಪ್ರಗತಿ ಸಾಧಿಸಿದ ಮಹಾಪುರುಷರ ಬೋಧನೆಗಳನ್ನು ಅರಗಿಸಿಕೊಳ್ಳಲು, ಅವೆಲ್ಲವನ್ನೂ ಸಾಧ್ಯವಾದಷ್ಟು ಮಟ್ಟಿಗೆ ತನ್ನ ಸ್ವಂತ ಅನುಭವದ ಗೂಡಿಗೆ ತಂದುಕೊಳ್ಳಲು ಅವನು ತನ್ನ ಎಲ್ಲ ಶಕ್ತಿಗಳನ್ನೂ ಉಪಯೋಗಿಸಿ ಶ್ರಮಿಸಬೇಕು. ಹಾಗೆ ಪ್ರಯತ್ನ ಮಾಡದೆ ಆ ಮಾರ್ಗವನ್ನೇ ತಿರಸ್ಕರಿಸಿ ತನ್ನ ಜೀವನವನ್ನು ವ್ಯರ್ಥ ಮಾಡಿಕೊಂಡರೆ ಅದು ಮಾನವ ಕುಲಕ್ಕೆ ಅಪಮಾನ! ಅನಿತ್ಯವೂ ಮಿಥ್ಯವೂ ಆದುದಕ್ಕೆ ಗುಲಾಮನಾಗಿ ಅವುಗಳನ್ನು ಬೆನ್ನಟ್ಟಿ ಅಮೂಲ್ಯವಾದ ಸಮಯವನ್ನು ಹಾಳುಮಾಡುತ್ತಿರದೆ ವ್ಯಕ್ತಿಯು ಸತ್ಯದ ಸಂಶೋಧನೆಗೆ, ನಿತ್ಯವೂ ಸತ್ಯವೂ ಆದ ಭಗವಂತನ ಚಿಂತನೆಗೆ ಪ್ರತಿಯೊಂದು ನಿಮಿಷವನ್ನು ಮೀಸಲಾಗಿರಿಸಬೇಕು. ಅಂತಹ ಅರ್ಪಣೆಯೇ ನಿಜವಾದ ಕರ್ತವ್ಯ. ಅದಕ್ಕೆ ಬದಲು ಭ್ರಮಾತ್ಮಕವಾದ ಕೀಳು ಅಭಿರುಚಿಗಳಲ್ಲಿ ಕಾಲ ಕಳೆಯುವುದು ಪ್ರಾಪಂಚಿಕತೆಯ ಕೆಸರು. ಪ್ರಾಪಂಚಿಕ ಭೋಗಗಳ ಆಕರ್ಷಣೆಯ ವಿಷಕ್ಕೆ ವ್ಯಕ್ತಿಯು ಬಲಿಯಾಗಬಾರದು. ಒಂದು ದಿನ ಈ ಎಲ್ಲ ಮರಳುಗೊಳಿಸುವ ಇಂದ್ರಿಯ ವಿಷಯಗಳೆಲ್ಲ ಕನಸಿನಲ್ಲಿ ಬಿಚ್ಚಿಕೊಂಡ ಕಥೆಯಂತೆ ಮಾಯವಾಗುತ್ತವೆ!

ಮನುಷ್ಯನಿಗೆ ಶಿಕ್ಷಣ, ವಿಶ್ರಾಂತಿ ಹೀಗೆ ಅವನನ್ನು ಬೆಳೆಯಲು ದೊಡ್ಡವನನ್ನಾಗಿಸಲು ಸಹಾಯ ಮಾಡುವಂಥದು ಯಾವುದೇ ಇರಲಿ, ಅದು ಯಾವುದೂ ಅಧ್ಯಾತ್ಮ ಪ್ರಗತಿಯಲ್ಲಿ ಯಾವ ನೆರವಿಗೂ ಬರುವುದಿಲ್ಲ. ಅವನ ಆಧ್ಯಾತ್ಮಿಕ ಅವನತಿಗೆ ಮಾತ್ರ ಅವು ಕಾರಣವಾಗುತ್ತವೆ. ಆದ್ದರಿಂದಲೇ ಇದನ್ನು ಮಾಯಾ ಪ್ರಪಂಚ ಎಂದು ಕರೆಯುವುದು. ಸತ್ಯವು ಎಂಥದೇ ಮಾಯೆಯಲ್ಲಿ ಮುಳುಗಿರಲಿ, ಇನ್ನೂ ಹೆಚ್ಚು ಪ್ರಕಾಶಮಾನವಾಗಿ ಬೆಳಗುತ್ತದೆ. ಏಕೆಂದರೆ, ಸತ್ಯದ ಸ್ವರೂಪವೇ ಅದು. ಪ್ರತಿ ನಿಮಿಷವೂ ಪರಿವರ್ತನೆಗೊಳ್ಳುತ್ತಿರುವ ಕಾಣಿಸಿಕೊಳ್ಳುವ ಮರೆಯಾಗುವ ಈ ಚಂಚಲ ಜಗತ್ತು ನಿತ್ಯಸತ್ಯವೆಂದು ಹೇಗೆ ಹೇಳುವುದು? ಆದ್ದರಿಂದ ಸಾಧಕನ ಲಕ್ಷಣ ಸತ್ಯವನ್ನು ಸಾಧಿಸುವುದು. ಅಷ್ಟೇ ಹೊರತು, ಈ ಅನಿತ್ಯ ಜಗತ್ತಿನಲ್ಲಿ

ಅಸತ್ಯವಾದುದನ್ನು ಅನ್ವೇಷಿಸುವುದಿಲ್ಲ. ಈ ಮಿಥ್ಯಾ ಜಗತ್ತಿನಲ್ಲಿ ಸತ್ಯಾಚಾರವಿರಲಾರದು, ಅಲ್ಲಿ ಮಿಥ್ಯಾಚಾರ ಅಥವಾ ಅಸತ್ಯವಾದ ಬದುಕು ಮಾತ್ರ ಇರುತ್ತದೆ. ನಿಜವಾದ ಬದುಕು ಭಗವಂತನ ಸಾಕ್ಷಾತ್ಕಾರ ಪಡೆಯುವುದರಲ್ಲಿದೆ. ಇದನ್ನು ಪ್ರತಿಯೊಬ್ಬ ಮನುಷ್ಯನೂ ತನ್ನ ಬದುಕಿನ ಪ್ರತಿಯೊಂದು ಕ್ಷಣವೂ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು.

## ೩೦ ಸಹಜ ಮಾರ್ಗ, ಸಾಧನ ಮಾರ್ಗಗಳು ಒಂದೇ ಅಲ್ಲ

ಸಹಜ ಮಾನವನಿಗೂ ಸಾಧಕನಿಗೂ ನಡುವೆ ಇರುವ ವ್ಯತ್ಯಾಸವನ್ನು ಸಾಧಕನು ಗಮನಿಸಬೇಕು. ಸಹಜ ಮಾನವನಲ್ಲಿ ಸಹನೆ ಅಥವಾ ಸಹಿಷ್ಣುತೆ ಇರುವುದಿಲ್ಲ, ಅಹಂಕಾರ ತುಂಬಿರುತ್ತದೆ. ಜಗತ್ತಿಗೆ ಸಂಬಂಧಿಸಿದಂತೆ ಆಸೆಗಳನ್ನು ತುಂಬಿಕೊಂಡು ತೃಪ್ತವಾದ ಜನ್ಮವನ್ನು ಪೂರೈಸಲು ಅವನು ಬಯಸುತ್ತಾನೆ. ಸಾಧಕನು ಸಾಗರದ ತರಂಗಗಳಂತೆ ಅವಿರತವಾಗಿ ಸರ್ವೇಶ್ವರ ಚಿಂತನೆಯಲ್ಲಿ ನಿರತನಾಗಿರುತ್ತಾನೆ. ಸಮಾನತೆ ಮತ್ತು ಸಕಲರನ್ನೂ ಕುರಿತ ಸಮಾನ ಪ್ರೇಮಗಳೆಂಬ ಧನವನ್ನು ಸಂಗ್ರಹಿಸುತ್ತಾನೆ; ಎಲ್ಲವೂ ಭಗವಂತನದು, ತನ್ನದು ಏನೂ ಇಲ್ಲ ಎಂಬ ಭಾವನೆಯಿಂದ ತೃಪ್ತನಾಗುತ್ತಾನೆ. ಸಾಧಕನು ಸಾಮಾನ್ಯ ಮನುಷ್ಯನಂತೆ, ದುಃಖ ಅಥವಾ ನಷ್ಟ, ಕ್ರೋಧ ದ್ವೇಷ ಅಥವಾ ಸ್ವಾರ್ಥ, ಹಸಿವೆ, ಬಾಯಾರಿಕೆ, ಅಥವಾ ಚಂಚಲ ಮನಸ್ಕತೆ—ಇವುಗಳಿಗೆ ಬಾಗುವುದಿಲ್ಲ. ವ್ಯಕ್ತಿಯು ಇವೆಲ್ಲ ವುಗಳನ್ನೂ ಸಾಧ್ಯವಾದಮಟ್ಟಿಗೆ ಗೆಲ್ಲಬೇಕು; ಸಹನೆ, ಧೈರ್ಯ, ಸಂತೋಷ, ಶಾಂತಿ, ದಾನ ಧರ್ಮ ಮತ್ತು ವಿನಯಗಳಿಂದ ಬದುಕನ್ನು ನಡೆಸಬೇಕು. ದೇಹಪೋಷಣೆಯೇ ಪ್ರಧಾನವಲ್ಲ ಎಂಬುದನ್ನು ಅರ್ಥಮಾಡಿಕೊಂಡು, ಹಸಿವು ಬಾಯಾರಿಕೆಗಳನ್ನು ಸಹಿಸಿಕೊಂಡು ಭಗವದ್ಧ್ಯಾನದಲ್ಲಿ ಸದಾ ನಿರತನಾಗಬೇಕು. ಅದಕ್ಕೆ ಬದಲು, ಸಣ್ಣ ಪುಟ್ಟ ವಿಷಯಗಳಿಗೂ ಜಗಳವಾಡುತ್ತಾ ಸಹನೆಯನ್ನು ಕಳೆದುಕೊಂಡು, ಅತಿ ಸಣ್ಣ ಪ್ರಚೋದನೆಯಿಂದಲೂ ವಿಷಣ್ಣನಾಗುತ್ತಾ ಅತಿ ಸಣ್ಣ ಅಪಮಾನಕ್ಕೂ ಕುಪಿತನಾಗುತ್ತಾ ತೃಷೆ, ಹಸಿವು, ನಿದ್ರಾ ಹೀನತೆಗಳಿಂದ ಕಳವಳಿಸುತ್ತಾ ಕಾಲವನ್ನು ಸವೆಸುವುದು ಖಂಡಿತವಾಗಿಯೂ ಸಾಧಕನ ಲಕ್ಷಣವಲ್ಲ. ಅಕ್ಕಿ ಹಾಗೂ ಬೇಯಿಸಿದ ಅನ್ನ ಎರಡೂ ಒಂದೇ ಆಗುತ್ತವೆಯೇ? ಬೇಯಿಸಿದ ಅಕ್ಕಿಯ ಅಗುಳು ಮೃದುವಾಗಿರುತ್ತದೆ. ಅದರಿಂದ ಯಾವ ಅಪಾಯವೂ ಇಲ್ಲ, ಸಿಹಿಯಾಗಿರುತ್ತದೆ. ಅಕ್ಕಿಯಾದರೋ ಗಟ್ಟಿಯಾಗಿರುತ್ತದೆ, ಭ್ರಮೆಯಿಂದ ತುಂಬಿರುತ್ತದೆ. ಎರಡು ಬಗೆಗಳೂ ಜೀವಿಗಳು ಮತ್ತು ಮನುಷ್ಯರೇ ಹೌದು, ಸಂದೇಹವೇ ಇಲ್ಲ. ಬಾಹ್ಯ ಭ್ರಮೆಯಲ್ಲಿ ಮತ್ತು ಅವಿದ್ಯಾ ಮಾಯೆಯಲ್ಲಿ ಮುಳುಗಿ ಹೋಗಿರುವವರು ಮನುಷ್ಯರು; ಆಂತರಿಕ ಭ್ರಮೆಗಳಲ್ಲಿ ಅಥವಾ ವಿದ್ಯಾಮಾಯೆಯಲ್ಲಿ ಮುಳುಗಿರುವವರು ಸಾಧ

ಕರು. ಭಗವಂತನು ಇಬ್ಬರಲ್ಲೂ ಮುಳುಗಿಲ್ಲ, ಇಬ್ಬರಿಗೂ ದೂರವಾಗಿದ್ದಾನೆ. ಬಾಹ್ಯ ಭ್ರಮೆಗಳಿಲ್ಲದವನು ಸಾಧಕನಾಗುತ್ತಾನೆ, ಆಂತರಿಕ ಭ್ರಮೆಗಳನ್ನು ಕಳೆದುಕೊಂಡಾಗ ಅವನನ್ನು ದೇವರು ಎಂದೇ ಕರೆಯಬಹುದು. ಅಂತಹ ವ್ಯಕ್ತಿಯ ಹೃದಯವು ಭಗವಂತನ ಸಿಂಹಾಸನವಾಗುತ್ತದೆ. ಆದ್ದರಿಂದ ಎಲ್ಲವೂ ಭಗವಂತನಿಂದ ವ್ಯಾಪ್ತ ವಾಗಿದೆ ಎಂದು ಅನಿಸಬಹುದು. ಭಗವಂತನು ಪ್ರತಿಯೊಂದು ಹೃದಯದಲ್ಲೂ ನೆಲೆಸಿದ್ದರೂ ಅದನ್ನು ಸಾಧಕನು ತಾನೇ ಕಂಡುಕೊಳ್ಳಲು ಸಾಧನೆಯು ಆವಶ್ಯಕ. ನಮ್ಮ ಮುಖವನ್ನು ನಾವೇ ನೋಡಲಾರೆವು! ಪ್ರತಿಬಿಂಬವನ್ನು ಕಾಣಿಸಬೇಕಾದರೆ ನಮ್ಮ ಬಳಿ ಒಂದು ಕನ್ನಡಿಯಿರಬೇಕು. ಹಾಗೆಯೇ ಗುಣಗಳನ್ನು ಕಳೆದುಕೊಳ್ಳ ಬೇಕಾದರೆ ಮೂಲಭೂತವಾದ ಸಾಧನ ಮಾರ್ಗ ಬೇಕು.

## ೩೧ ಸಾಧಕನು ಪಡೆಯುವ ಬೆಳೆ

ಈ ಪ್ರಪಂಚದಲ್ಲಿ ಸಹನೆಗಿಂತ ಬೇರೆ ತಪಸ್ಸಿಲ್ಲ; ತೃಪ್ತಿಗಿಂತ ದೊಡ್ಡ ಸಂತೋಷವಿಲ್ಲ; ದಯೆಗಿಂತ ಪವಿತ್ರವಾದ ಪುಣ್ಯಕಾರ್ಯವಿಲ್ಲ; ತಾಳ್ಮೆಗಿಂತ ಹೆಚ್ಚು ಪರಿಣಾಮಕಾ ರಿಯಾದ ಆಯುಧವಿಲ್ಲ.

ದೇಹವು ಒಂದು ಹೊಲ, ಸತ್ಕಾರ್ಯಗಳು ಅಲ್ಲಿ ಬಿತ್ತುವ ಬೀಜಗಳು ಎಂದು ಭಕ್ತರು ಪರಿಗಣಿಸಬೇಕು. ಹೃದಯವೆಂಬ ರೈತನ ನೆರವಿನಿಂದ ಅಲ್ಲಿ ಭಗವನ್ನಾಮವೆಂಬ ಬೆಳೆಯನ್ನು ಬೆಳೆಸಿರಿ, ಭಗವಂತನೆಂಬ ಫಸಲು ದೊರಕುತ್ತದೆ. ಬೇಸಾಯವಿಲ್ಲದೆ ಬೆಳೆ ಬರುವುದು ಹೇಗೆ? ಹಾಲಿನಲ್ಲಿರುವ ಕೆನೆಯಂತೆ, ಕಟ್ಟಿಗೆಯಲ್ಲಿರುವ ಬೆಂಕಿ ಯಂತೆ ಭಗವಂತನು ಎಲ್ಲ ವಸ್ತುಗಳಲ್ಲೂ ಇದ್ದಾನೆ. ಇದರಲ್ಲಿ ಪೂರ್ಣ ವಿಶ್ವಾಸ ವನ್ನಿಡಿ. ಹಾಲು ಹೇಗಿದೆಯೋ ಕೆನೆಯೂ ಹಾಗೆಯೇ; ಕಟ್ಟಿಗೆ ಹೇಗಿದೆಯೋ ಬೆಂಕಿಯೂ ಹಾಗೆಯೇ; ಸಾಧನೆ ಹೇಗೋ ಸಾಕ್ಷಾತ್ಕಾರವೂ ಹಾಗೆಯೇ. ಭಗವ ನ್ನಾಮ ಸ್ಮರಣೆಯಿಂದ ನೇರವಾಗಿ ಮೋಕ್ಷವು ಸಾಧಿತವಾಗದೆ ಹೋದರೂ ನಾಲ್ಕು ಫಲಗಳು ಸ್ಪಷ್ಟವಾಗಿ ಅನುಭವಕ್ಕೆ ಬರುತ್ತವೆ. ಅವು ಸತ್ಸಂಗ, ಸತ್ಯ, ತೃಪ್ತಿ, ಇಂದ್ರಿಯ ನಿಗ್ರಹ. ಈ ಯಾವುದೇ ಬಾಗಿಲಿನಿಂದ ಪ್ರವೇಶಿಸಿದರೂ ಅವನು ಗೃಹಸ್ಥನಾಗಲಿ, ಸನ್ಯಾಸಿಯಾಗಲಿ ಅಥವಾ ಬೇರೆ ಯಾವುದೇ ವರ್ಗಕ್ಕೆ ಸೇರಿದವನಾಗಲಿ ಅವನು ಭಗವಂತನನ್ನು ತಲುಪಿಯೇ ತೀರುತ್ತಾನೆ. ಇದು ಖಂಡಿತ. ಜನರು ಪ್ರಾಪಂಚಿಕವಾದ ಸಂತೋಷಕ್ಕಾಗಿ ಹಂಬಲಿಸುತ್ತಾರೆ. ಭಗವಂತ ನನ್ನು ಪಡೆಯಬೇಕೆಂಬ ಬಯಕೆಯನ್ನು ಬೆಳೆಸಿಕೊಳ್ಳುವವರು ಬಹಳ ವಿರಳ. ಸರಿಯಾಗಿ ವಿಶ್ಲೇಷಣೆ ಮಾಡಿ ನೋಡಿದರೆ ಇದೇ ನಿಜವಾಗಿ ರೋಗ, ನಾವು

ಅನುಭವಿಸುವ ಯಾತನೆಗಳೇ ತೆಗೆದುಕೊಳ್ಳುವ ಔಷಧಿಗಳು. ಈ ಪ್ರಾಪಂಚಿಕ ಸುಖಗಳ ನಡುವೆ ಭಗವಂತನು ಬೇಕೆಂಬ ಬಯಕೆ ಬರುವುದಿಲ್ಲ.

ಅಲ್ಲದೆ, ಮನುಷ್ಯನು ಮಾಡುವ ಪ್ರತಿಯೊಂದು ಕೆಲಸವನ್ನೂ ವಿಶ್ಲೇಷಿಸಿ ವಿವೇಚಿಸಬೇಕಾದುದು ಅತ್ಯಗತ್ಯ. ಏಕೆಂದರೆ, ಅಂತಹ ವಿಶ್ಲೇಷಣೆಯಿಂದ ವಿರಕ್ತಿ ಹುಟ್ಟುತ್ತದೆ. ಅದಿಲ್ಲದೆ ವೈರಾಗ್ಯ ಭಾವನೆಯು ಬರುವುದು ಕಷ್ಟ. ಜಿಪುಣತನವು ಒಂದು ನಾಯಿಯ ನಡವಳಿಕೆಯ ಹಾಗೆ; ಅದನ್ನು ಪರಿವರ್ತಿಸಬೇಕು. ಕ್ರೋಧವು ಸಾಧಕನ ಮೊತ್ತಮೊದಲನೆಯ ಶತ್ರು. ಅದು ಉಗುಳಿನ ಹಾಗೆ ಎಂದು ಪರಿಗಣಿಸಬೇಕು. ಇನ್ನು ಅಸತ್ಯವೊ? ಅದು ಇನ್ನೂ ಅಸಹ್ಯ. ಅಸತ್ಯದ ಮೂಲಕವಾಗಿ ಮುಖ್ಯ ಸತ್ವವೆಲ್ಲ ನಾಶವಾಗಿಬಿಡುತ್ತವೆ. ಅದು ತನ್ನನ್ನು ತಾನು ತೊರೆದುಕೊಳ್ಳುತ್ತಿದೆಯೆಂದು ಭಾವಿಸಬೇಕು. ಕಳ್ಳತನವು ಜೀವನವನ್ನು ಹಾಳು ಮಾಡುತ್ತದೆ; ಅತ್ಯಂತ ಅಮೂಲ್ಯವಾದ ಮಾನವ ಜೀವನವನ್ನು ಅದು ಕಾಸಿಗಿಂತಲೂ ಕಡೆಯಾಗಿ ಮಾಡುತ್ತದೆ. ಅದು ಕೊಳೆತು ನಾರುತ್ತಿರುವ ಮೀನಿನ ಹಾಗೆ. ಮಿತವಾದ ಆಹಾರ, ಮಿತವಾದ ನಿದ್ದೆ, ಪ್ರೇಮ, ಸಹಿಷ್ಣುತೆ—ಇವು ದೇಹ ಹಾಗೂ ಮನಸ್ಸುಗಳ ಆರೋಗ್ಯವನ್ನು ಕಾಪಾಡಲು ನೆರವಾಗುತ್ತವೆ. ವ್ಯಕ್ತಿಯು ಯಾರೇ ಆಗಿರಲಿ, ಅವನು ಯಾವ ಸ್ಥಿತಿಯಲ್ಲಿಯೇ ಇರಲಿ, ಅವನು ಖಿನ್ನತೆಗೆ ಎಡೆಗೊಡದೆ ಹೋದರೆ ಸಾಕು, ಅವನಿಗೆ ಹೆದರಿಕೆಯೇ ಇಲ್ಲ. ಇನ್ನೂ ಸ್ಥಿರವಾದ ಶ್ರದ್ಧೆಯಿಂದ, ಯಾವ ದುರುದ್ದೇಶವೂ ಇಲ್ಲದೆ ಭಗವಂತನ ಸ್ಮರಣೆ ಮಾಡಿದ್ದೇ ಆದರೆ ಎಲ್ಲ ದುಃಖಗಳೂ ಸಂಕಟಗಳೂ ಅವನಿಂದ ಕಳಚಿಬೀಳುತ್ತವೆ. ಅವನು ಯಾವ ಜಾತಿಗೆ ಸೇರಿದವನೆಂದಾಗಲಿ, ಪರಂಪರಾಗತವಾಗಿ ಯಾವ ಆಚಾರಕ್ಕೆ ಸೇರಿದ್ದಾನೆ ಎಂದಾಗಲಿ ಭಗವಂತನು ಎಂದಿಗೂ ಕೇಳುವುದಿಲ್ಲ.

ಭಕ್ತಿಯು ಕಾಷಾಯವಸ್ತ್ರವನ್ನು ಧರಿಸುವುದರಲ್ಲಿಲ್ಲ; ಉತ್ಸವಗಳ ವ್ಯವಸ್ಥೆ ಮಾಡುವುದರಲ್ಲಿಲ್ಲ; ಯಜ್ಞಗಳನ್ನು ಆಚರಿಸುವುದು, ತಲೆಗೂದಲು ಬೋಳಿಸಿಕೊಳ್ಳುವುದು, ದಂಡ ಕಮಂಡಲುಗಳನ್ನು ಹಿಡಿಯುವುದು ಅಥವಾ ಜಟಾಧಾರಿಯಾಗುವುದು ಈ ಯಾವುದರಲ್ಲೂ ಇಲ್ಲ. ಶುದ್ಧ ಅಂತಃಕರಣದಿಂದ, ಅವಿಚ್ಛಿನ್ನವಾಗಿ (ತಾನು ಯಾವುದೇ ಕಾರ್ಯವನ್ನು ಮಾಡುತ್ತಿರಲಿ) ಭಗವಂತನನ್ನು ಧ್ಯಾನಿಸುತ್ತಾ ಎಲ್ಲವೂ ಭಗವಂತನ ಸೃಷ್ಟಿ, ಆದ್ದರಿಂದ ಏಕೈಕವಾದದ್ದು ಎಂದು ಭಾವಿಸುತ್ತಾ ಇಂದ್ರಿಯ ವಿಷಯಗಳಿಗೆ ಅಂಟಿಕೊಳ್ಳದೆ, ಎಲ್ಲರನ್ನು ಸಮಾನಪ್ರೇಮದಿಂದ ಆಲಿಂಗಿಸುತ್ತಾ ಸತ್ಯ ವಾಕ್ಯಕ್ಕೆ ತನ್ನನ್ನು ತಾನು ಅರ್ಪಿಸಿಕೊಂಡದ್ದೇ ಆದರೆ, ಅದೇ ಭಕ್ತಿಯ ಲಕ್ಷಣ.

ಭಕ್ತಿಯ ಹಲವು ಬಗೆಗಳಲ್ಲಿ ನಾಮಸ್ಮರಣ ಭಕ್ತಿಯು ಅತ್ಯುತ್ತಮವಾದದ್ದು. ಕಲಿಯುಗದಲ್ಲಿ ತನ್ನನ್ನು ತಾನು ರಕ್ಷಿಸಿಕೊಳ್ಳಲು ನಾಮವೇ ದಾರಿ. ಜಯದೇವ, ಗೌರಾಂಗ, ತ್ಯಾಗರಾಜ, ತುಕಾರಾಮ, ಕಬೀರ, ರಾಮದಾಸ ಈ ಎಲ್ಲ ಶ್ರೇಷ್ಠ ಭಕ್ತರೂ ಈ ನಾಮವೊಂದರಿಂದಲೇ ಭಗವಂತನನ್ನು ಪಡೆದರು. ಸಾವಿರ ವಿಷಯಗಳನ್ನು

ಕುರಿತು ಹೇಳಿ ಏನು ಪ್ರಯೋಜನ? ಪ್ರಹ್ಲಾದ ಮತ್ತು ಧ್ರುವರು ಕೂಡ ಭಗವಂತನ ದರ್ಶನ, ಸ್ಪರ್ಶನ, ಸಂಭಾಷಣಗಳನ್ನು ಸವಿದದ್ದು ನಾಮದ ಮೂಲಕವಾಗಿಯೇ. ಆದ್ದರಿಂದ ಪ್ರತಿಯೊಬ್ಬ ಸಾಧಕನೂ ಭಗವಂತನ ನಾಮವನ್ನು ತನ್ನ ಜೀವದ ಉಸಿರಾಗಿ ಪರಿಗಣಿಸಿ ಸತ್ಕಾರ್ಯಗಳಲ್ಲೂ ಸದಾಲೋಚನೆಯಲ್ಲೂ ಸಂಪೂರ್ಣ ಶ್ರದ್ಧೆಯನ್ನು ಇಟ್ಟುಕೊಂಡದ್ದೇ ಆದರೆ, ಸೇವಾ ಭಾವನೆಯನ್ನೂ, ಎಲ್ಲರನ್ನೂ ಕುರಿತ ಸಮಾನ ಪ್ರೇಮವನ್ನೂ ಬೆಳೆಸಿಕೊಂಡದ್ದೇ ಆದರೆ, ಮುಕ್ತಿಗೆ ಅದಕ್ಕಿಂತ ಉತ್ತಮವಾದ ದಾರಿಯಿಲ್ಲ. ಇದಕ್ಕೆ ಬದಲು ಯಾವುದೋ ಒಂದು ನಿರ್ಜನವಾದ ಮೂಲೆಯಲ್ಲಿ ಕುಳಿತು, ಉಸಿರನ್ನು ತಡೆಯುವುದರ ಮೂಲಕ ತನ್ನ ಅಂತರ್ಗತ ಗುಣಗಳನ್ನು ಅವನು ಹೇಗೆ ಗೆಲ್ಲಬಲ್ಲನು? ಅಂಬರೀಷನ ಭಕ್ತಿ ಮತ್ತು ದುರ್ವಾಸನ ಕಾರ್ಯಗಳು ಈ ಎರಡೂ ಒಂದೆಡೆ ಕೂಡಿದರೆ ಕೊನೆಗೆ ಫಲ ದುರ್ವಾಸನಿಗೆ ಒದಗಿದ ಗತಿಯೇ. ದುರ್ವಾಸನು ಅಂಬರೀಷನ ಪಾದಗಳಿಗೆ ಎರಗಲೇಬೇಕು. ನೀವು ಹಾಗೆ ತ್ರಿಶಂಕುಗಳಾಗುವುದನ್ನು ನಿವಾರಿಸುವಂತಾಗಲಿ, ನಿತ್ಯಸತ್ಯವನ್ನು ಅನುಭವಿಸುವಂತಾಗಲಿ.

## ೩.೨ ಸಾಧಕನು ಬಿಟ್ಟುಕೊಡಬೇಕಾದುದು

ಪ್ರತಿಯೊಬ್ಬ ಮನುಷ್ಯನೂ ತನಗೆ ತಿಳಿಯದಂತೆಯೇ ತಪ್ಪುಗಳನ್ನು ಮಾಡುತ್ತಾನೆ. ಬೆಂಕಿಯಾಗಲಿ ಬೆಳಕಾಗಲಿ ಎಷ್ಟೇ ಪ್ರಕಾಶಮಾನವಾಗಿದ್ದರೂ ಅದರಿಂದ ಸ್ವಲ್ಪವಾದರೂ ಹೊಗೆ ಬಂದೇ ಬರುತ್ತದೆ. ಹಾಗೆಯೇ ಮನುಷ್ಯನು ಯಾವುದೇ ಒಳ್ಳೆಯ ಕೆಲಸವನ್ನು ಮಾಡಿದರೂ ಅದರಲ್ಲಿ ಒಂದು ಸಣ್ಣ ಕಣದಷ್ಟಾದರೂ ಕೆಡುಕು ಇದ್ದೇ ಇರುತ್ತದೆ. ಆದರೆ ಆ ಕೆಡುಕನ್ನು ಅತ್ಯಂತ ಕಡಿಮೆ ಮಾಡುವುದಕ್ಕೆ, ಒಳ್ಳೆಯದು ಅಧಿಕವಾಗಿ ಕೆಟ್ಟದ್ದು ಕಡಿಮೆಯಾಗುವುದಕ್ಕೆ ಪ್ರಯತ್ನ ಮಾಡಬೇಕು. ನಿಜ, ಇಂದಿನ ಪರಿಸ್ಥಿತಿಯಲ್ಲಿ ನೀವು ಮೊದಲನೆಯ ಪ್ರಯತ್ನದಲ್ಲಿ ಸಫಲರಾಗದೆ ಹೋಗಬಹುದು. ನೀವು ಏನನ್ನೇ ಮಾಡಿದರೂ ಮಾತನಾಡಿದರೂ ನಿರ್ವಹಿಸಿದರೂ ಅದರ ಪರಿಣಾಮಗಳನ್ನು ಕುರಿತು ಬಹು ಎಚ್ಚರಿಕೆಯಿಂದ ಆಲೋಚನೆ ಮಾಡಬೇಕು. ನಿಮ್ಮನ್ನು ಇತರರು ಹೇಗೆ ಗೌರವಿಸಬೇಕೆಂದು, ಹೇಗೆ ನಿಮ್ಮೊಂದಿಗೆ ಅವರು ನಡೆದುಕೊಳ್ಳಬೇಕೆಂದು ಬಯಸುವಿರೋ ಹಾಗೆಯೇ ಮೊದಲು ನೀವು ಅವರೊಂದಿಗೆ ನಡೆದುಕೊಳ್ಳಬೇಕು, ಅವರನ್ನು ಗೌರವಿಸಬೇಕು. ಆಗ ಮಾತ್ರವೇ ಅವರು ನಿಮ್ಮನ್ನು ಗೌರವಿಸುವುದು. ಅದಕ್ಕೆ ಬದಲು, ನೀವೇ ಇತರರನ್ನು ಗೌರವಿಸದೆ, ಪ್ರೀತಿಸದೆ ಅವರು ನಿಮ್ಮನ್ನು ಸರಿಯಾಗಿ ನಡೆಸಿಕೊಳ್ಳುತ್ತಿಲ್ಲವೆಂದು ದೂರಿದರೆ ಅದು ನಿಮ್ಮ ತಪ್ಪು ನಿರ್ಣಯವಾಗುತ್ತದೆ. ಅಲ್ಲದೆ, ಇತರರಿಗೆ ಯಾವ ತತ್ವಗಳು ಸರಿ, ಯಾವುವು ತಪ್ಪು, ಯಾವುವು ಒಳ್ಳೆಯವು, ಯಾವ ನಡವಳಿಕೆ

ಅತ್ಯುತ್ತಮ ಎಂದೆಲ್ಲ ಬೋಧಿಸುವವರು ಮೊದಲು ತಾವು ಆ ಬೋಧನೆಯನ್ನು ಆಚರಿಸಬೇಕು, ಆಗ ಬೋಧಿಸಬೇಕಾದ ಅಗತ್ಯವೇ ಇರುವುದಿಲ್ಲ. ಅವರ ನಡವಳಿಕೆಯನ್ನು ನೋಡಿಯೇ ಇತರರು ಕಲಿತುಬಿಡುತ್ತಾರೆ. ಹಾಗಲ್ಲದೆ, ಇತರರಿಗೆ ವೇದಾಂತ ತತ್ವಗಳನ್ನು ಗಿಣಿಪಾಠವಾಗಿ ಹೇಳುತ್ತಾ ತಮ್ಮ ನಡವಳಿಕೆಯಲ್ಲಿ ಅದನ್ನು ಆಚರಿಸದೆ ಇರುವುದು ಇತರರಿಗೆ ಮಾಡುವ ಮೋಸ ಮಾತ್ರವಲ್ಲ, ಇನ್ನೂ ಕೀಳು, ತನಗೇ ಮಾಡಿಕೊಳ್ಳುವ ವಂಚನೆ. ಆದ್ದರಿಂದ ಇತರರು ಹೇಗಿರಬೇಕೆಂದು ಬಯಸುವಿರೋ ಹಾಗೆ ಮೊದಲು ನೀವು ಇರಬೇಕು. ತನ್ನ ದೋಷಗಳನ್ನು ಮುಚ್ಚಿಟ್ಟುಕೊಂಡು ಇತರರ ದೋಷಗಳನ್ನು ಬೆದಕುವುದು ಸಾಧಕನ ಲಕ್ಷಣವಲ್ಲ. ಯಾರಾದರೂ ನಿಮ್ಮ ದೋಷವನ್ನು ತೋರಿಸಿಕೊಟ್ಟರೆ, ನಿಮ್ಮ ನಡವಳಿಕೆ ಸರಿ ಎಂದು ವಾದ ಮಾಡಬೇಡಿ. ಅದಕ್ಕಾಗಿ ಅವರ ಮೇಲೆ ಹಗೆ ಬೆಳೆಸಿಕೊಳ್ಳಬೇಡಿ. ನಿಮ್ಮಲ್ಲೇ ಅದು ಹೇಗೆ ದೋಷವಾಗಿದೆ ಎಂಬುದನ್ನು ವಿಚಾರಮಾಡಿ ನೋಡಿ, ನಿಮ್ಮ ನಡವಳಿಕೆಯನ್ನು ತಿದ್ದಿಕೊಳ್ಳಿ. ನಿಮಗೇ ತೃಪ್ತಿಕರವಾಗುವಂತೆ ಆ ದೋಷವನ್ನೇ ಸಾಧಾರಣೀಕರಿಸುವುದಾಗಲಿ, ಅದನ್ನು ತೋರಿಸಿಕೊಟ್ಟವನ ಮೇಲೆ ಹಗೆಯನ್ನು ಬೆಳೆಸಿಕೊಳ್ಳುವುದಾಗಲಿ ಸಾಧಕ ಅಥವಾ ಭಕ್ತನಿಗೆ ತಕ್ಕ ನಡವಳಿಕೆಯಲ್ಲ.

ಸಾಧಕನು ಯಾವಾಗಲೂ ಸತ್ಯವಾದುದನ್ನು, ಸಂತೋಷಪ್ರದವಾದುದನ್ನು ಅರಸಬೇಕು. ವಿಷಾದಕರವೂ ನಿರುತ್ಸಾಹಕರವೂ ಆದ ಆಲೋಚನೆಗಳನ್ನು ಅವನು ನಿವಾರಿಸಬೇಕು. ನಿರುತ್ಸಾಹ, ಸಂದೇಹ, ಗರ್ವ ಇವು ಆಧ್ಯಾತ್ಮಿಕ ಸಾಧಕನಿಗೆ ರಾಹು ಮತ್ತು ಕೇತು ಇದ್ದ ಹಾಗೆ. ಭಕ್ತಿಯು ಚೆನ್ನಾಗಿ ಸ್ಥಾಪಿತವಾಗಿರುವಾಗ ಇವು ಕಾಣಿಸಿಕೊಂಡರೂ ಸುಲಭವಾಗಿ ಅವನ್ನು ತ್ಯಜಿಸಬಹುದು. ಅವು ಸಾಧನೆಗೆ ಹಾನಿಯನ್ನುಂಟುಮಾಡುತ್ತವೆ. ಸಾಧಕನು ಎಲ್ಲ ಸನ್ನಿವೇಶಗಳಲ್ಲೂ ಸಂತೋಷವಾಗಿಯೂ ಉತ್ಸಾಹದಿಂದಲೂ ನಗುನಗುತ್ತಲೂ ಇರುವುದು ಅತ್ಯುತ್ತಮ. ಭಕ್ತಿ ಜ್ಞಾನಗಳಿಗಿಂತಲೂ ಮಿಗಿಲಾಗಿ ಈ ಪರಿಶುದ್ಧ ಮನೋಭಾವವು ಅಪೇಕ್ಷಣೀಯ. ಅದನ್ನು ಗಳಿಸಿರುವವರು ಗುರಿಯನ್ನು ಮೊದಲು ತಲುಪಲು ಅರ್ಹರಾಗುತ್ತಾರೆ. ಎಲ್ಲಾ ಸಮಯದಲ್ಲೂ ಹೀಗೆ ಸಂತೋಷವಾಗಿರುವುದು ಹಿಂದಿನ ಜನ್ಮಗಳಲ್ಲಿ ಮಾಡಿದ ಒಳ್ಳೆಯ ಕಾರ್ಯಗಳ ಫಲ. ವ್ಯಕ್ತಿಯು ಸದಾ ದುಃಖಿಯಾಗಿದ್ದರೆ, ನಿರುತ್ಸಾಹದಿಂದಿದ್ದರೆ, ಸಂದೇಹಪಡುತ್ತಿದ್ದರೆ ಅವನು ಎಷ್ಟೇ ಸಾಧನೆ ಮಾಡಿದರೂ ಎಂದಿಗೂ ಆನಂದವನ್ನು ಪಡೆಯಲಾರನು. ಸಾಧಕನು ಮಾಡಬೇಕಾದ ಮೊದಲನೆಯ ಕೆಲಸ ಉತ್ಸಾಹವನ್ನು ಬೆಳೆಸಿಕೊಳ್ಳುವುದು. ಈ ಉತ್ಸಾಹದ ಮೂಲಕ ಅವನು ವೈವಿಧ್ಯಪೂರ್ಣವಾದ ಆನಂದವನ್ನು ಪಡೆಯಬಹುದು. ನಿಮ್ಮನ್ನು ಹೊಗಳುತ್ತಿದ್ದರೆ ಎಂದಿಗೂ ಬೀಗಬೇಡಿ; ನಿಂದಿಸುತ್ತಿದ್ದರೆ ಕುಸಿದು ಕೂರಬೇಡಿ. ಈ ಎರಡೂ ಇಲ್ಲದೆ ಅಧ್ಯಾತ್ಮ ಸಿಂಹವಾಗಿ ನಿಲ್ಲರಿ. ವ್ಯಕ್ತಿಯು ತನ್ನನ್ನು ತಾನೇ ವಿಶ್ಲೇಷಿಸಿ ದೋಷಗಳನ್ನು ತಿದ್ದಿಕೊಳ್ಳಬೇಕು. ಇದು ಅತ್ಯಂತ ಮುಖ್ಯ.

ಭಗವತ್ಸಾಕ್ಷಾತ್ಕಾರಕ್ಕೆ ಸಂಬಂಧಿಸಿದ ವಿಷಯಗಳಲ್ಲಿಯೂ ವ್ಯಕ್ತಿಯು ಜಾಗರೂಕನಾಗಿರಬೇಕು. ಎಷ್ಟೇ ಅನನುಕೂಲಗಳು ಎದುರಾದರೂ ನಿಲ್ಲಿಸದೆ, ಯಾವುದೇ ವ್ಯತ್ಯಾಸ ಮಾಡದೆ ಸಾಧನೆಯನ್ನು ಮುಂದುವರಿಸಬೇಕು. ತಾನು ಪ್ರೀತಿಸಿ, ಸವಿದು, ಸ್ಮರಣೆಗೆ ಆರಿಸಿಕೊಂಡ ನಾಮವನ್ನು ಬದಲಾಯಿಸುತ್ತಲೇ ಇರಬಾರದು. ದಿನದಿನಕ್ಕೂ ನಾಮವನ್ನು ಬದಲಾಯಿಸುತ್ತಿದ್ದರೆ ಏಕಾಗ್ರತೆಯು ಸಾಧ್ಯವಾಗುವುದಿಲ್ಲ, ಮನಸ್ಸು ಏಕಾಗ್ರವಾಗುವುದಿಲ್ಲ. ಸಾಧನೆಯ ಅಂತಿಮ ಗುರಿಯೇ ಈ ಏಕಾಗ್ರತೆಯ ಸಂಪಾದನೆ. ಆದ್ದರಿಂದ ಪದೇ ಪದೇ ಭಗವಂತನ ನಾಮಗಳನ್ನೂ ರೂಪಗಳನ್ನೂ ಸ್ವೀಕರಿಸುತ್ತಾ ತ್ಯಜಿಸುತ್ತಾ ಇರದೆ, ಒಂದು ನಾಮವನ್ನು ಜಪ ಮತ್ತು ಧ್ಯಾನಗಳುದ್ದಕ್ಕೂ ಇಟ್ಟುಕೊಳ್ಳಬೇಕು. ಅಷ್ಟೇ ಅಲ್ಲ, ಅವನಿಗೆ ಇನ್ನೂ ಒಂದು ಬಲವಾದ ನಂಬಿಕೆ ಬರಬೇಕು. ಭಗವಂತನ ಎಲ್ಲ ರೂಪಗಳೂ ಎಲ್ಲ ನಾಮಗಳೂ ತಾನು ಜಪಮಾಡಲು ಆರಿಸಿಕೊಂಡ ನಾಮ, ಧ್ಯಾನ ಮಾಡಲು ಆರಿಸಿಕೊಂಡ ರೂಪವೇ ಆಗಿವೆ ಎಂಬ ನಂಬಿಕೆ ಅದು. ಆ ನಾಮವಾಗಲಿ ರೂಪವಾಗಲಿ ಅನಿಚ್ಛೆ, ಅತೃಪ್ತಿಗಳ ಅತ್ಯಲ್ಪ ಭಾವನೆಯನ್ನೂ ಸುಳಿಯಗೊಡಬಾರದು. ಪ್ರಾಪಂಚಿಕವಾದ ನಷ್ಟಗಳು ನೋವುಗಳು ಮತ್ತು ಕಳವಳಗಳು ಎಲ್ಲವೂ ತಾತ್ಕಾಲಿಕ, ಬಂದು ಹೋಗುವಂಥವು ಎಂದು ತಿಳಿದುಕೊಂಡು, ಆ ದುಃಖವನ್ನು ಗೆಲ್ಲಲು ಈ ಜಪ ಮತ್ತು ಧ್ಯಾನಗಳು ಸರಿಯಾದ ದಾರಿ ಎಂದು ಅರ್ಥಮಾಡಿಕೊಂಡು ಆ ಎರಡು ಅಂಶಗಳನ್ನೂ ಸಾಧಕನು ಬೇರೆ ಬೇರೆಯಾಗಿಟ್ಟುಕೊಳ್ಳಬೇಕು. ಅದನ್ನು ಇದರೊಂದಿಗೆ, ಇದನ್ನು ಅದರೊಂದಿಗೆ ಬೆರೆಸಬಾರದು. ನಷ್ಟ, ನೋವು, ಕಳವಳ ಎಲ್ಲವೂ ಬಾಹ್ಯವಾದವು, ಈ ಪ್ರಪಂಚಕ್ಕೆ ಸಂಬಂಧಪಟ್ಟವು ಎಂದೂ ಜಪ ಮತ್ತು ಧ್ಯಾನಗಳು ಆಂತರಿಕವಾದವು, ಭಗವತ್ಪ್ರೇಮದ ವಲಯಕ್ಕೆ ಸಂಬಂಧಪಟ್ಟವು ಎಂದೂ ಅವನು ತಿಳಿದುಕೊಳ್ಳಬೇಕು. ಪತಿವ್ರತಾಭಕ್ತಿ ಎಂದರೆ ಇದೇ. ಇನ್ನೊಂದು ಬಗೆಯಲ್ಲಿ ಸಾಧಕನು ಒಂದು ನಾಮವನ್ನೂ ಒಂದು ರೂಪವನ್ನೂ ಆರಿಸಿಕೊಳ್ಳುತ್ತಾನೆ, ಕೆಲವು ದಿನಗಳ ನಂತರ ಅವುಗಳನ್ನು ತೊರೆದು ಬೇರೆಯವನ್ನು ಆರಿಸಿಕೊಳ್ಳುತ್ತಾನೆ. ಇದನ್ನು ವ್ಯಭಿಚಾರ ಭಕ್ತಿ ಎಂದು ಕರೆಯಬಹುದು.

ಅಜ್ಞಾನದಿಂದ ಹಾಗೆ ಮಾಡುವುದು ದೋಷವಲ್ಲ; ಆದರೆ ಅದು ದೋಷ, ಹಾನಿಕಾರಕ ಎಂದು ತಿಳಿದುಕೊಂಡಾದ ಮೇಲೆ, ಧ್ಯಾನ ಮತ್ತು ಜಪಗಳನ್ನು ನಿಷ್ಠೆಯಿಂದ ಮಾಡುತ್ತಾ ಇದ್ದು, ಆಮೇಲೆ ಅವನ್ನು ಬದಲಾಯಿಸಿದರೆ ಅದು ನಿಜವಾಗಿಯೂ ತಪ್ಪು. ಒಂದು ನಾಮ ಮತ್ತು ರೂಪವನ್ನು ದೃಢವಾಗಿ ಹಿಡಿಯುವುದು ಅತ್ಯಂತ ಶ್ರೇಷ್ಠವಾದ ವ್ರತ, ಅತಿ ಶ್ರೇಷ್ಠವಾದ ತಪಸ್ಸು. ಹಿರಿಯರು ಸಲಹೆ ಕೊಟ್ಟರೂ ನಿಮ್ಮ ಮನಸ್ಸು ಒಪ್ಪಿಕೊಂಡಿರುವ ಸಾಧನ ಮಾರ್ಗವನ್ನು ಬಿಡಬೇಡಿ. ಯಾವ ಹಿರಿಯನು ತಾನೆ ನೀವು ಒಪ್ಪಿಕೊಂಡಿರುವ ಭಗವನ್ನಾಮವನ್ನು ಕೈಬಿಡಬೇಕೆಂದು, ಬದಲಾಯಿಸಬೇಕೆಂದು ಸಲಹೆ ಕೊಟ್ಟಾನು? ಹಾಗೆ ಮಾಡಬೇಕೆಂದು ಹೇಳುವವರನ್ನು ಹಿರಿಯರೆಂದೇ ನೀವು ಪರಿಗಣಿಸಬೇಕಾಗಿಲ್ಲ. ಅವ

ರನ್ನು ಬುದ್ಧಿ ಹೀನರೆಂದು ಭಾವಿಸಿರಿ. ಹಾಗೆಯೇ ಜಪ ಮತ್ತು ಧ್ಯಾನ ಮಾಡುವ ಸ್ಥಳವನ್ನು ಮತ್ತೆ ಮತ್ತೆ ಬದಲಾಯಿಸಬೇಡಿ. ಒಂದು ವೇಳೆ, ಪ್ರಯಾಣ ಕಾಲದಲ್ಲಿ ಆಗುವ ಹಾಗೆ ಸ್ಥಳವನ್ನು ಬದಲಾಯಿಸಬೇಕಾಗಬಹುದು, ಕೊನೆಯ ಪಕ್ಷ, ಸಮಯವನ್ನು ವ್ಯತ್ಯಾಸವಾಗದಂತೆ ಪಾಲಿಸಬೇಕು. ರೈಲಿನಲ್ಲೋ ಬಸ್ಸಿನಲ್ಲೋ ಅಂತಹ ಬೇರೆ ಅನನುಕೂಲ ಪರಿಸ್ಥಿತಿಯಲ್ಲಿ ಇದ್ದಾಗಲೂ ಕೂಡ ನಿರ್ದಿಷ್ಟ ಸಮಯಕ್ಕೆ ಸರಿಯಾಗಿ ನೀವು ಮಾಡುತ್ತಿದ್ದ ಜಪವನ್ನೂ ಧ್ಯಾನವನ್ನೂ ಮನಸ್ಸಿಗೆ ತಂದುಕೊಳ್ಳಬೇಕು. ಈ ರೀತಿಯಲ್ಲಿ ಆಧ್ಯಾತ್ಮಿಕ ಐಶ್ವರ್ಯವನ್ನು ಸಂಪಾದಿಸಿ ವ್ಯಕ್ತಿಯು ತಾನು ಒಡೆಯನಾಗಬಹುದು, ಖಂಡಿತವಾಗಿಯೂ ಆತ್ಮವನ್ನು ಸಾಧಿಸಬಹುದು.

## ೩೩ ಅಂದಿನ ಕ್ಷೇಮ, ಇಂದಿನ ಕ್ಷಾಮಕ್ಕೆ ಕಾರಣಗಳು

ಪ್ರತಿಯೊಬ್ಬ ಮನುಷ್ಯನೂ ತನ್ನಿಂದ ಇನ್ನೊಂದು ಜೀವಿಗೆ ಯಾವುದೇ ನೋವು ಸಂಭವಿಸದಂತೆ ಬದುಕಬೇಕು. ಅದು ಸರ್ವೋನ್ನತ ಕರ್ತವ್ಯ. ಮನುಷ್ಯ ಜನ್ಮ ತಳೆದು ಹುಟ್ಟುವ ಅವಕಾಶವನ್ನು ಪಡೆದ ಪ್ರತಿಯೊಬ್ಬನೂ ತನ್ನ ಶಕ್ತಿಯ ಸ್ವಲ್ಪ ಭಾಗವನ್ನು ಆಗಾಗಲಾದರೂ ಪ್ರಾರ್ಥನೆಗೆ, ಭಗವಂತನ ನಾಮಜಪಕ್ಕೆ, ಧ್ಯಾನಕ್ಕೆ ವಿನಿಯೋಗಿಸಬೇಕು. ಸತ್ಯ, ಧರ್ಮ, ಶಾಂತಿಗಳಿಂದ ಬದುಕಲು ಹಾಗೂ ಇತರರಿಗೆ ನೆರವಾಗುವಂತಹ ಸತ್ಕಾರ್ಯಗಳನ್ನು ಮಾಡಲು ತನ್ನನ್ನು ತಾನು ಒಪ್ಪಿಸಿಕೊಳ್ಳಬೇಕು.

ಇತರರಿಗೆ ಹಾನಿಕರವಾಗುವಂತಹ ಕೆಲಸಗಳನ್ನು ಅಥವಾ ಪಾಪಕಾರ್ಯಗಳನ್ನು ಮಾಡಬಾರದು; ಬೆಂಕಿಯನ್ನು ಮುಟ್ಟಲು ಅಥವಾ ಹಾವನ್ನು ಕೆಣಕಲು ಹೆದರುವ ಹಾಗೆ ಪಾಪ ಕಾರ್ಯಗಳಿಗೆ ಹೆದರಬೇಕು. ಈಗ ಚಿನ್ನವನ್ನೂ ಹಲವು ಬಗೆಯ ಐಶ್ವರ್ಯವನ್ನೂ ಸಂಗ್ರಹಿಸಿಕೊಳ್ಳಲು ತೋರಿಸುತ್ತಿರುವ ಶ್ರದ್ಧಾಸಕ್ತಿಗಳನ್ನು ಸತ್ಕಾರ್ಯಗಳನ್ನು ಮಾಡಲು, ಇತರರನ್ನು ಸಂತೋಷಪಡಿಸಲು ಹಾಗೂ ಭಗವಂತನನ್ನು ಪೂಜಿಸಲು ಉಪಯೋಗಿಸಬೇಕು, ಇದು ಮಾನವಧರ್ಮ. ಈ ಒಳಿತನ್ನು ಬಲಪಡಿಸುವುದಕ್ಕಾಗಿಯೇ ಭಗವಂತನು ಮಾನವ ರೂಪದಲ್ಲಿ ಅವತರಿಸುವುದು. ಇಲ್ಲದ ವಸ್ತುವನ್ನು ಬಲಪಡಿಸುವುದಾಗಲೀ ಬೆಳೆಸುವುದಾಗಲೀ ಹೇಗೆ ಎಂದು ಪ್ರಶ್ನೆಯನ್ನೆತ್ತಬಹುದು. ವಾಸ್ತವವಾಗಿ ಈ ಗುಣಗಳು ಅಸ್ತಿತ್ವದಲ್ಲಿಲ್ಲದವಲ್ಲ, ಮನುಷ್ಯನಲ್ಲಿ ಇದ್ದೇ ಇವೆ! ಇವು ಕ್ಷಯಿಸಿ ಸೊರಗಿ ಹೋದಾಗ ಭಗವಂತನು ಅವುಗಳನ್ನು ಮತ್ತೆ ಚಿಗುರಿಸಿ ಬೆಳೆಸಿ ಅವುಗಳಿಗೆ ವಿರುದ್ಧವಾದ ಗುಣಗಳನ್ನು ನಾಶಮಾಡುವ ಸಲುವಾಗಿ ಬರುತ್ತಾನೆ. ಈ ಮಹದುದ್ದೇಶವನ್ನು ಸ್ಪಷ್ಟಪಡಿಸಲೆಂದೇ ಶ್ರೀಕೃಷ್ಣನು ದ್ವಾಪರ ಯುಗದಲ್ಲಿ ಅರ್ಜುನನಿಗೆ ಬೋಧಿಸುವಾಗ ಹೀಗೆ ಹೇಳಿದನು:

ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ
ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ।

ಭಗವಂತನ ಅವತಾರಗಳೆಲ್ಲ ಸಾಧುಜನರ ರಕ್ಷಣೆ ಪೋಷಣೆಗಳಿಗಾಗಿಯೇ. ಈ ಸಾಧು ಎಂಬ ಪದ ಯಾವುದೇ ಒಂದು ಧರ್ಮವನ್ನೋ ಜಾತಿಯನ್ನೋ ಕುಟುಂಬವನ್ನೋ ಬದುಕಿನ ಹಂತವನ್ನೋ ಸಮುದಾಯವನ್ನೋ ಅಥವಾ ಮಾನವನಂತಹ ಒಂದು ನಿರ್ದಿಷ್ಟ ವರ್ಗವನ್ನೋ ಹೇಳುವುದಿಲ್ಲ! ಅದು ಎಲ್ಲಾ ಧರ್ಮಗಳಿಗೆ, ಬದುಕಿನ ಎಲ್ಲಾ ಹಂತಗಳಿಗೆ, ಎಲ್ಲಾ ಜನಾಂಗಗಳಿಗೆ ಮತ್ತು ಎಲ್ಲಾ ಜೀವಿಗಳಿಗೆ ಅನ್ವಯಿಸುತ್ತದೆ. ಭಗವಂತನು ಗೀತೆಯಲ್ಲಿ ತನ್ನ ವಿಶ್ವಾತ್ಮಕ ದೃಷ್ಟಿಯನ್ನು ಪ್ರಕಟಿಸಿದ್ದಾನೆ. ಈ ವಿಶ್ವಾತ್ಮಕ ದೃಷ್ಟಿಯಿಂದಲೇ ಗೀತೆಯು ಅಷ್ಟು ಮಹತ್ವದ ಕೃತಿಯಾಗಿರುವುದು, ಅಷ್ಟು ಪ್ರಸಿದ್ಧವಾಗಿರುವುದು. ಅಷ್ಟೇಕೆ, ಅನೇಕ ಸಂದರ್ಭಗಳಲ್ಲಿ, ಸ್ಥಳಗಳಲ್ಲಿ ಶ್ರೀಕೃಷ್ಣನೇ ತಾನು ತನ್ನ ಭಕ್ತರ ನಿಷ್ಠಾವಂತ ಸೇವಕನೆಂದು ಹೇಳಿದ್ದಾನೆ. ಇದಕ್ಕೆ ಒಂದು ಉದಾಹರಣೆ ಅವನು ಅರ್ಜುನನ ರಥವನ್ನು ನಡೆಸುವ ಸಾರಥಿಯಾದದ್ದು.

ಸಾಮಾನ್ಯ ಮನುಷ್ಯನ ಸನ್ನಡತೆಯೇ ಆ ಮಟ್ಟಿನ ಮೇಲ್ಮೆಯನ್ನು ಪಡೆಯಬಹುದಾದರೆ, ಆಧ್ಯಾತ್ಮಿಕ ಸಾಧನೆಗಳಲ್ಲಿ, ಭಗವಂತನ ನಿರಂತರ ಧ್ಯಾನದಲ್ಲಿ ನಿರತರಾದವರ ಚಾರಿತ್ರ ಎಷ್ಟು ಪವಿತ್ರ, ಎಷ್ಟು ಪರಿಶುದ್ಧ ಆಗಿರುತ್ತದೆ! ಇಬ್ಬರಲ್ಲೂ ಮುಖ್ಯವಾಗಿರುವ ವಿಚಾರ ನಡವಳಿಕೆಯ ಗುಣಮಟ್ಟ.

ಹಿಂದಿನ ಕಾಲದ ಬ್ರಹ್ಮನಿಷ್ಠರಿಗೂ (ಭಗವದ್ಧ್ಯಾನ ನಿರತರಾದವರು) ಇಂದಿನ ಬ್ರಹ್ಮ ನಿಷ್ಠರಿಗೂ ಒಂದು ದೊಡ್ಡ ವ್ಯತ್ಯಾಸವಿದೆ. ಮೊದಲು ಬ್ರಹ್ಮನಿಷ್ಠರ ಹಿರಿಮೆ ಏನೆಂಬುದನ್ನು ಗ್ರಹಿಸಬೇಕು. ಇಂದಿನ ಸಾಧುಜನರು ಈ ಕೆಲಸ ಮಾಡುತ್ತಿಲ್ಲವಾದ್ದರಿಂದಲೇ ನಮಗೆ ಬಡತನ ಅಡಗಿರುವುದು. ಹಿಂದೆ ಅವರು ತಮ್ಮ ಹಿರಿಮೆ ಏನೆಂಬುದನ್ನು ಅರಿತಿದ್ದರು, ದಿವ್ಯತೆಯ ಅನುಭವದಲ್ಲಿ ಲೀನರಾಗಿರುತ್ತಿದ್ದರು. ಹಾಗಾದರೆ ಅಂತಹ ದಿವ್ಯ ಭಾವನೆಗಳು ಈಗೇಕೆ ಉದಿಸುವುದಿಲ್ಲ ಎಂದು ಕೇಳಬಹುದು. ಅವು ಇಲ್ಲದೆ ಇಲ್ಲ. ಬೆಂಕಿಯು ಹೆಚ್ಚಬೇಕಾದರೆ ಅಥವಾ ಕಡಮೆಯಾಗಬೇಕಾದರೆ ಇಂಧನವೊಂದೇ ಕಾರಣ; ಅದಕ್ಕೆ ಬೇರೆ ಕಾರಣವಿಲ್ಲ. ಇಂಧನ ಹೆಚ್ಚಾದಷ್ಟೂ ಜ್ವಲಿಸುವುದು ಹೆಚ್ಚು. ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಬೆಂಕಿಗೆ ಇಂಧನವನ್ನು ಪೂರೈಸಿಕೊಳ್ಳುವ ಹಕ್ಕು ಇದ್ದೇ ಇದೆ. ಬೆಂಕಿಗೆ ತನ್ನ ಸಹಜ ಸ್ವಬಾವದಿಂದಲೇ ಬೆಳಕನ್ನು ಕೊಡುವ ಶಕ್ತಿಯಿದೆ. ಹಾಗೆಯೇ ಸಾಧಕನ ಬುದ್ಧಿಯೆಂಬ ಅಗ್ನಿಯು ವಿವೇಕವೆಂಬ ಬೆಳಕನ್ನು ಉತ್ಪತ್ತಿ ಮಾಡುತ್ತದೆ. ಅದಕ್ಕೆ ವಿರಕ್ತಿ, ಶಾಂತಿ, ಸತ್ಯ, ದಯೆ, ಸಹಿಷ್ಣುತೆ, ಸ್ವಾರ್ಥರಹಿತ ಸೇವೆ—ಈ ಇಂಧನವನ್ನು ನಿರಂತರವಾಗಿ ಒದಗಿಸುತ್ತಿರಬೇಕು. ಇದನ್ನು ಎಷ್ಟೆಷ್ಟು ಮಾಡಿದರೆ ಸಾಧಕರು

ಅಷ್ಟಷ್ಟು ಕಾಂತಿಯುಕ್ತರಾಗುತ್ತಾರೆ, ಸಮರ್ಥರಾಗುತ್ತಾರೆ. ಫಲವತ್ತಾದ ಮಣ್ಣಿನಲ್ಲಿ ಬೆಳೆಯುವ ಮರಗಳು ಮಾತ್ರವೇ ಒಳ್ಳೆಯ ಹಣ್ಣುಗಳನ್ನು ಕೊಡಬಲ್ಲುವು. ಉಪ್ಪು ಮಣ್ಣಿನಲ್ಲಿ ಬೆಳೆಯುವ ಮರಗಳು ಒಳ್ಳೆಯ ಗುಣಮಟ್ಟವನ್ನು ಹೊಂದಿರುವುದಿಲ್ಲ. ಹಾಗೆಯೇ ಪವಿತ್ರ ಭಾವನೆಗಳೂ ಶಕ್ತಿಯೂ ಸಿದ್ಧಿಗಳೂ ಥಳಥಳಿಸುವುದು ನಿರ್ಮಲ ವಾದ ಹೃದಯಗಳಲ್ಲಿ ಮಾತ್ರವೇ. ಹಿಂದಿನ ಬ್ರಹ್ಮನಿಷ್ಠರಿಗೂ ಇಂದಿನವರಿಗೂ ಇರುವ ವ್ಯತ್ಯಾಸ ಇಷ್ಟೆ. ಇಂದಿನ ಬ್ರಹ್ಮನಿಷ್ಠರೂ ಹಿಂದಿನವರಂತೆಯೇ ಅದೇ ಧ್ಯಾನ, ಅದೇ ಪ್ರಣವ ಸಾಧನೆ ಮಾಡುತ್ತಿದ್ದಾರೆ. ವ್ಯತ್ಯಾಸವಿರುವುದು ಆತ್ಮಸಂಯಮದಲ್ಲಿ. ಏಕಾಂತ ಸ್ಥಳದಲ್ಲಿ ಕುಳಿತು ಭಗವಂತನನ್ನು ಸ್ಥಿರವಾಗಿ ಧ್ಯಾನ ಮಾಡುವ ಮಹಾಪುರುಷರ ಸಂಖ್ಯೆಯು ಕಡಮೆಯಾದಾಗ ಈ ಜಗತ್ತಿಗೆ ಅನೇಕ ಕಷ್ಟಗಳು ಬಂದೆರಗಿದುವು! ಸಾಧನ ಮಾರ್ಗಕ್ಕೆ ಯಾವುವು ಅಡ್ಡಿಗಳೋ ಅವುಗಳನ್ನು ಸಂಗ್ರಹಿಸುವುದರಲ್ಲಿ ನಿರತರಾಗಿ ಅಗ್ಗದ ಹೊಗಳಿಕೆ, ಕೀರ್ತಿಗಳಿಗೆ ಗುಲಾಮರಾಗಿ ಭ್ರಮೆಯ ಗೋಜಲಿನಲ್ಲಿ ಸಿಕ್ಕಿಕೊಂಡು, ಪ್ರಸಿದ್ಧಿಯನ್ನು ಸಂಪಾದಿಸಿ, ತಾವು ಸ್ಥಾಪಿಸಿದ ಸಂಸ್ಥೆಗಳನ್ನು ವಿಸ್ತರಿಸುವುದಕ್ಕಾಗಿ ಅನವರತ ಶ್ರಮಿಸುತ್ತಾ ಅವರು ತಮ್ಮ ಬ್ರಹ್ಮನಿಷ್ಠೆಯನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಬ್ರಹ್ಮನಿಷ್ಠರಾಗಬೇಕೆಂದು ಹಂಬಲಿಸುವವರು ಏಕಾಂತವಾದ ಸ್ಥಳವನ್ನು ಹುಡುಕಿಕೊಂಡು ಅಲ್ಲಿ ನಿಯಮಿತ ವಾದ ಸಮಯದಲ್ಲಿ ಧ್ಯಾನವನ್ನೂ ಜಪವನ್ನೂ ಆಚರಿಸಬೇಕು. ಈ ಆಧ್ಯಾತ್ಮಿಕ ಸಾಧನೆಗಳ ಮೂಲಕ ಏಕಾಗ್ರತೆಯನ್ನು ಗಳಿಸಿ, ಸಮಸ್ತ ಜೀವಿಗಳ ಕಲ್ಯಾಣವನ್ನು ಸಾಧಿಸುವ ಕಾರ್ಯಗಳನ್ನು ಮಾಡಲು ಸದಾ ಕಾತರರಾಗಿರಬೇಕು. ಫಲಕ್ಕಾಗಿ ಸ್ವಲ್ಪವೂ ಕಾಳಜಿ ಇಟ್ಟುಕೊಳ್ಳದೆ ಕೆಲಸವನ್ನು ಮಾಡಬೇಕು. ಅಂತಹ ಜನರು ಹೆಚ್ಚಿದಾಗ ಮಾತ್ರವೇ ಈ ಭೂಮಿಯ ಮೇಲೆ ದುಃಖಸಂಕಟಗಳು ಕೊನೆಗೊಳ್ಳುವುದು. ಅದು ಕೃತಯುಗದ ಗುರುತು.

ದಯಾಪೂರ್ಣರಾದ ವೈದ್ಯರು ಅಲ್ಲಲ್ಲಿ ವೈದ್ಯಕೀಯ ಸಂಸ್ಥೆಗಳನ್ನು ನಡೆಸುತ್ತಾ ರೋಗಿಗಳಿಗೆ ಶುಶ್ರೂಷೆ ಚಿಕಿತ್ಸೆ ಮಾಡುತ್ತಿದ್ದಾರೆ. ಹಾಗೆಯೇ ಅಲ್ಲಲ್ಲಿ ಜನನ ಮರಣ ರೋಗದ ಚಿಕ್ಸಿತೆ ಮತ್ತು ಪರಿಹಾರಗಳಲ್ಲಿ ಪರಿಣತರಾದ ಪವಿತ್ರಾತ್ಮರ ಆಶ್ರಮಗಳು ಸ್ಥಾಪನೆಗೊಂಡರೆ, ಆಗ ಜನರು ಅಜ್ಞಾನ, ಅಸತ್ಯ, ಅನೀತಿ, ದುರಭಿಮಾನಗಳೆಂಬ ರೋಗಗಳಿಗೆ ಅಲ್ಲಿ ಚಿಕಿತ್ಸೆಯನ್ನು ಪಡೆದು ಪರಿಹರಿಸಿಕೊಳ್ಳಬಹುದು. ಅಜ್ಞಾನವು ದುಷ್ಟತನವನ್ನು ಬೆಳೆಸುತ್ತದೆ. ಅದನ್ನು ಬ್ರಹ್ಮಜ್ಞಾನದ ಔಷಧಿ ಕೊಟ್ಟು ವಾಸಿಮಾಡ ಬಹುದು, ಶಾಂತಿ, ಶಮ, ದಮ, ಮೊದಲಾದ ಪೂರಕ ಔಷಧಿಗಳನ್ನು ವಿಧಿಸ ಬಹುದು. ಇದನ್ನು ಮಾಡುವುದರ ಬದಲಿಗೆ ಇಂದಿನ ಮಹಾಪುರುಷರು ಅವರ ಬಳಿಗೆ ಹೋಗಿ ಜನರು ಏನನ್ನು ಕೇಳುತ್ತಾರೋ ರೋಗಿಗಳಿಗೆ ಯಾವುದು ಪ್ರಿಯವಾಗುತ್ತದೆಯೋ ಆ ಔಷಧಿಗಳನ್ನು ಕೊಡುತ್ತಿದ್ದಾರೆ! ಹೀಗೆ ಅವರು ತಮ್ಮ ಅನುಯಾಯಿಗಳ ಕೈಗೊಂಬೆಗಳಾಗಿದ್ದಾರೆ. ಕೀರ್ತಿಗೋಸ್ಕರವಾಗಿ ಅವರು ರೋಗಿ ಗಳು ಹೇಳಿದಂತೆ ಕೇಳುವ ವೈದ್ಯರಂತಾಗಿದ್ದಾರೆ! ಇಂತಹ ದೊಡ್ಡವರೆನಿಸಿಕೊಂಡ

ವರು ತಾವು ಆನಂದವನ್ನು ಪಡೆಯುವ ಮೊದಲೇ ಅಧಃಪತನಹೊಂದುತ್ತಾರೆ. ಅದಕ್ಕೆ ಕಾರಣ ಅವರದೇ ದೌರ್ಬಲ್ಯ ಮತ್ತು ಮೂರ್ಖತನ; ಹೆಸರು, ಕೀರ್ತಿಗಳ ದುರಾಸೆಗೆ ಅವರು ಬಲಿಯಾಗುವುದೇ. ಇಂದು ಕಾಣಿಸುತ್ತಿರುವ ದಾರಿದ್ರ್ಯಕ್ಕೆ ಮೂಲ ಕಾರಣ ಇದೇಯೆ. ಇಂದಿನ ಸಾಧುಗಳು ಮಹಾಪುರುಷರು. ಈ ಸತ್ಯವನ್ನು ತಿಳಿದುಕೊಂಡಿಲ್ಲ ಮತ್ತು ತಕ್ಕಂತೆ ವರ್ತಿಸುತ್ತಿಲ್ಲ.

ಪವಿತ್ರವಾದ ದಿವ್ಯ ಸತ್ಯವನ್ನು ಅನುಭವಕ್ಕೆ ತಂದುಕೊಳ್ಳಬೇಕು ಮತ್ತು ಸಾಕ್ಷಾತ್ಕರಿಸಿಕೊಳ್ಳಬೇಕು. ತನ್ನ ಸ್ವಾರ್ಥದ ಅಗತ್ಯಗಳನ್ನು ತ್ಯಾಗಮಾಡಿ ಜಗತ್ತಿನ ಕಲ್ಯಾಣವನ್ನು ಬೆಳೆಸಲು ಬಯಸಬೇಕು. ಇದೇ ಸರಿಯಾದ ದಾರಿ. ಮಹಾಪುರುಷರು ಮತ್ತು ಅಧಿಕಾರದಲ್ಲಿರುವವರು ಹೀಗೆ ಮಾನವತೆಯ ಸೇವೆಯಲ್ಲಿ ಜಗತ್ಕಲ್ಯಾಣ ಸಾಧನೆಯಲ್ಲಿ ನಿರತರಾದರೆ, ಭಾವಾವೇಶ, ದ್ವೇಷ, ಗರ್ವ, ಮತ್ಸರ, ಅಸೂಯೆ, ಅಹಂಕಾರ—ಈ ಕಳ್ಳರು ಜನರ ಮನಸ್ಸುಗಳೆಂಬ ಮನೆಗೆ ನುಗ್ಗುವುದಿಲ್ಲ. ಅಲ್ಲಿರುವ ದಿವ್ಯ ಆಸ್ತಿಗಳಾದ ಧರ್ಮ, ದಯೆ, ಸತ್ಯ, ಪ್ರೇಮ, ಜ್ಞಾನ ಮತ್ತು ವಿವೇಕಗಳು ಹಾನಿಗೊಳ್ಳದೆ ಕ್ಷೇಮವಾಗಿರುತ್ತವೆ. ಪೊಲೀಸರೂ ಆಡಳಿತಗಾರರೂ ಕೇವಲ ಹೊರಗಿನ ಶತ್ರುಗಳನ್ನು ಗೆಲ್ಲುತ್ತಾರೆ. ಆದರೆ ಒಳಗಿನ ಶತ್ರುಗಳನ್ನು ನಾಶ ಮಾಡುವ ಶಕ್ತಿ ಅವರಿಗಿಲ್ಲ. ಆ ಕೆಲಸ ಅಸಾಧ್ಯವೆಂದು ಅವರಿಗನ್ನಿಸುತ್ತದೆ. ಅವರು ಅದಕ್ಕೆ ತಕ್ಕ ಅಧಿಕಾರಿಗಳಲ್ಲ. ಒಳಗಿನ ಶತ್ರುಗಳೆಂದರೆ ಮನುಷ್ಯನೊಳಗೆ ಸೇರಿಕೊಂಡು ವರ್ತಿಸುತ್ತಿರುವ ಆರು ಶತ್ರುಗಳು—ಅರಿಷಡ್ವರ್ಗ. ಅದನ್ನು ಸಜ್ಜನರ ಬೋಧನೆಗಳಿಂದ, ಭಗವತ್ ಪ್ರೇಮದಿಂದ, ದೈವದ ಅರಿವಿನಿಂದ, ಪವಿತ್ರಾತ್ಮರ ಹಾಗೂ ಮಹಾಪುರುಷರ ಸಹವಾಸದಿಂದ ಬೇರುಸಮೇತ ಕಿತ್ತುಹಾಕಬಹುದು. ಕಳ್ಳರನ್ನು ಹಿಡಿಯಬೇಕಾದ ಪೊಲೀಸರೂ ಅಧಿಕಾರಿಗಳೂ ತಾವೇ ಅವರನ್ನು ಅವಲಂಬಿಸಿದರೆ, ದುಷ್ಟರ ಕೈಗೆ ಸಿಕ್ಕಿ ಜಗತ್ತು ಅಸಾಧ್ಯವಾದ ಹಾನಿಯನ್ನು ಅನುಭವಿಸುತ್ತದೆ. ಹಾಗೆಯೇ ಬ್ರಹ್ಮನಿಷ್ಠರೂ ಶ್ರೇಷ್ಠ ಸಾಧುಗಳೂ ಲೋಕ ಕಲ್ಯಾಣದ ಧ್ಯೇಯವನ್ನು ಬಿಟ್ಟು ಇಂದ್ರಿಯ ಸುಖ ಮತ್ತು ಕಾಮನೆಗಳಿಗೆ, ಹೆಸರು, ಕೀರ್ತಿಗಳ ಮೋಹಕ್ಕೆ ತುತ್ತಾದರೆ ಜಗತ್ತು ಅಜ್ಞಾನದ ಕತ್ತಲೆಯಲ್ಲಿ ಮುಳುಗುತ್ತದೆ ಮತ್ತು ಧರ್ಮವು ನಾಶವಾಗುತ್ತದೆ. ಈಗ ಪರಿಸ್ಥಿತಿ ಹೀಗಿದೆ. ಆದ್ದರಿಂದಲೇ ದುಃಖವೂ ಅಧಿಕವಾಗಿದೆ. ಈ ಎರಡೂ ವರ್ಗಗಳು ಸರಿಯಾದ ಮನೋಭಾವವನ್ನು ತಳೆದರೆ, ಸರ್ವರ ಕ್ಷೇಮವನ್ನು ಮನಸ್ಸಿನಲ್ಲಿಟ್ಟುಕೊಂಡು ಭಗವಂತನ ಸರ್ವಶಕ್ತಿತ್ವವನ್ನು ಕುರಿತು ಆಲೋಚನೆ ಮಾಡುತ್ತಿದ್ದರೆ ಅಂದು ಜಗತ್ತು ಶಾಂತಿ ಮತ್ತು ಆನಂದಗಳಲ್ಲಿ ಮುಳುಗುತ್ತದೆ. ಇವೆರಡೂ ಮನುಷ್ಯನ ಎರಡು ರಾಜ್ಯಗಳ ಸರಕಾರಗಳು. ಆಧ್ಯಾತ್ಮಿಕ ನಾಯಕರು ಒಳಗಿನ ದೇಶಕ್ಕೆ ಅರಸರು; ಆಡಳಿತಗಾರರು ಹೊರಗಿನ ದೇಶದ ನಾಯಕರು. ಈ ಎರಡೂ ಗುಂಪುಗಳು ಸರಿಯಾದ ರೀತಿಯಲ್ಲಿ ವರ್ತಿಸಿದ್ದೇ ಆದರೆ, ಎರಡು ದೇಶಗಳೂ ಸಂತೋಷವನ್ನು ಉತ್ಪಾದಿಸುತ್ತವೆ. ಆದ್ದರಿಂದ ಇಂದು ವ್ಯಕ್ತವಾಗುತ್ತಿರುವ ದುಃಖದ ಹೊಣೆಯನ್ನು ಎರಡೂ ಗುಂಪುಗಳು

ವಹಿಸಿಕೊಳ್ಳಬೇಕಾಗುತ್ತದೆ. ಇಂತಹ ಸಮಯಗಳಲ್ಲೇ ಭಗವಂತನು ಎಲ್ಲರಿಗೂ ಸಂತೋಷ ತರುವ ಹಾಗೂ ಅಜ್ಞಾನ ಮತ್ತು ಅನ್ಯಾಯಗಳನ್ನು ದಮನ ಮಾಡುವ ಭರವಸೆಯನ್ನು ನೀಡುತ್ತಾನೆ. ಇದನ್ನು ಸ್ಪಷ್ಟಪಡಿಸಲೆಂದೇ ಭಗವಂತನು ಗೀತೆಯಲ್ಲಿ ಹೇಳಿ ದ್ದಾನೆ.

> ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ
> ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ।

ಓ ಭಾರತೀಯನೆ, ಧರ್ಮವು ಅವನತಿಗೊಂಡಾಗಲೆಲ್ಲಾ ಅಧರ್ಮವು ತಲೆಯೆತ್ತಿದಾಗಲೆಲ್ಲಾ ನಾನು ಅವತರಿಸುತ್ತೇನೆ. ನಿಜವಾಗಿ ಹೇಳಬೇಕೆಂದರೆ, ಭಗವಂತನು ಅವತರಿಸಿ ಬರಬೇಕಾದರೂ ಮಹಾಪುರುಷರ ಪ್ರಾರ್ಥನೆಯ ಆಹ್ವಾನ ಬೇಕು. ಹೊರಜಗತ್ತಿನಲ್ಲಿ ಪ್ರಜೆಗಳಿಗೆ ಏನಾದರೂ ಅನುಕೂಲ ಅಥವಾ ನೆರವು ಬೇಕಾದರೆ ಅವರು ಆಡಳಿತಗಾರರ ಬಳಿಗೆ ಹೋಗಿ ತಮ್ಮ ಕೋರಿಕೆಯನ್ನು ಸಲ್ಲಿಸುತ್ತಾರೆ. ಹಾಗೆಯೇ ಒಳಗಿನ ದೇಶದಲ್ಲಿ ಭಕ್ತಿ, ಧರ್ಮ, ಸತ್ಯ, ಶಾಂತಿಗಳನ್ನು ಗಳಿಸಲು ಸಾಧ್ಯವಾಗದೆ ಹೋದಾಗ ಹಿರಿಯರು, ಸಜ್ಜನರು ತಮ್ಮಲ್ಲೇ ಭಗವಂತನಿಗೆ ಮೊರೆಯಿಡುತ್ತಾರೆ. ಅವರ ಪ್ರಾರ್ಥನೆಗಳನ್ನು ಕೇಳಿ ಅವನು ಜಗತ್ತಿನಲ್ಲಿ ಅವತರಿಸುತ್ತಾನೆ. ಅವರ ಮೇಲೆ ತನ್ನ ಅನುಗ್ರಹದ ಮಳೆಗರೆಯುತ್ತಾನೆ. ಇದು ಎಲ್ಲರಿಗೂ ತಿಳಿದಿರುವ ವಿಚಾರ. ಋಷಿಗಳ ಮೊರೆಯನ್ನು ಲಾಲಿಸಿ ರಾಮ ಮತ್ತು ಕೃಷ್ಣ ಇವರು ಅವತರಿಸಲಿಲ್ಲವೆ? ಇದನ್ನು ರಾಮಾಯಣ ಮತ್ತು ಭಾಗವತಗಳಲ್ಲಿ ಓದಿರುತ್ತೀರಿ. ಅಷ್ಟೇಕೆ ದೇವಾಂಶಸಂಭೂತರಾದ ರಾಮಕೃಷ್ಣರೂ ಕೂಡ, ಇಡೀ ಜಗತ್ತಿಗೆ ಧರ್ಮವನ್ನು ಬೋಧಿಸುವಂತಹ, ಅನ್ಯಾಯ ಹಾಗೂ ಸ್ವಾರ್ಥಗಳನ್ನು ಹೋಗಲಾಡಿಸುವಂತಹ ಒಬ್ಬ ಮಹಾತ್ಮನನ್ನು ಕಳುಹಿಸಿಕೊಡಬೇಕೆಂದು ಕಾಳಿಮಾತೆಯನ್ನು ಬೇಡಿದರು. ಅವರ ಜೀವನ ಚರಿತ್ರೆಯನ್ನು ಓದಿರುವವರೆಲ್ಲರಿಗೂ ಇದು ತಿಳಿದಿದೆ. ಆದ್ದರಿಂದ ಒಂದು ಕೆಲಸವಾಗಬೇಕಾದರೆ ಮತ್ತೆ ಮತ್ತೆ ಮೊರೆಯಿಡಲೇಬೇಕಾಗುತ್ತದೆ. ಭಗವಂತನು ಬರಲಿಲ್ಲವೆಂದು ಯಾರೂ ಹತಾಶರಾಗಿ ಪ್ರಾರ್ಥನೆಯನ್ನು ಕೈಬಿಟ್ಟು ಬಿಡಬಾರದು. ಹೊರಗಿನ ಜಗತ್ತಿನಲ್ಲಿ ವ್ಯಕ್ತಿಯು ತನ್ನ ಕೆಲಸವಾಗಬೇಕಾದರೆ ಎಷ್ಟು ಮನವಿಗಳನ್ನು ಬರೆಯಬೇಕು, ಎಷ್ಟು ಅಲೆದಾಡಬೇಕು? ಕೊನೆಯಲ್ಲಿ ಕೆಲಸ ಈಡೇರದೆಯೂ ಹೋಗಬಹುದು!

ಆತ್ಮದ ಹಂಬಲದ ಪರಿಣಾಮವೇನೆಂದು ಒಬ್ಬನು ತಿಳಿದುಕೊಳ್ಳುವುದು ಹೇಗೆ? ಇದನ್ನು ತಿಳಿದುಕೊಳ್ಳುವುದು ಸಾಧ್ಯವಿಲ್ಲವಾದ್ದರಿಂದ ಜಗತ್ತಿನಲ್ಲಿ ಆನಂದವು ಸ್ಥಾಪನೆಗೊಳ್ಳುವವರೆಗೂ ಪ್ರಾರ್ಥಿಸುತ್ತಲೇ ಇರಬೇಕು. ಪ್ರಪಂಚವು ಆನಂದಮಯವಾಗುವುದು ಅವನು ಆಗಮಿಸಿದುದರ ಸಂಕೇತ. ಇದನ್ನು ಅರ್ಥಮಾಡಿಕೊಂಡ ಪಕ್ಷದಲ್ಲಿ ಅವತಾರವನ್ನು ಒಡನೆಯೇ ಸುಲಭವಾಗಿ ಗುರುತಿಸಬಹುದು. ಸತ್ಯದ

ಧರ್ಮ, ದಯೆಯ ಧರ್ಮ, ಜ್ಞಾನದ ಧರ್ಮ ಮತ್ತು ಪ್ರೇಮದ ಧರ್ಮಗಳು ಆಗ ಬೆಳೆಯುತ್ತವೆ, ಅಭಿವೃದ್ಧಿ ಪಡೆಯುತ್ತವೆ. ಆದ್ದರಿಂದ ಇವು ಆಳವಾಗಿ ಬೇರೂರುವವರೆಗೂ ಜನರು ತಮ್ಮ ಪ್ರಾರ್ಥನೆಗಳನ್ನು ಮುಂದುವರಿಸಲೇಬೇಕು. ಅದು ಜನರ ಹೊಣೆಗಾರಿಕೆ. ಮಹಾತ್ಮರು ಹಾಕಿಕೊಟ್ಟ ಮಾರ್ಗವನ್ನು ಆಗಾಗ ದುರಸ್ತಿಪಡಿಸಬೇಕಾಗಿದೆ. ಆ ಮಾರ್ಗದಲ್ಲಿ ಪ್ರಯಾಣ ಮಾಡುವವರೋ ಅಥವಾ ಅದರ ಮೇಲೆ ತಮ್ಮ ಅಧಿಕಾರವಿರುವವರೋ ಈ ಕೆಲಸ ಮಾಡಬೇಕು. ಅದೇ ಬೋಧೆ ಎನ್ನುವುದು.

ಅಂತಹ ದುರಸ್ತಿ ಕಾರ್ಯಗಳಿಗಾಗಿ ಭಗವಂತನು ಆಗಾಗ ಕೆಲವು ಅಧಿಕೃತ ವ್ಯಕ್ತಿಗಳನ್ನು, ಸಂತರನ್ನು, ದಿವ್ಯಪುರುಷರನ್ನು ಕಳುಹಿಸುತ್ತಾನೆ. ಇವರ ಸದ್ಬೋಧೆ ಅಥವಾ ಸದುಪದೇಶದಿಂದ ಹಿಂದಿನ ದೇವ ಮಾನವರು ಹಾಕಿಕೊಟ್ಟ ಮಾರ್ಗವು ಮತ್ತೊಮ್ಮೆ ಸ್ಪಷ್ಟವಾಗುತ್ತದೆ, ಸಲೀಸಾಗುತ್ತದೆ. ಹೀಗೆ ಈಶ್ವರೇಚ್ಛೆ, ಸಾಧುಗಳ ಅಗತ್ಯ, ಮಹಾಪುರುಷರ ಬೋಧನೆಗಳು ಒಟ್ಟುಗೂಡಿದ ಪರಿಣಾಮವಾಗಿ ಜಗತ್ತಿನ ಸಂತೋಷವು ಖಚಿತವಾಗುತ್ತದೆ. ಕೊರತೆಯಾಗದಂತೆ ಅದು ಬೆಳೆಯುತ್ತದೆ. ಸಮಸ್ತ ಮಾನವ ಜನಾಂಗವೂ ಒಟ್ಟುಗೂಡಿ ಅಶಾಂತಿ, ಅನ್ಯಾಯ, ಅವ್ಯವಸ್ಥೆ, ಮತ್ತು ಅಸತ್ಯಗಳನ್ನು ಶಾಂತಿ, ಸತ್ಯ, ಪ್ರೇಮ, ಪರಸ್ಪರ ಸೇವೆಗಳಾಗಿ ಪರಿವರ್ತಿಸು ಎಂದು ಏಕಕಾಲದಲ್ಲಿ ಬೇಡಿದರೆ ಪರಿಸ್ಥಿತಿಯು ಖಂಡಿತವಾಗಿಯೂ ಸುಧಾರಿಸುತ್ತದೆ. ಇದಲ್ಲದೆ ಬೇರೆ ದಾರಿಯೇ ಇಲ್ಲ. ಅದಕ್ಕಾಗಿ ನಿರಾಶರಾಗಬೇಕಾಗಿಲ್ಲ. ದೌರ್ಬಲ್ಯ, ಬಲಹೀನತೆಗಳನ್ನು ಹೇಳಿಕೊಳ್ಳುವುದು ಮನುಷ್ಯನ ಸಹಜ ಸ್ವಭಾವಕ್ಕೆ ವಿರುದ್ಧವಾಗಿದೆ. ಆದ್ದರಿಂದ ಬೇರೆ ಮಾರ್ಗಗಳನ್ನು ಹುಡುಕುವುದನ್ನು ಕೈಬಿಟ್ಟು, ಜನರು ಪ್ರಾರ್ಥನೆ, ಇತರರಿಗೆ ಸೇವೆ, ಪರಸ್ಪರ ಪ್ರೇಮ ಮತ್ತು ಗೌರವ ಈ ಮಾರ್ಗವನ್ನು ಅನುಸರಿಸಬೇಕು. ಅವರು ಇನ್ನು ಎಷ್ಟು ಮಾತ್ರಕ್ಕೂ ಕಾಯಬಾರದು; ಬೇಗನೆಯೇ ಅವರು ತೃಪ್ತಿ, ಸಂತೋಷಗಳನ್ನು ಪಡೆಯುತ್ತಾರೆ.

'ಮಾನವ ಸೇವೆಯೇ ಮಾಧವ ಸೇವೆ' ಎಂದು ಹೇಳುತ್ತಾರೆ. ಅದು ಸತ್ಯವಾದ ಉಕ್ತಿ. ಮಾನವ ಸೇವೆಯು ಪವಿತ್ರವಾದರೂ ಅದಕ್ಕಿಂತ ಉತ್ತಮವಾದ ಆದರ್ಶದಲ್ಲಿ ಅದು ಲೀನವಾಗದೆ, ಸೇವೆಯು ಎಷ್ಟೇ ದೊಡ್ಡದಾಗಿದ್ದರೂ ಅದರಿಂದ ಪ್ರಯೋಜನವಿಲ್ಲ. ಮಾನವನ ದೈವತ್ವದಲ್ಲಿ ನಂಬಿಕೆಯನ್ನಿಡದೆ, ಮಾಡಿದ ಕೆಲಸಗಳ ಫಲಗಳ ಮತ್ತು ಕೀರ್ತಿಯ ಮೇಲೆ ದೃಷ್ಟಿಯಿಟ್ಟು ಸೇವೆ ಮಾಡುತ್ತಾ ಹೇಳಿಕೆಯನ್ನು ಮತ್ತೆ ಮತ್ತೆ ಹೇಳಿಕೊಳ್ಳುವುದರಿಂದ ಏನೂ ಪ್ರಯೋಜನವಿಲ್ಲ. ವ್ಯಕ್ತಿಯು ಯಾವುದೇ ಕೆಲಸ ಮಾಡಲಿ, ಭಗವದ್ಧ್ಯಾನವನ್ನು ನಿರಂತರ ಸಂಗಾತಿಯನ್ನಾಗಿ ಇರಿಸಿಕೊಂಡುದೇ ಆದರೆ, ಮಾನವನ ಮೂಲಭೂತ ದೈವತ್ವದ ಬಗೆಗೆ ನಂಬಿಕೆಯನ್ನಿಟ್ಟುಕೊಂಡಿದ್ದರೆ, ಆಗ ಮಾನವ ಸೇವೆಯೇ ಮಾಧವ ಸೇವೆ ಎಂಬ ಉಕ್ತಿಗೆ ಸಮರ್ಥನೆ ದೊರಕುತ್ತದೆ. ಮಾಧವನ ಚಿಂತನೆಯಿಲ್ಲದೆ ಮಾಧವ ಸೇವೆ ಉಗಮವಾಗುವುದಾದರೂ ಹೇಗೆ?

ಆ ಮಾತುಗಳೆಲ್ಲ ಬರಿಯ ಪ್ರದರ್ಶನ ಅಷ್ಟೆ. ನಾನು ಅದನ್ನು ಒಪ್ಪುವುದಿಲ್ಲ. ಅದಕ್ಕೆ ಬದಲು, ಭಗವಂತನನ್ನು ಮನಸ್ಸಿನಲ್ಲಿ ಇಟ್ಟುಕೊಂಡು, ಸತ್ಯದ ಹಾದಿಯಲ್ಲಿ, ಧರ್ಮನಿಯಮಗಳ ಪ್ರಕಾರ ಏನನ್ನು ಮಾಡಿದರೂ ಅದು ಭಗವತ್ಸೇವೆಯಾಗುತ್ತದೆ. ಹೆಸರಿಗಾಗಿ, ಕೀರ್ತಿಗಾಗಿ ಫಲದ ಮೇಲೆ ದೃಷ್ಟಿಯಿಟ್ಟು ಏನನ್ನು ಮಾಡಿದರೂ ಅದು ಮಾಧವ ಸೇವೆಯೆನಿಸುವುದಿಲ್ಲ.

ವಾಸ್ತವವಾಗಿ ಭಗವಂತನ ಅನವರತ ಧ್ಯಾನದಲ್ಲಿ ಮುಳುಗಿರುವವರು ಬೇರೆ ಯಾವ ಕೆಲಸವನ್ನೂ ಮಾಡಬೇಕಾಗಿಯೇ ಇಲ್ಲ. ಅವರ ಪ್ರಾರ್ಥನೆಯ ಫಲವೊಂದೇ ಜಗತ್ತನ್ನು ಪವಿತ್ರಗೊಳಿಸಬಲ್ಲುದು. ಆದರೆ ಎಲ್ಲರೂ ಅದರಲ್ಲಿ ನಿರತರಾಗಿರಬೇಕಾಗಿಲ್ಲ. ಮೊದಲು ತಮ್ಮ ಮನಸ್ಸನ್ನು ಶುದ್ಧಗೊಳಿಸಿಕೊಂಡು, ಆಸೆಗಳನ್ನು ತಗ್ಗಿಸಿಕೊಂಡು ಆ ಹಂತವನ್ನು ತಲುಪಲು ಸಿದ್ಧಪಡಿಸಿಕೊಳ್ಳಬೇಕು. ಇದನ್ನು ಸಾಧಿಸಿರುವ ಸಾಧುಗಳು ತಮಗೆ ತಾವೇ ಸತ್ಯವನ್ನು ಅರಿಯಬಲ್ಲರು. ಇತರರು ಮಾನವ ಸೇವೆ ಮತ್ತು ಮಾಧವ ಸೇವೆಗಳ ಏಕತೆ ಯನ್ನು ಗ್ರಹಿಸಲಾರರು.

ಆದರೆ ಇದರಿಂದ ವ್ಯಕ್ತಿಯು ಸುಮ್ಮನೆ ಕುಳಿತುಕೊಳ್ಳಬೇಕೆಂದು ಅರ್ಥವಲ್ಲ. ಅದು ಒಬ್ಬೊಬ್ಬನ ವಿಧಿ. ಅವನ ಹಿಂದಿನ ಕರ್ಮಗಳು ಮತ್ತು ಅವನ ಸಾಧನೆಗಳನ್ನು ಅವಲಂಬಿಸಿರುತ್ತದೆ. ಅದು ಸಂಭವಿಸುವವರೆಗೂ ಧ್ಯಾನ ಮತ್ತು ಜಪಗಳಲ್ಲಿ ನಿರತರಾಗಿ. ಮನಸ್ಸು ಭಾವನೆಗಳ ತರಂಗಗಳಿಂದ ಮುಕ್ತವಾಗಿ ದಿವ್ಯರೂಪದಿಂದ ತುಂಬಲಿ. ಜೊತೆಗೆ ಇತರರ ಮೇಲ್ಮೆಗಾಗಿ ಕೆಲಸಗಳನ್ನು ನಿರ್ವಹಿಸಿ. ನಿಮ್ಮ ಸಮಯವನ್ನು ಪ್ರಪಂಚದ ಸೇವೆಗಾಗಿ ಮೀಸಲಾಗಿಡಿ. ಅದರ ಫಲ ಏನಾದರೂ ಇರಲಿ. ಈ ವಿಧಾನದಿಂದ ನೀವು ಧನ್ಯರಾಗಬಹುದು. ಇಲ್ಲದೆ ಹೋದರೆ, ದೇಹವು ನಿಷ್ಕ್ರಿಯವಾಗಿದ್ದರೂ ಮನಸ್ಸು ಕಾರ್ಯಮಗ್ನವಾಗಿದ್ದು ತನ್ನಷ್ಟಕ್ಕೆ ತಾನು ವಿವಿಧ ಕಾರ್ಯಗಳನ್ನು ಮಾಡುತ್ತಿರುತ್ತದೆ. ಅಂತಹ ಜನರು ಏನೂ ಮಾಡದೆ ಕುಳಿತಿದ್ದರೂ ಕರ್ಮಕ್ಕೆ ಬಲಿಯಾಗುತ್ತಾರೆ! ಆದರೆ ವ್ಯಕ್ತಿಯು ತನ್ನ ಮನಸ್ಸನ್ನು ಭಗವದ್ಧ್ಯಾನದಲ್ಲಿ ನೆಟ್ಟು, ಸತ್ಯವನ್ನು ಅನ್ವೇಷಿಸುತ್ತಾ ಅವನ ದೇಹವೂ ಇಂದ್ರಿಯಗಳೂ ಜಗತ್ತಿನ ಸೇವೆ ಎನಿಸುವ ಕರ್ಮಗಳನ್ನು ಮಾಡುತ್ತಿದ್ದರೂ ಅವುಗಳಿಂದ ಅವನು ಬಾಧಿತನಾಗುವುದಿಲ್ಲ. ಅವನು ಕರ್ಮ ಮಾಡುತ್ತಿದ್ದರೂ ಕರ್ಮರಹಿತನಾಗಿರುತ್ತಾನೆ. ಭಗವದ್ಗೀತೆಯ ಮಾತುಗಳಲ್ಲಿ ಈ ಪಾಠವು ಅಡಗಿದೆ. ಪವಿತ್ರ ಆಲೋಚನೆಗಳನ್ನು ಮನಸ್ಸಿನಲ್ಲಿ ಬೆಳೆಸದಿರುವ ವ್ಯಕ್ತಿಯ ಹೃದಯವು ಕೆಡುಕು, ದುಷ್ಟ ಪ್ರವೃತ್ತಿಗಳ ಸ್ವರ್ಗವಾಗುತ್ತದೆ. ಮೋಕ್ಷಕ್ಕಾಗಿ ಆಸೆಪಡುವವರು ಏಕಾಗ್ರತೆಯನ್ನು ಬಯಸುವವರು, ಉತ್ಕರ್ಷ ಸ್ಥಿತಿಗೆ ಏರಬಯಸುವವರು ಇದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಈ ಆತ್ಮಜ್ಞಾನವನ್ನು ಸಾಕ್ಷಾತ್ಕರಿಸಿಕೊಳ್ಳಲು ಜಾತಿಯಾಗಲಿ, ಸನ್ಯಾಸವಾಗಲಿ, ಯಾಗಾಚರಣೆಗಳಾಗಲಿ, ಶಾಸ್ತ್ರಾಧ್ಯಯನದಿಂದ ಗಳಿಸಿದ ವಿದ್ವತ್ತಾಗಲಿ ಗಣನೆಗೆ ಬರುವುದಿಲ್ಲ. ಬ್ರಹ್ಮನಿಷ್ಠೆಯೊಂದೇ ಇಲ್ಲಿ ಮುಖ್ಯವಾಗುವುದು. ಉಪನಿಷತ್ತು ಒತ್ತಿ ಹೇಳುವುದೂ ಇದನ್ನೇ:

ನಾಶ್ರಮಂ ಕಾರಣಂ ಮುಕ್ತೇಃ ದರ್ಶನಾನಿ ನಕಾರಣಂ
ತಥೈವ ಸರ್ವಕಾಮಾನಿ ಜ್ಞಾನಮೇವ ಹಿ ಕಾರಣಂ ।

ಜ್ಞಾನವೊಂದೇ ಮೋಕ್ಷಕ್ಕೆ ಕಾರಣ. ಆಶ್ರಮವೂ ಅಲ್ಲ, ದರ್ಶನವೂ ಅಲ್ಲ. ವ್ಯಕ್ತಿಯು ಸರ್ವವ್ಯಾಪೀ ಭಗವಂತನ ಧ್ಯಾನದಲ್ಲಿ ತನ್ನನ್ನು ನೆಲೆಗೊಳಿಸಿಕೊಳ್ಳುವುದಕ್ಕೆ ಕಾಲ ದೇಶಗಳ ಮಿತಿಯಿಲ್ಲ. ಅದಕ್ಕಾಗಿ ಪವಿತ್ರವಾದ ಸ್ಥಳವೆಂಬುದೊಂದಿಲ್ಲ, ಎಲ್ಲಿ ಮನಸ್ಸು ದೈವಧ್ಯಾನದಲ್ಲಿ ತೊಡಗುತ್ತದೆಯೋ ಅದೇ ಪವಿತ್ರವಾದ ಸ್ಥಳ! ಯಾವಾಗ ಧ್ಯಾನಿಸುತ್ತದೋ ಅದೇ ಪವಿತ್ರವಾದ ಸಮಯ! ಅಲ್ಲಿಯೇ ಆಗಲೇ ಭಗವಂತನನ್ನು ಧ್ಯಾನಿಸಬೇಕು. ಆದ್ದರಿಂದಲೇ ಈಗಾಗಲೇ ಹೀಗೆ ಹೇಳಿರುವುದು:

ನ ಕಾಲ ನಿಯಮೇ ಯಾತ್ರಾ ನ ದೇಶಸ್ಯ ಸ್ಥಲಸ್ಯ ಚ
ಯತ್ರಾಸ್ಯ ರಮತೇ ಚಿತ್ತಂ ತತ್ರ ಧ್ಯಾನೇ ನ ಕೇವಲಂ ।

ಭಗವದ್ಧ್ಯಾನಕ್ಕೆ ನಿಶ್ಚಿತವಾದ ಕಾಲವಾಗಲೀ ಸ್ಥಳವಾಗಲೀ ಇಲ್ಲ. ಮನಸ್ಸು ಎಲ್ಲಿ ಯಾವಾಗ ಧ್ಯಾನ ಮಾಡಲು ಬಯಸುತ್ತದೆಯೋ ಅದೇ ಆಗಲೇ ಸರಿಯಾದ ಸ್ಥಳ ಮತ್ತು ಕಾಲ.

ಅಂತಹ ಮಹಾತ್ಮರಿಂದ ಜಗತ್ತು ಸಮೃದ್ಧಿಯನ್ನು ಪಡೆಯುತ್ತದೆ. ಅವರ ಹೃದಯ ಗಳು ಶುದ್ಧವಾಗಿರುತ್ತವೆ, ನೆಲದ ಉಪ್ಪನ್ನು ಅವರು ಪ್ರತಿನಿಧಿಸುತ್ತಾರೆ. ಪ್ರತಿಯೊಬ್ಬ ವ್ಯಕ್ತಿಯೂ ಈ ನಿಮಿಷದಿಂದಲೇ ಅಂತಹ ಮಹಾತ್ಮರು ಬರಲೆಂದು ಪ್ರಾರ್ಥಿಸ ಬೇಕು. ಅವರ ಅನುಗ್ರಹಕ್ಕೆ ತಕ್ಕ ಅರ್ಹತೆಯನ್ನು ಗಳಿಸಿಕೊಳ್ಳಲು ಪ್ರಯತ್ನಿಸಬೇಕು. ಜಗತ್ತಿನ ಕಲ್ಯಾಣವನ್ನು ಸಾಧಿಸುವ ಪ್ರಯತ್ನದಲ್ಲಿ ತನಗೆ ಒದಗುವ ನೋವನ್ನು, ಕಷ್ಟವನ್ನು ಮರೆಯಲು ಪ್ರಯತ್ನಿಸಬೇಕು.

# ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ (ರೆ)

'ಸಾಯಿ ಗೀತಾಂಜಲಿ', ಜೇ.ಪೀ. ನಗರ, ಬೆಂಗಳೂರು ೫೬೦೦೭೮ ✆ +91 94488 08670

## ಪ್ರಕಟಣೆಗಳು

| # | ಶೀರ್ಷಿಕೆ | ₹ | # | ಶೀರ್ಷಿಕೆ | ₹ |
|---|---|---|---|---|---|
| 1 | ಸತ್ಯಂ ಶಿವಂ ಸುಂದರಂ – ಭಾಗ ೧ | 120 | 38 | ಶ್ರೀ ಸಾಯಿ ಸಂಕೀರ್ತನ | 10 |
| 2 | ಸತ್ಯಂ ಶಿವಂ ಸುಂದರಂ – ಭಾಗ ೨ | 72 | 39 | ಶ್ರೀ ಸತ್ಯಸಾಯಿ ಎಜುಕೇರ್ | 10 |
| 3 | ಸತ್ಯಂ ಶಿವಂ ಸುಂದರಂ – ಭಾಗ ೩ | 25 | 40 | ಭಕ್ತರಿಗೆ ಶ್ರೀ ಸತ್ಯಸಾಯಿ ಎಜುಕೇರ್ | 10 |
| 4 | ಸತ್ಯಂ ಶಿವಂ ಸುಂದರಂ – ಭಾಗ ೪ | 26 | 41 | ಬಾಲ ವಿಕಾಸ – ೧ | 80 |
| 5 | ಸತ್ಯಂ ಶಿವಂ ಸುಂದರಂ – ಭಾಗ ೫ | 65 | 42 | ಬಾಲ ವಿಕಾಸ – ೨ | 55 |
| 6 | ಸತ್ಯಂ ಶಿವಂ ಸುಂದರಂ – ಭಾಗ ೬ | 105 | 43 | ಬಾಲ ವಿಕಾಸ – ೩ | 70 |
| 7 | ಸತ್ಯಂ ಶಿವಂ ಸುಂದರಂ – ಭಾಗ ೭ | 130 | 44 | ಬಾಲ ವಿಕಾಸ ೧–೩ರ ಅನುಬಂಧ | 20 |
| 8 | ಶ್ರೀ ಸತ್ಯಸಾಯಿ ವಾಣಿ – ಭಾಗ ೧ | 35 | 45 | ಬಾಲವಿಕಾಸ ಗುರುಗಳ ಕೈಪಿಡಿ | 15 |
| 9 | ಶ್ರೀ ಸತ್ಯಸಾಯಿ ವಾಣಿ – ಭಾಗ ೨ | 35 | 46 | ಈಶ್ವರಮ್ಮ | 40 |
| 10 | ಶ್ರೀ ಸತ್ಯಸಾಯಿ ವಾಣಿ – ಭಾಗ ೩ | 30 | 47 | ಶ್ರೀ ಕೃಷ್ಣ – ಶ್ರೀ ಸತ್ಯಸಾಯಿ | 40 |
| 11 | ಶ್ರೀ ಸತ್ಯಸಾಯಿ ವಾಣಿ – ಭಾಗ ೪ | 46 | 48 | ಸಾಧನಾ, ಅಂತರ್ಮುಖಿ ಯಾತ್ರೆ | 38 |
| 12 | ಶ್ರೀ ಸತ್ಯಸಾಯಿ ವಾಣಿ – ಭಾಗ ೫ | 53 | 49 | ಭರವಸೆಯ ಹೊಂಗಿರಣ | 32 |
| 13 | ಶ್ರೀ ಸತ್ಯಸಾಯಿ ವಾಣಿ – ಭಾಗ ೬ | 25 | 50 | ಶ್ರೀ ಸತ್ಯಸಾಯಿ ಹೃದಯಸ್ಥಾಯಿ | 30 |
| 14 | ಶ್ರೀ ಸತ್ಯಸಾಯಿ ವಾಣಿ – ಭಾಗ ೭ | 30 | 51 | ಪ್ರಶಾಂತಿ ನಿಲಯಂ | 8 |
| 15 | ಶ್ರೀ ಸತ್ಯಸಾಯಿ ವಾಣಿ – ಭಾಗ ೮ | 35 | 52 | ವಾಕ್ಯ–ವಿಭೂತಿ | 10 |
| 16 | ಸತ್ಯಸಾಯಿ ವಾಹಿನಿ | 55 | 53 | ಸ್ವಾಮಿಯೆಡೆಗೆ ತಡೆಯೋಟ | 8 |
| 17 | ವಿದ್ಯಾ ವಾಹಿನಿ | 20 | 54 | ಹೆತ್ತವರ–ಪಾಲಕತ್ವದ ಪಾತ್ರ | 10 |
| 18 | ಜ್ಞಾನ ವಾಹಿನಿ | 15 | 55 | ಶ್ರೀ ಗುರುಚರಣ | 15 |
| 19 | ಉಪನಿಷತ್ ವಾಹಿನಿ | 20 | 56 | ಸಾಯಿತ್ರೀ | 30 |
| 20 | ಧ್ಯಾನ ವಾಹಿನಿ | 20 | 57 | ಶ್ರೀ ಸತ್ಯಸಾಯಿ ಅಷ್ಟೋತ್ತರಶತ ರತ್ನಮಾಲೆ | 18 |
| 21 | ಪ್ರೇಮ ವಾಹಿನಿ | 20 | 58 | ಜ್ಯೋತಿರ್ಧ್ಯಾನ | 13 |
| 22 | ಪ್ರಶಾಂತಿ ವಾಹಿನಿ | 20 | 59 | ಭಗವಲ್ಲೀಲಾ | 35 |
| 23 | ಪ್ರಶ್ನೋತ್ತರ ವಾಹಿನಿ | 20 | 60 | ಚಮತ್ಕಾರ ವಾಣಿ | 15 |
| 24 | ಧರ್ಮ ವಾಹಿನಿ | 25 | 61 | ಕೋಽಹಂ? ಸೋಽಹಂ! | 15 |
| 25 | ಸಂದೇಹ ನಿವಾರಿಣಿ | 25 | 62 | ನೀತಿ ಪಾಠಗಳು | 30 |
| 26 | ಸೂತ್ರ ವಾಹಿನಿ | 20 | 63 | ಸಂಧ್ಯಾವಂದನ ವಿಧಿ | 10 |
| 27 | ಲೀಲಾ ಕೈವಲ್ಯ ವಾಹಿನಿ | 10 | 64 | ಭಜನೆಗಳು | 10 |
| 28 | ಭಾಗವತ ವಾಹಿನಿ | 60 | 65 | ಶ್ರೀ ಸತ್ಯಸಾಯಿ ಹೃದಯಸ್ಥಾಯಿ (ಸಾರ ಸಂಗ್ರಹ) | 11 |
| 29 | ಗೀತಾ ವಾಹಿನಿ | 50 | 66 | ಆತ್ಮಾವಲೋಕನ | 10 |
| 30 | ರಾಮಕಥಾರಸ ವಾಹಿನಿ | 120 | 67 | ಅವತಾರ ಘೋಷಣೆ | 12 |
| 31 | ಶ್ರೀ ಸತ್ಯಸಾಯಿ ಆನಂದದಾಯಿ | 50 | 68 | ಶ್ರೀ ಸತ್ಯಸಾಯಿ ಪೂಜಾ ವಿಧಿ | 21 |
| 32 | ಶ್ರೀ ಸತ್ಯಸಾಯಿ ಆರಾಧನಾ ಸ್ತೋತ್ರ ಸೌರಭ | 12 | 69 | ರಸಪ್ರಶ್ನೆಗಳು ಶ್ರೀ ಸತ್ಯಸಾಯಿ ಬಾಬಾ | 20 |
| 33 | ಶ್ರೀ ಸತ್ಯಸಾಯಿ ಸಂಸ್ಥೆ (ಭಾರತ) – ನಿಯಮ ಮತ್ತು ನಿಬಂಧನೆಗಳು | 40 | 70 | ರಸಪ್ರಶ್ನೆಗಳು ರಾಮಾಯಣ | 16 |
| 34 | ಶ್ರೀ ಸತ್ಯಸಾಯಿ ದೃಷ್ಟಾಂತ ಸೌರಭ | 15 | 71 | ರಸಪ್ರಶ್ನೆಗಳು ಮಹಾಭಾರತ | 17 |
| 35 | ಸೂಕ್ತಿ ಸೌರಭ – ಭಾಗ ೧ | 10 | 72 | ರಸಪ್ರಶ್ನೆಗಳು ಭಾಗವತ | 17 |
| 36 | ಸೂಕ್ತಿ ಸೌರಭ – ಭಾಗ ೨ | 25 | 73 | ರಸಪ್ರಶ್ನೆಗಳು ಭಗವದ್ಗೀತೆ | 9 |
| 37 | ಸಾಯಿ ಭಜನೆಗೆ ಮಾರ್ಗದರ್ಶಿ ಸೂತ್ರಗಳು | 10 | 74 | ತ್ವಮೇವ ಮಾತಾ | 20 |
| | | | | ಮುಂದುವರಿದಿದೆ ... | |

ಪ್ರತಿಗಳ ಲಭ್ಯತೆಯನ್ನು ಸೊಸೈಟಿಯ ಕಛೇರಿಯಲ್ಲಿ ವಿಚಾರಿಸುವುದು.

# ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ (ರೆ)

‘ಸಾಯಿ ಗೀತಾಂಜಲಿ’, ಜೇ.ಪೀ. ನಗರ, ಬೆಂಗಳೂರು ೫೬೦೦೭೮ ✆ +91 94488 08670

## ಪ್ರಕಟಣೆಗಳು

| # | ಶೀರ್ಷಿಕೆ | ₹ | # | ಶೀರ್ಷಿಕೆ | ₹ |
|---|---|---|---|---|---|
| 75 | ನನ್ನ ಆಧ್ಯಾತ್ಮಿಕ ದಿನಚರಿ | 10 | 97 | Sri Sathya Sai, The Indweller | 15 |
| 76 | ಉತ್ಕೃಷ್ಟತೆಯೆಡೆಗೆ ನನ್ನ ವಿಕಾಸ | 8 | 98 | Guidelines for Sai Bhajans | 10 |
| 77 | ಅಮರಪುರಿಯ ಆನಂದ ಯಾತ್ರೆ | 10 | 99 | Balavikas - 1 | 75 |
| 78 | ಪರಮ ವೈದ್ಯ | 28 | 100 | Balavikas - 2 | 70 |
| 79 | ಶ್ರೀ ಸತ್ಯಸಾಯಿ ಪರಮಸುಖದಾಯಿ | 45 | 101 | Balavikas - 3 | * |
| 80 | ಯುಗಾವತಾರಿ ಶ್ರೀ ಸತ್ಯಸಾಯಿ | 60 | 102 | Supplement to Balavikas 1 | 10 |
| 81 | ನನ್ನ ನೆಚ್ಚಿನ ಬಾಬಾ | 45 | 103 | Supplement to Balavikas 2 | 10 |
| 82 | ಸೇವೆಯೇ ಸಾಧನೆ | 31 | 104 | Supplement to Balavikas 3 | 10 |
| 83 | ಶ್ರೀ ಸತ್ಯಸಾಯಿ ಗೀತೆ | 36 | 105 | Sri Sathya Sai Educare | 10 |
| 84 | ವಿದ್ಯಾ ಸಂಸ್ಥೆಗಳಲ್ಲಿ ನೈತಿಕ ವಿದ್ಯೆಯ ಅವಶ್ಯಕತೆ | 10 | 106 | Sai Educare for Devotees | 10 |
| 85 | ವೇದ ಮಂಜರಿ | 60 | 107 | Sandhyavandana Vidhi | 10 |
| 86 | ವೇದ ಮಂತ್ರಗಳು (ಬಾಲವಿಕಾಸ ಮಕ್ಕಳಿಗಾಗಿ) | 30 | 108 | Sainama Kirtana Kaliyuga Sadhana | 100 |
| 87 | ಶ್ರೀ ಸತ್ಯಸಾಯಿ ಸಂಸ್ಥೆಗಳ ಮಾರ್ಗದರ್ಶಿ ಸೂತ್ರಗಳು | 25 | 109 | Educare, Veda of Twenty First Century | 60 |
| 88 | ಶ್ರೀ ಸತ್ಯಸಾಯಿ ಮಧುರ ಸ್ಮೃತಿ | 60 | 110 | Namo Namah Sri Guru Padukabyam | 60 |
| 89 | ಭಾರತದ ಸಂತರು | 50 | 111 | Sri Sathya Sai Balvikas: The Pathway to Excellence–2 | * |
| 90 | ಶ್ರೀ ಸತ್ಯಸಾಯಿ ಮುರುಗನ ಕರುಣಾಮೃತ | 40 | 112 | Brindamrutam | 225 |
| 91 | ದಿವ್ಯ ಪಥ ಭಾಗ – ೧ | 50 | 113 | Sri Sathya Sai Madhura Smrithi | 90 |
| 92 | ಹರಿ ಭಜನ ಬಿನಾ | 30 | 114 | Bhagavallila | 35 |
| 93 | ಒಂದು ದಿವ್ಯ ಜೀವನ | 63 | | | |
| 94 | ದಿವ್ಯ ತಪ | 40 | | | |
| 95 | ಬಾಲ ವಿಕಾಸ ಮಕ್ಕಳ ನಾಟಕಗಳು | 65 | | | |
| 96 | ಸತ್ಯಸಾಯಿ ಈಗಲೂ ಇದ್ದಾರೆ | 105 | | | |

ಪ್ರತಿಗಳ ಲಭ್ಯತೆಯನ್ನು ಸೊಸೈಟಿಯ ಕಛೇರಿಯಲ್ಲಿ ವಿಚಾರಿಸುವುದು.